# ವಿಕ್ಟರಿ

## ಬಿ.ವಿ. ಅನಂತರಾಮ್



ಗ್ರಂಥ ಸ್ವಾಮ್ಯ ವಿಭಾಗ

DEPARTMENT OF PUBLIC LIBRARIES
COPY RIGHT
BUREAU
STATE CENTRAL LIBRARY, BANGALORE

9661
1995
(2)

# ಫೈನಲ್ ವಿಕ್ಟರಿ

ಬಿ.ವಿ. ಅನಂತರಾಮ್

META ENTERED

ಪ್ರತಿಭ ಪ್ರಕಟಣೆ-6

ಬಿ.ವಿ. ಅನಂತರಾಮ್

# ಫೈನಲ್ ವಿಕ್ಟರಿ

ಪ್ರತಿಭ ಪ್ರಕಾಶನ
ಮಲ್ಲೇಶ್ವರಂ
'ಬೆಂಗಳೂರು - 560 003

ಪ್ರತಿಭ
ಪ್ರಕಾಶನ

'FINAL VICTORY'

A Novel by

B. V. ANANTHARAM

ANA N95

Published by

M/s. PRATHIBA PRAKASHANA
No. 55 (Old No. 23)
6th Cross, Swimming Pool Extension
Malleswaram

BANGALORE - 560 003.

First Edition : 1995 Price : Rs 24/-

ಪುಟಗಳು : 96

637598 CR

ಪ್ರಥಮ ಮುದ್ರಣ : 1995

ಸ್ವಾಮ್ಯ : **ಲೇಖಕರದು**

ಮುಖಪುಟ ವಿನ್ಯಾಸ : **ಎಂ. ಮೋಹನ್**

**ಬೆಲೆ : ರೂ. 24/-**

ಮುದ್ರಣ : **ಅಶ್ವಿನಿ ಗ್ರಾಫಿಕ್ಸ್**
ನಂ. J/34, ಅಟ್ಟಿ ಮಾರಮ್ಮನ ಗುಡಿಬೀದಿ
ಕಾಟನ್‌ಪೇಟೆ, ಬೆಂಗಳೂರು-53

ಡಿ.ಟಿ.ಪಿ. : **ಸತ್ಯ ಡಿ.ಟಿ.ಪಿ. ಸಿಸ್ಟಮ್ಸ್**
ನಂ. 7, ಪಿ.ಎಸ್. ಲೇನ್
3ನೇ ಕ್ರಾಸ್, ಕಾಟನ್‌ಪೇಟೆ, ಬೆಂಗಳೂರು-53

# ಮುನ್ನುಡಿ...

**ಆತ್ಮೀಯ ಓದುಗ ಗೆಳೆಯ, ಗೆಳತಿಯರೇ,**

**'ಪ್ರತಿಭಾ ಪ್ರಕಾಶನ'**ದ ಚಿರಂಜೀವಿ
**ಎಂ.ಆರ್. ಗುರುಪ್ರಸಾದ್** 'ಜಿಂಕೆ'ಯ ಈ ಹೊಸದೊಂದು
ಅಸೈನ್‌ಮೆಂಟ್ **'ಫೈನಲ್ ವಿಕ್ಟರಿ'** ಕಾದಂಬರಿಯನ್ನು ನಿಮ್ಮ
ಕೈಯಲ್ಲಿಡುತ್ತಿದ್ದಾರೆ. ಚೊಕ್ಕ ಮುದ್ರಣ, ಸುಂದರ,
ಅತ್ಯಾಕರ್ಷಕ ಆಫ್‌ಸೆಟ್ ಕವರ್ ಜೊತೆಗೆ ಖುದ್ದಾಗಿ
ಶ್ರಮವಹಿಸಿ ಪುಸ್ತಕ ಮುದ್ದಾಗಿ ಮೂಡಿಬರುವಂತೆ
ಮಾಡಿರುವ ಅವರಿಗೆ,

ಮುಖಪುಟವನ್ನು ಕ್ಲಾಸಿಕ್ ಆಗಿ ಕೊಲಾಜ್ ಮಾಡಿರುವ
**ಶ್ರೀಯುತ ಎಂ. ಮೋಹನ್**‌ರ ಕುಂಚ ಪ್ರತಿಭೆಗೆ,

ಅಕ್ಷರ ಜೋಡಣೆಯಲ್ಲೂ ಒಂದು ಅಂದವಿದೆ ಎಂಬುದನ್ನು
ನವಿರಾಗಿ ತಮ್ಮ ಡಿಟಿಪಿ ಮೂಲಕ ನಿರೂಪಿಸುತ್ತಿರುವ
**'ಸತ್ಯ ಡಿ.ಟಿ.ಪಿ. ಸಿಸ್ಟಮ್ಸ್'** ನವರಿಗೆ,

ಪ್ರತಿ ಪುಟವೂ ರಮ್ಯವಾಗಿ ಕಾಣುವಂತೆ ಅಂದವಾಗಿ
ಮುದ್ರಿಸಿರುವ **'ಅಶ್ವಿನಿ ಗ್ರಾಫಿಕ್ಸ್'** ಅವರಿಗೆ,
**ನನ್ನ ಕೃತಜ್ಞತೆಗಳು.**

ಪುಸ್ತಕ ನಿಮ್ಮ ಕೈನಲ್ಲಿದೆ. ಓದಿ ಹೇಗಿದೆಯೆಂಬುದನ್ನು
ತಿಳಿಸುವಿರಲ್ಲವೇ?

ವಿಶ್ವಾಸವಿರಲಿ,

1652, ಪ್ರಕಾಶನಗರ — ***-ಬಿ. ವಿ. ಅನಂತರಾಮ್***
ಮೂರನೇ ಹಂತ
ಬೆಂಗಳೂರು - 560 021

# ನಮ್ಮ ಪ್ರಕಟಣೆಗಳು 1995

**ಎಂ.ಎಲ್ ರಾಘವೇಂದ್ರ ರಾವ್ ಅವರ**

| | |
|---|---|
| ನೀನೇ ನನ್ನ ಮೊದಲ ಶತ್ರು | 50-00 |
| ಅತೀಂದ್ರಿಯ ವಿಜ್ಞಾನ | 14-00 |

**ಬಿ.ವಿ. ಅನಂತರಾಮ್**

| | |
|---|---|
| ಬ್ಲೂ ಐಸ್ ಬ್ಯೂಟಿ | 25-00 |
| ಫೈನಲ್ ವಿಕ್ಟರಿ | 24-00 |
| ಕಲರ್‌ಫುಲ್ ಮರ್ಡರ್ಸ್ | 20-00 |

**ವಾಣಿಪ್ರಿಯ**

| | |
|---|---|
| ನ್ಯೂಮರಾಲಜಿ (ಸಂಖ್ಯಾ ಶಾಸ್ತ್ರ) | 20-00 |
| ಆಯಿಲ್ ಪುಲ್ಲಿಂಗ್ | 10-00 |
| ನಿತ್ಯಾರ್ಚನಾ ಮಾಲಾ | 10-00 |

---

## ನಮ್ಮ ಮುಂದಿನ ಪ್ರಕಟಣೆ

ಶಾತವಾಹನ/ ಆರ್.ಪಿ. ಕಟ್ಟೀಮನಿ

**ಸಂಭವಾಮಿ**

**ಪ್ರತಿಭ ಪ್ರಕಾಶನ**

ಮಲ್ಲೇಶ್ವರಂ, ಬೆಂಗಳೂರು-560 003

ಇದು ಪ್ರತಿಭಾ ಪ್ರಕಾಶನದ ಪ್ರಕಟಣೆ

# ಫೈನಲ್ ವಿಕ್ಟರಿ

ಬಿ.ವಿ. ಅನಂತರಾಮ್

# ಫೈನಲ್ ವಿಕ್ಟರಿ

"ನೀನು ತಲೆ ಕೆಳಗಾಗಿ ನಿಂತು ತಪಸ್ಸು ಮಾಡಿದರೂ ಈ ಜೈಲ್‌ನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಫ್ರೆಂಡ್...! ನಿನ್ನಾಸೆ ನೆರವೇರದೆಂದು ಹೇಳಲು ವಿಷಾದಿಸುತ್ತೇನೆ."

ಕಣ್ಣು ಮುಚ್ಚಿಕೊಂಡೇ ತನ್ನ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಗೊಳಿಸಿದ ಆ ಕೈದಿ.

ಮುಖಕ್ಕೆ ಎಳೆದು ಪಂಚ್ ಮಾಡಿದಂತಾಗಿ ಕಕ್ಕಾಬಿಕ್ಕಿಯಾದ ಮಹೇಶ. ಇದುವರೆಗೆ ಅವನ ಮನವನ್ನು ಆವರಿಸಿಕೊಂಡಿದ್ದ ಯೋಚನೆಗಳು ಪಟ್ಟನೆ ಪರಾರಿಯಾದವು.

ಜೀರೋ ವೋಲ್ಟ್ ಬಲ್ಬೊಂದು ಸೆಲ್‌ನಲ್ಲಿ ಬೆಳಗುತ್ತಿತ್ತು.

ಅಲ್ಲಿ ಇಬ್ಬರೇ ಇದ್ದರೀಗ.

ಕಣ್ಣೆಯುಜ್ಜಿಕೊಳ್ಳುತ್ತಾ ತಲೆ ತಿರುಗಿಸಿ, ತನ್ನ ಸಹ ಕೈದಿಯ ಕಡೆಗೆ ನೋಡಿದ ಮಹೇಶ.

ಆಗಲೂ ಕಣ್ಣು ತೆರೆದಿರಲಿಲ್ಲ ಆ ಕೈದಿ.

ಚಕಿತನಾದ ಮಹೇಶ. ತನ್ನ ಮನಸ್ಸಿನಾಲೋಚನೆಗಳನ್ನು ಹೇಗೆ ಗ್ರಹಿಸಿದ ಇವನು? ಟೆಲಿಪತಿಯಲ್ಲೇನಾದರೂ ಪರಿಣಿತನಿರಬಹುದೇ? ಅಟ್‌ಲೀಸ್ಟ್ ತನ್ನ ಮುಖವನ್ನಾದರೂ ನೋಡದೆ ಅಷ್ಟು ಪರ್ಫೆಕ್ಟಾಗಿ ಹೇಗೆ ಹೇಳಿದ?

ತನ್ನ ಸೆಲ್‌ಮೇಟ್ ಸಾಮಾನ್ಯನಲ್ಲವೆಂದು, 'ಆ' ಅಂದರೆ ಹಲ್ಲೆಣಿಸಬಲ್ಲ ಸಮರ್ಥನೆಂದು ಅರ್ಥ ಮಾಡಿಕೊಂಡ ಮಹೇಶ.

ಆಗ ವೇಳೆ ರಾತ್ರಿ ಒಂಬತ್ತಾಗಿತ್ತು.

''ಬಂದಾಗಿನಿಂದ ನೋಡುತ್ತಿದ್ದೇನೆ. ನಿನ್ನ ರೀತಿಯೇ ನನಗೇಕೋ ಹಿಡಿಸಲಿಲ್ಲ ಫ್ರೆಂಡ್ಸ್! ಹಾಳು ಯೋಚನೆಗಳಿಗೆ ಬೈ ಬೈ ಹೇಳಿ, ನೆಮ್ಮದಿಯಾಗಿ ನಿದ್ರಿಸು.''

ಕಣ್ಣು ತೆರೆಯದೇನೇ ಹೇಳಿದ ಆ ವ್ಯಕ್ತಿ ಮತ್ತೆ.

ಮಹೇಶ್ ಮಾತಾಡಲಿಲ್ಲ. ಆ ಕೈದಿಯನ್ನೇ ಪರಿಶೀಲಿಸಿದ.

ಹೆಚ್ಚು ಕಡಿಮೆ ತನ್ನ ವಯಸ್ಸಿನವನೇ. ಮಾಡಿದ ಅಪರಾಧವೇನೋ ಗೊತ್ತಿಲ್ಲ. ಆದರೂ ಜೈಲಿನ ಬಗ್ಗೆ ಸಕತ್ತಾಗಿ ತಿಳಿದುಕೊಂಡಿದ್ದಾನೆಂಬುದು ಮಾತ್ರ ಗ್ಯಾರಂಟಿ. ಆರಡಿ ಎತ್ತರದ ದೇಹ, ಅದಕ್ಕೆ ತಕ್ಕ ಹಾಗೆ ಕಟ್ಟುಮಸ್ತಾಗಿವೆ ಅವಯವಗಳು.

''ಏಕೆ ಫ್ರೆಂಡ್... ನನ್ನ ಮಾತು ಕಿವಿಯೊಳಗೆ ಹೋಗಲಿಲ್ಲವೇ? ನಿವಗೆ ಹೊರಗೆ ಅರ್ಜೆಂಟ್ ಕೆಲಸಗಳಿವೆಯೆಂದು ನನಗೆ ಗೊತ್ತು. ವೆಲ್... ಈ ಜೈಲಿನಿಂದ ಪ್ರಾಣದೊನೆ ಎಸ್ಕೇಪ್ ಆದವರು ಇದುವರೆಗೆ ಯಾರೂ ಇಲ್ಲ. ವಾಟ್ ಟು ಡೂ?'' ಹೇಳಿದ ಕೈದಿ.

ಅಲ್ಲಾಡಿ ಹೋದ ಮಹೇಶ.

ಇನ್ನೆರಡು ಕ್ಷಣ ಸುಮ್ಮನಿದ್ದರೆ ತಾನ್ಯಾರು, ಏಕೆ ಬಂದೆ ಎಂಬ ಹಿಸ್ಟರಿಯನ್ನೆಲ್ಲಾ ಹೇಳಿ ಬಿಡುವಂತಿದ್ದಾನಿವನು ಅನ್ನಿಸಿತು. ತಕ್ಷಣ ಅವನ ಅಲೋಚನೆಗಳಿಗೆ ಅಡ್ಡಬರುವುದೊಳ್ಳೆಯದೆಂದು ನಿಶ್ಚಯಿಸಿಕೊಂಡು ಅವನನ್ನೇ ತದೇಕ ಚಿತ್ತನಾಗಿ ನೋಡಿದ.

''ಕಣ್ಣು ಮುಚ್ಚಾಲೆಯಾಟವೆಂದರೆ ನನಗೆ ಇಷ್ಟವಾಗದು ಫ್ರೆಂಡ್!

ನಿನಗೆ ಅದೇನು ಹೇಳಬೇಕೆನ್ನಿಸುತ್ತಿದೆಯೋ ಸಾಫ್ ಸೀದಾ ಹೇಳಿಬಿಡು '' ಅಂದ.

ಆಗ ಕಣ್ಣು ತೆರೆದು ಅವನತ್ತ ನೋಡಿ ಕಿರುನಗೆ ಬೀರಿದ ಆ ಕೈದಿ.

''ಡೋಂಟ್ ಥಿಂಕ್ ಅದರ್‌ವೈಸ್ ಫ್ರೆಂಡ್...! ಈ ಸಬ್‌ಜೈಲ್‌ನಿಂದ ಹೊರಬೀಳುವುದು ನೀನಂದುಕೊಂಡಿರುವಷ್ಟು ಸುಲಭವಲ್ಲ'' ಅಂದ.

''ಅದೇ ಅದೇಕೆ ಎಂದು ನನ್ನ ಪ್ರಶ್ನೆ'' ಅಂದ ಮಹೇಶ.

''ಇಲ್ಲಿನ ಸೆಂಟ್ರಿಗಳು, ಅಧಿಕಾರಿಗಳು ಮಹಾಕಟುಕರು. ಅವರ ಕಣ್ಣು ತಪ್ಪಿಸಿ ಹೊರಬೀಳಲು ಪ್ರಯತ್ನಿಸುವುದೂ ಮಹಾಮುರ್ಖ ಕೆಲಸವೇ!'' ಅಂದ ಆತ.

ಆ ಮಾತಿಗೆ ಮುಗುಳ್ನಕ್ಕ ಮಹೇಶ,

''ಫ್ರೆಂಡ್...! ನೀನು ಅಸಾಧ್ಯವೆಂದಿದ್ದನ್ನು ನಾನು ಸುಲಭವಾಗಿ ಸಾಧಿಸುತ್ತೇನೆ. ನಿನಗೂ ಬರಬೇಕೆನಿಸಿದರೆ ನನ್ನೊಡನೆ ಬರಬಹುದು'' ಅಂದ.

''ಇನ್‌ಫ್ಯಾಕ್ಟ್ ನೀನು ಹೊರ ಬೀಳಲು ಸಾಧ್ಯವಾದರಲ್ಲವೇ ನಾನು ನಿನ್ನೊಡನೆ ಬರಲು ಸಾಧ್ಯ?''

''ತಥ್ಥೇರಿ... ಶುಭಕಾರ್ಯಕ್ಕೆ ಹೋಗುವವನಿಗೆ ಒಳ್ಳೆಯದಾಗಲೆನ್ನದೆ ಅಪಶಕುನವಾಡುತ್ತಿರುವೆಯಲ್ಲ! ಸರಿಯಲ್ಲ ನಿನ್ನ ಈ ಬುದ್ಧಿ!'' ಸಿಡುಕಿದ ಮಹೇಶ.

''ತಪ್ಪು ತಿಳಿಯಬೇಡ ಫ್ರೆಂಡ್! ನಿನ್ನ ಕಾನ್ಫಿಡೆನ್ಸ್ ಕಂಡು ನನಗೆ ನಿಜಕ್ಕೂ ಹೆಮ್ಮೆಯೆನಿಸುತ್ತಿದೆ. ಆದರೆ... ಒದೆ ತಿನ್ನುವೆ ಎಂದು ಭಯವಾಗುತ್ತಿದೆ.''

''ಡೋಂಟ್ ವರಿ... ಭಯಪಡಬೇಡ.'' ತಾನೇ ಅವನಿಗೆ ಧೈರ್ಯ ಹೇಳಿದ ಮಹೇಶ.

''ವೆಲ್... ನನಗಂತೂ ಏನೂ ಸಮಸ್ಯೆಯಿಲ್ಲ. ಆದರೆ ಒಂದನ್ನು ಮಾತ್ರ ಗ್ಯಾರಂಟಿಯಾಗಿ ಹೇಳಬಲ್ಲೆ'' ಅಂದ ಆ ಕೈದಿ.

''ಏನದು?''

''ನಿನಗೆ ಒಳ್ಳೆಯದಾಗಲೆಂದೇ ಪ್ರಾರ್ಥಿಸುತ್ತೇನೆ. ಬೈ ಛಾನ್ಸ್ ನಿನ್ನ ಪ್ರಯತ್ನ ಫೇಲಾಗಿ, ಅದೃಷ್ಟ ಕೈ ಕೊಟ್ಟರೆ ಮಾತ್ರ ಸಾವಿಗೆ ಶರಣಾಗು. ಈ ಕಿರಾತಕರ ಕೈನಲ್ಲಿ ಮಾತ್ರ ಸಿಕ್ಕಿಬೀಳಬೇಡ.'' ಗಾಢವಾಗಿ ನಿಟ್ಟುಸಿರು ಬಿಟ್ಟು ಹೇಳಿದ ಆ ಕೈದಿ.

ಅವನ ಮಾತಿಗೆ ಅದೇಕೋ ಮೈನಲ್ಲಿ ಕರೆಂಟ್ ಪಾಸಾದಂತಾಗಿ ಲಘುವಾಗಿ ಕಂಪಿಸಿತು ಮಹೇಶನ ಶರೀರ. ಅಷ್ಟರಲ್ಲೇ ತಲೆಯೊದರಿ ಕಿರುನಗೆ ನಕ್ಕ.

''ಓ.ಕೆ. ಡಿಯರ್ ಫ್ರೆಂಡ್! ನಿನ್ನ ಅಮೂಲ್ಯ ಸಲಹೆಗೆ ತುಂಬಾ ಥ್ಯಾಂಕ್ಸ್. ನೀನೇನೂ ಅಂದುಕೊಳದಿದ್ದರೆ...'' ಎಂದು ಅರ್ಧದಲ್ಲೇ ಮಾತು ನಿಲ್ಲಿಸಿದ.

''ಕೇಳು ಫ್ರೆಂಡ್... ನನ್ನಿಂದ ನಿನಗೇನಾದರೂ ಸಹಾಯವಾಗಬೇಕೆಂದಿದ್ದಲ್ಲಿ ಮುಲಾಜಿಲ್ಲದೆ ಕೇಳು.'' ತಕ್ಷಣ ಹೇಳಿದ ಆ ಕೈದಿ.

''ಥ್ಯಾಂಕ್ಸ್ ಫ್ರೆಂಡ್...! ನಿನ್ನ ತುಸು ಸಹಕಾರ ನಾನು ಎಸ್ಕೇಪ್ ಆಗುವುದಕ್ಕೆ ಬಹಳ ಮಟ್ಟಿಗೆ ಹೆಲ್ಪ್ ಮಾಡುತ್ತದೆ.''

ತನ್ನ ಯೋಜನೆಯನ್ನಾಗ ಅವನ ಮುಂದೆ ವಿವರಿಸಿದ ಮಹೇಶ.

ಎಲ್ಲಾ ಶ್ರದ್ಧೆಯಿಂದ ಆಲಿಸಿ ಭುಜ ಎಗರಿಸಿದ ಆ ಕೈದಿ.

''ವೆರಿ ಬ್ರಿಲಿಯಂಟ್ ಮೈ ಫ್ರೆಂಡ್! ನೈಸ್ ಪ್ಲಾನ್! ಆದರೂ ಯಾವುದಕ್ಕೂ ಒಳ್ಳೆಯದು, ಇನ್ನೊಮ್ಮೆ ಯೋಚಿಸು'' ಅಂದ.

ಮತ್ತೆ ಆಲೋಚನೆಗಳಲ್ಲಿ ಮುಳುಗಿದ ಮಹೇಶ.

ರಂಗೂನ್‌ನ ನಾರ್ತ್ ಟೌನ್ ಏರಿಯಾದಲ್ಲಿತ್ತು ಆ ಸಬ್ ಜೈಲ್. ಆ ಜೈಲ್ ಬದಿಗೇ ಇತ್ತು ಲೇಬರ್ ಕಾಲೋನಿ. ಇನ್ನೊಂದು ಕಡೆ ಇರವಾಡಿ ನದಿ ಹರಿಯುತ್ತಿತ್ತು. ಜೈಲಿಗೆ ಬಹಳ ಸಮೀಪದಲ್ಲೇ ಇತ್ತು ಆ ರಿವರ್. ಮಹೇಶನ ಆಲೋಚನೆ ಒಂದೇ. ಜೈಲ್‌ನಿಂದ ಪಾರಾಗಿ ಲೇಬರ್ ಕಾಲೋನಿಯ ಕಡೆಗ್ಹೋದರೆ ಸಿಕ್ಕಿಬೀಳುವುದು ನಿಶ್ಚಿತ. ಅಲ್ಲಿಂದ ತಪ್ಪಿಸಿಕೊಳ್ಳಲು ಇನ್ನುಳಿದಿರುವುದು ಜಲಮಾರ್ಗವೊಂದೇ. ಅದೆಲ್ಲಾ

ಮನದಲ್ಲಿಟ್ಟುಕೊಂಡೇ ಅವನು ತನ್ನ ಪ್ಲಾನ್ ಸಿದ್ಧಪಡಿಸಿದ್ದ.

ಪ್ರತಿ ಅರ್ಧ ಗಂಟೆಗೊಮ್ಮೆ ಸೆಲ್‌ಗಳನ್ನು ಚೆಕ್ ಮಾಡುತ್ತಾನೊಬ್ಬ ಸೆಂಟ್ರಿ ಕಂಪಲ್ಸರಿಯಾಗಿ.

ಬೆಳಿಗ್ಗೆಯಿಂದ ಇದೇ ಯೋಚನೆಯಲ್ಲಿದ್ದ ಮಹೇಶ.

ಎಸ್ಕೇಪ್ ಆಗಲು ಡೌಟ್ ಕ್ಲಿಯರ್ ಮಾಡಿಕೊಳ್ಳುವ ದಾರಿಯನ್ನು ಅನ್ವೇಷಿಸಿಕೊಂಡೇ ಇವೆಲ್ಲಾ ಪಾಯಿಂಟ್ಸ್ ಮನಸ್ಸಲ್ಲಿಟ್ಟುಕೊಂಡ.

''ಏನು ಫ್ರೆಂಡ್... ಫೈನಲ್ಲಾಗಿ ಏನು ನಿರ್ಧರಿಸಿದೆ?'' ಕೇಳಿದ ಸೆಲ್‌ಮೇಟ್.

ಮೌನವಾಗಿ ತಲೆಯಾಡಿಸಿದ ಮಹೇಶ.

ಸರಿಯಾಗಿ ಆಗಲೇ 'ಠಂಗ್ ಠಂಗ್' ಎಂದು ಹನ್ನೊಂದು ಗಂಟೆ ಹೊಡೆಯಿತು ಜೈಲ್ ಆವರಣದಲ್ಲಿನ ಗಡಿಯಾರ. ಆ ನಿಶ್ಶಬ್ದ ರಾತ್ರಿಯಲ್ಲಿ ಗಂಟಾನಾದ ಪೊಲೀಸ್ ಸೈರನ್‌ಗಿಂತಲೂ ಕರ್ಕಶವಾಗಿ ಎಲ್ಲೆಲ್ಲೂ ಪ್ರತಿಧ್ವನಿಸಿತು.

ಜೈಲ್‌ನಲ್ಲಿನ ಮಿಕ್ಕ ಕೈದಿಗಳೆಲ್ಲಾ ಗಾಢ ನಿದ್ರೆಯಲ್ಲಿದ್ದರು. ಪಿನ್‌ಡ್ರಾಪ್ ಸೈಲೆನ್ಸ್ ಆವರಿಸಿತ್ತು ಎಲ್ಲೆಡೆ. ಪಕ್ಕದ ಸೆಲ್‌ನಲ್ಲಿನ ಕೈದಿಗಳ ಗೊರಕೆಯೂ ಅಸ್ಪಷ್ಟವಾಗಿ ಕೇಳಿಸುತ್ತಿತ್ತು.

ಹತ್ತು ನಿಮಿಷಗಳ ನಂತರ ನಿಶಬ್ದವನ್ನು ಭೇದಿಸುತ್ತಾ ಕೇಳಿ ಬಂದಿತ್ತು ಬೂಟುಗಾಲಿನ ಟಕಟಕ ಶಬ್ದ.

''ಫ್ರೆಂಡ್...! ಅಗೋ ಸೆಂಟ್ರಿ ಬರುತ್ತಿದ್ದಾನೆ. ವಿಷ್ ಯು ಬೆಸ್ಟಾಫ್ ಲಕ್! ಗೆಟ್ ರೆಡಿ, ಕ್ವಿಕ್ಲಿ!'' ಸಹ ಕೈದಿ ಹೇಳಿದ.

ಕ್ಷಣ ಅವನ ಕಡೆಯೇ ನೋಡಿದ ಮಹೇಶ. ಎಷ್ಟು ಒಳ್ಳೆಯವನಿವನು ಅನ್ನಿಸಿತು.

''ಯು ಆರ್ ರಿಯಲಿ ಎ ವಂಡರ್‌ಫುಲ್ ಮ್ಯಾನ್ ಫ್ರೆಂಡ್! ತೀರಾ ಅಪರಿಚಿತನಾದ ನನಗೆ ನೀನು ಮಾಡುತ್ತಿರುವ ಸಹಾಯದ ಈ ಋಣ ಏಳೇಳು ಜನ್ಮ ಎತ್ತಿದರೂ ತೀರಿಸಲಾಗದು'' ಅಂದ ಮಹೇಶ.

''ಅಯ್ಯೋ ದೇವರೆ! ಅಲ್ಲಿ ಸೆಂಟ್ರಿ ಬರುತ್ತಿದ್ದಾನೆ. ಇಲ್ಲಿ ನಿನ್ನ

ವೋಟ್ ಆಫ್ ಥ್ಯಾಂಕ್ಸ್‌ಗೆ ಫುಲ್‌ಸ್ಟಾಪಿಟ್ಟು, ಬೇಗ ನಿನ್ನ ಮುಂದಿನ ನಡೆ ಜಾರಿಗೊಳಿಸು. ಇಲ್ಲದಿದ್ದರೆ ಆಮೇಲೆಷ್ಟು ಯೋಚಿಸಿದರೂ, ಎಷ್ಟು ಪ್ರಯತ್ನಿಸಿದರೂ ಪ್ರಯೋಜನವಾಗದು.'' ಅವನು ಮತ್ತಷ್ಟು ಆತುರದಿಂದ ಹೇಳಿದ.

ಅಷ್ಟೊತ್ತಿಗೆ ತೀರಾ ಹತ್ತಿರವಾಗಿತ್ತು ಬೂಟುಗಳ ಸೌಂಡ್. ಆ ಮಾತಿಗಷ್ಟೇ ಸುಮ್ಮನಾಗಲಿಲ್ಲ ಆ ಕೈದಿ.

''ಓ ಗಾಡ್! ಈ ರಾಕ್ಷಸ ನನ್ನನ್ನು ಕೊಲ್ಲುತ್ತಿದ್ದಾನೆ. ಹೆಲ್ಪ್... ಹೆಲ್ಪ್ ಇವನಿಂದ ನನ್ನನ್ನು ಕಾಪಾಡಿ.'' ಸೆಲ್ ಅಲ್ಲಾಡಿ ಹೋಗುವಂತೆ ಕೂಗು ಹಾಕಲು ಶುರುಮಾಡಿಬಿಟ್ಟ.

★

ಹೆಜ್ಜೆಯ ಮೇಲೆ ಹೆಜ್ಜೆಯಿರಿಸಿ ಒಂದೊಂದೇ ಸೆಲ್ ಪರೀಕ್ಷಿಸುತ್ತಾ ಬರುತ್ತಿದ್ದ ಸೆಂಟ್ರಿ ಇದ್ದಕ್ಕಿದ್ದಂತೆ ಬಂದ ಆ ಕೂಗಿನಿಂದ ನಿಶ್ಚೇಷ್ಟಿತನಾದ.

ಸಡನ್ನಾಗಿ ಕೇಳಿಸಿದ ಆ ಕೂಗಿನ ಅರ್ಥವೇನೆಂದು ಯೋಚಿಸಿ ಕೊಂಡೇ ಜೋರು ನಡಿಗೆಯಲ್ಲಿ ಆ ಸೆಲ್ ಕಡೆಗೆ ಸಾಗಿದ.

ಅಲ್ಲಿ ಕಾಣಿಸಿದ ದೃಶ್ಯ ನೋಡಿ ಅವನಿಗೆ ಉಸಿರುಗಟ್ಟಿದಂತಾಯಿತು.

ಒಬ್ಬ ಕೈದಿಯ ಎದೆಯ ಮೇಲೆ ಕುಳಿತು ಇನ್ನೊಬ್ಬ ಕೈದಿ ಎರಡೂ ಕೈಗಳಲ್ಲಿ ಅವನ ಗಂಟಲ್ಹಿಡಿದು ಹಿಸುಕುತ್ತಿದ್ದಾನೆ.

ಅದೂ ಆ ಕೆಲಸ ಮಾಡುತ್ತಿರುವವನು ಹೊಸಬ. ಕೀಚುಧ್ವನಿ ಯಲ್ಲರಚುತ್ತಾ, ಕೈಕಾಲುಗಳನ್ನು ನೆಲಕ್ಕೆ ಬಡಿಯುತ್ತಾ ಒದ್ದಾಡುತ್ತಿದ್ದಾನೆ ಹಳೆಯ ಕೈದಿ. ಆದರೆ ಮೇಲಿನವನದು ಉಡದ ಹಿಡಿತ. ತುಸುವಾದರೂ ಸಡಲುತ್ತಿಲ್ಲ.

ಕ್ಷಣ ನೋಡುತ್ತಲೇ ನಿಂತುಬಿಟ್ಟ ಸೆಂಟ್ರಿ. ಅವರು ಏಕೆ ಹೀಗೆ ಹೊಡೆದಾಡುತ್ತಿದ್ದಾರೆ, ಅವನ್ಯಾಕೆ ಅವನನ್ನು ಕೊಲ್ಲುವ ಪ್ರಯತ್ನ ಮಾಡುತ್ತಿದ್ದಾನೆ ಎಂದು ಎಷ್ಟು ಯೋಚಿಸಿದರೂ ಅವನಿಗರ್ಥವಾಗಲಿಲ್ಲ.

ಅವನನ್ನು ರಕ್ಷಿಸುವುದನ್ನು ಮರೆತು ಅಚೇತನನಾಗಿ ನಿಂತ.

ಮೇಲಿದ್ದ ಮಹೇಶ ಮಾತ್ರ ನೋಡಿಯೂ ನೋಡದವನಂತಿದ್ದ. ಅವನನ್ನು ನೋಡಿದ ಕೆಳಗಿದ್ದ ಕೈದಿ.

ಇದ್ದಕ್ಕಿದ್ದಂತೆ ಕೈ ಹಿಡಿತ ಸ್ವಲ್ಪ ಸಡಲಿಸಿಕೊಂಡು. ''ನನ್ನನ್ನು ಕಾಪಾಡಿ... ಹೆಲ್ಪ್... ಹೆಲ್ಪ್'' ಎಂದು ಕೀಚು ಧ್ವನಿಯಲ್ಲ ರಚಿಕೊಂಡ.

ತಟ್ಟನೆ ತನ್ನ ಲಹರಿಯಿಂದ ಹೊರಬಂದ ಸೆಂಟ್ರಿ.

ಮರುಕ್ಷಣ ಕೋಪದಿಂದ ಕಾದ ಕಾವಲಿಯಂತಾಯಿತು ಅವನ ಮುಖ. ಸರ್ರನೆ ಸೆಲ್ ಬೀಗ ತೆಗೆದ.

ಕಣ್ಣಕೊನೆಯಿಂದ ಆ ಸೆಂಟ್ರಿಯ ಮೂವ್‌ಮೆಂಟ್‌ಗಳನ್ನೆಲ್ಲ ಗಮನಿಸುತ್ತಾ ಇದ್ದ ಮಹೇಶ.

''ರ್‍ಯಾಸ್ಕಲ್, ಸ್ಕೌಂಡ್ರಲ್, ಎಷ್ಟು ಧೈರ್ಯ ನಿನಗೆ! ಜೈಲ್ ಸೆಲ್‌ನಲ್ಲಿ ಮರ್ಡರ್ ಮಾಡಿ, ಆ ಆರೋಪ ನಮ್ಮ ಮೇಲೆ ಹೊರೆಸಿ, ಪೇಪರ್‌ನವರು ನಮ್ಮನ್ನು ಬೆಂಡ್ ತೆಗೆಯುವಂತೆ ಮಾಡುವ ಆಸೆಯೇ?'' ಎಂದು ಮುಂದೆ ಬಂದು ಮಹೇಶನ ಭುಜದ ಮೇಲೆ ಕೈ ಹಾಕಿದ.

ಆಗ ಮಿಂಚಿನಂತೆ ಮೂವ್ ಆದ ಮಹೇಶ. ಅದುರಿಹೋಗಿ ಎರಡ್ಹೆಜ್ಜೆ ಹಿಂದಕ್ಕಿಟ್ಟ ಸೆಂಟ್ರಿ, ಆ ವೇಗ ನೋಡಿ.

ಆದರೆ ಬಹಳ ತಡವಾಗಿತ್ತು ಅಷ್ಟೊತ್ತಿಗೆ.

ತನ್ನ ಸಹ ಕೈದಿಯ ಮೇಲಿಂದ ಎದ್ದೊಡನೆ ಅಂಗೈನ ಹರಿತ ಎಡ್ಜ್ ಸ್ವಿಫ್ಟಾಗಿಸಿ ಅವನ ಕುತ್ತಿಗೆಯ ಮೇಲೆ ಚಾಪ್ ಮಾಡಿದ ಮಹೇಶ. ಅಲ್ಲಾಡಿ ಹೋಯಿತು ಸೆಂಟ್ರಿಯ ಶರೀರ. ಜಿವ್ವೆಂದಿದ್ದವು ಮೈ ನರಗಳು. ಸಣ್ಣಗೆ ಮುಲುಗಿ ಅಂಗಾತ ಬಿದ್ದು ಮೂರ್ಛೆ ಹೋದ.

''ಹೋಗಿ ಬಿಡು ಫ್ರೆಂಡ್. ನೀನಿನ್ನು ಹೊರಡು. ಇದಕ್ಕಿಂತಾ ಒಳ್ಳೆಯ ಅವಕಾಶ ಸಿಗದು. ಗೆಟ್ ಲಾಸ್ಟ್ ಅಂಡ್ ಗುಡ್‌ಲಕ್!'' ಎಂದು ತುಸು ಗಾಬರಿಯಿಂದಲೇ ಹೇಳಿದ ಸಹ ಕೈದಿ.

''ಎಗೇನ್ ಥ್ಯಾಂಕ್ಸ್ ಎ ಲಾಟ್ ಫ್ರೆಂಡ್!'' ಎಂದು ಹೇಳಿ ಸೆಲ್‌ನಿಂದ ಹೊರಬಿದ್ದು ಬಾಗಿಲು ಮುಚ್ಚಿಬಿಟ್ಟ ಮಹೇಶ.

ಮೂರ್ಛೆ ಹೋದವನಂತೆ ಕಣ್ಣು ಮುಚ್ಚಿ ಬಿದ್ದುಕೊಂಡ ಆ ಕೈದಿ. ಮಹೇಶ ಅತ್ತ ಇತ್ತ ನೋಡಿದ. ಅಲ್ಯಾರೂ ಇಲ್ಲವೆಂದು ಗ್ರಹಿಸಿ ಕಾರಿಡಾರ್‌ನಲ್ಲೇ ಮುಂದಕ್ಕೆ ಸಾಗಿದ. ಡಿಮ್ ಆಗಿ ಬೆಳಗುತ್ತಿದ್ದವು ಲೈಟ್ಸ್. ಪಿಲ್ಲರ್‌ಗಳ ಮರೆಯಲ್ಲೇ ಮುನ್ನಡೆದ.

ಆ ಕಾರಿಡಾರ್ ಕೊನೆಯಲ್ಲಿ ಇಬ್ಬರು ಸೆಂಟ್ರಿಗಳು ನಿಂತಿದ್ದರು. ಏನೋ ಮಾತಾಡಿಕೊಂಡು ಜೋರಾಗಿ ನಗುತ್ತಿದ್ದರು. ಜೈಲ್ ಆವರಣದಲ್ಲೆಲ್ಲಾ ಆ ನಗು ಪ್ರತಿಧ್ವನಿಸುತ್ತಿತ್ತು.

ನಿಶ್ಶಬ್ದವಾಗಿ, ಬೆಕ್ಕಿನ ನಡಿಗೆಯಲ್ಲಿ ಮಹೇಶ ಮುಂದಕ್ಕೆ ಬಂದ. ಅವರ ಹಿಂದಕ್ಕೆ ಬರಲು ಎರಡು ನಿಮಿಷವೇ ಹಿಡಿಯಿತು.

ಕೊನೆಯ ಕ್ಷಣದವರೆಗೆ ಮೈಮೇಲೆರಗಲಿರುವ ಅಪಾಯದ ಕಡೆಗೆ ಅವರ ಗಮನ ಹರಿದಿರಲಿಲ್ಲ.

ಹಿಂದೆ ಮೃದು ಹೆಜ್ಜೆಯ ಶಬ್ದ, ಮಾತು ಮಧ್ಯದಲ್ಲೇ ನಿಲ್ಲಿಸಿದ ಇಬ್ಬರೂ ಒಟ್ಟಿಗೇ ಹಿಂದೆ ತಿರುಗಿದರು.

ಅವರಿಬ್ಬರನ್ನೂ ಮಲಗಿಸಿದ ವಿನಹ ಮುಂದೆ ಹೋಗಲಾಗದೆಂದು ಚೆನ್ನಾಗಿ ಗೊತ್ತಿತ್ತು ಮಹೇಶನಿಗೆ, ಜೋರಾಗೊಮ್ಮೆ ಉಸಿರೆಳೆದುಕೊಂಡು ರಾಕೆಟ್ ವೇಗದಲ್ಲಿ ಮೂವಾದ.

ಅದುರಿಬಿದ್ದು ಎರಡಜ್ಜೆ ಹಿಂದಕ್ಕಿಟ್ಟು ಕಿರುಚಹೋದರವರು.

ಬಟ್ ಟೂ ಲೇಟ್.

ಮಹೇಶನ ಎರಡೂ ಅಂಗೈ ಕೊನೆಗಳು ಅವರಿಬ್ಬರ ಕಿವಿಯ ತಳ ಭಾಗಗಳಿಗೆ ಏಕಕಾಲದಲ್ಲಿ ಸಂಪರ್ಕಿಸಿದ್ದವು. ಕೀಚಕರಿಬ್ಬರೂ ಕ್ಷಣ ತೂಗಾಡಿದವರು ದೊಪ್ಪನೆ ನೆಲಕ್ಕೆ ಕುಸಿದರು.

ಇಬ್ಬರನ್ನು ಅರ್ಧದಲ್ಲೇ ಪಿಲ್ಲರ್‌ಗಳವರೆಗೆ ಎಳೆದುಹಾಕಿದ ಮಹೇಶ. ತನ್ನ ಚಟುವಟಿಕೆಯನ್ನು ಯಾರೂ ಗಮನಿಸಿಲ್ಲವೆಂದು ನಿರ್ಧರಿಸಿಕೊಂಡು, ನೇರ ಮುನ್ನಡೆದು ಕಿಚನ್ ಹಾಲ್‌ನೊಳಕ್ಕೆ ಪ್ರವೇಶಿಸಿದ.

ದೊಡ್ಡ ದೊಡ್ಡ ಪಾತ್ರೆ ಪಡಗಗಳಿಂದ, ಉಳಿದಿದ್ದ ಆಹಾರ ಪದಾರ್ಥಗಳಿಂದ ತುಂಬಿತ್ತು ಆ ಹಾಲ್. ಕಿಚನ್ ಹಾಲ್ ದಾಟಿ ಆಚೆಗೆ

ಹೋದರೆ ಕಾಂಪೌಂಡ್ ಸಿಗುತ್ತದೆ. ಅದನ್ನು ದಾಟಿದರೆ ಎಸ್ಕೇಪ್ ಆದಂತೆಯೇ ಲೆಕ್ಕ. ಅಲ್ಲಿನ ಪರಿಸ್ಥಿತಿಯನ್ನು ಅಲರ್ಟಾಗಿ ಗಮನಿಸಿದ. ಅಲ್ಲಿ ಸೆಕ್ಯುರಿಟಿ ಅಷ್ಟಾಗಿರದು. ಅದೆಲ್ಲಾ ಲೆಕ್ಕ ಹಾಕಿಯೇ ಅವನು ಆ ರೂಟ್ ಆಯ್ಕೆ ಮಾಡಿದುದ್ದು.

ಅಲ್ಲಿಯವರೆಗೆ ದುಡಿದು ಸುಸ್ತಾಗಿದ್ದ ಕಿಚನ್ ಸ್ಟಾಫ್ ಮೈ ಮರೆತು ನಿದ್ರಿಸುತ್ತಿದ್ದರು. ಅವರ ನಿದ್ರೆಗ್ಯಾವ ಭಂಗ ತರದೆ ಕಿಚನ್ ಕೊನೆ ತಲುಪಿ ಅಲ್ಲಿನ ಬಾಗಿಲ ಚಿಲಕ ತೆಗೆದು, ಹೊರಗಡೆ ಕಾಲಿಟ್ಟ ಮಹೇಶ.

ಅಲ್ಲಿಂದ ಐವತ್ತು ಗಜಗಳಷ್ಟೇ ದೂರ ಕಾಂಪೌಂಡ್.

ಇದ್ದಕ್ಕಿದ್ದಂತೆ ಹೀಗೇ ಎಂದು ಪಾಯಿಂಟ್ ಔಟ್ ಮಾಡಲಾಗದ ಅನೀಸಿನೆಸ್ ಶುರುವಾಯಿತು ಅವನಲ್ಲಿ ಆಗಲೇ.

ಟಕ್ಕನೆ ನಿಂತವು ಕಾಲುಗಳು. ಡೆಸ್ಪರೇಟ್ ಆಗಿ ಸುತ್ತಲೂ ನೋಡಿದ.

ಯಾರೂ ಕಾಣಿಸಲಿಲ್ಲ. ಹಾಗಿದ್ದರೆ ಅಂತರಂಗದ ಆತಂಕಕ್ಕೇನು ಕಾರಣ? ಏನೋ ಐಬಿದೆ ಇಲ್ಲಿ!

'ಎಲ್ಲೋ ತಪ್ಪು ನಡೆ ಬಿದ್ದಿದೆ. ಇನ್ನೊಬ್ಬರ ಕಣ್ಣಿಗೆ ಬೀಳದಂತೆಯೇ ಇಲ್ಲಿಯವರೆಗೆ ಬಂದಿದ್ದೇನೆ ನಾನು. ಹೀಗೆಯೇ ಹಿಂದಿರುಗಿಬಿಟ್ಟರೆ?' ಮನಸ್ಸಿನಲ್ಲೇ ಅಂದುಕೊಂಡ.

ಪ್ರಯೋಜನವಿಲ್ಲ ಅನ್ನಿಸಿತು. ಮೂರ್ಛೆ ಹೋಗಿರುವ ಸೆಂಟ್ರಿಗಳೆದ್ದರೆ ಪ್ರಾಣ ಹಿಂಡರೇ? ಅದೂ ಅಲ್ಲದೇ ಇಲ್ಲಿಯವರೆಗೆ ಬಂದ ಮೇಲೆ ಹಿಂತಿರುಗಿದರೇನು ಬಂತು? ಯಾರಿಗೂ ಸಿಗದ ಅಪೂರ್ವ ಅವಕಾಶ ತನಗೆ ಸಿಕ್ಕಿದೆ. ಅದಕ್ಕೆ ಅದೆಷ್ಟೋ ಸಹಕರಿಸಿದ ಆ ಕೈದಿ.

ಈಗ ತಾನು ಹಿನ್ನಡೆಯಿಟ್ಟರೆ ಅವನ ತ್ಯಾಗಕ್ಕೆ ಏನು ಅರ್ಥ? ನೋ... ಹಿಮ್ಮುಖನಾಗುವಂತಿಲ್ಲ. ನೀರಿಗಿಳಿದ ಮೇಲೆ ಚಳಿಯೇನು, ಗಾಳಿಯೇನು?

ಮುಂದಕ್ಕೆ ಹೋಗುವುದೇ ಸರಿಯೆಂದುಕೊಂಡು ನಾಲ್ಕೆಜ್ಜೆ ನಡೆದ ಮಹೇಶ. ಐದನೇ ಹೆಜ್ಜೆ ಇಡುತ್ತಿರುವಾಗ 'ಡೇಂಜರ್' ಎಂದು ರೆಡ್ ಸಿಗ್ನಲ್ ಫ್ಲಾಷ್ ಮಾಡತೊಡಗಿತು ಅವನ ಸಿಕ್ಸ್ತ್‌ಸೆನ್ಸ್.

ನಿಜಕ್ಕೂ ಈಗ ಯೋಚನೆ ಮಾಡಲೇಬೇಕಾಗಿ ಬಂತು ಮಹೇಶನಿಗೆ. ಸಿಕ್ಸ್ತ್ ಸೆನ್ಸ್ ಯಾವಾಗಲೂ ರಾಂಗ್ ಸಿಗ್ನಲ್ಸ್ ಫ್ಲಾಷ್ ಮಾಡದು. ಆದರೆ ಈಗಿನ ಎಚ್ಚರಿಕೆಗೇನರ್ಥ?

ತಾನು ಪ್ಲಾನ್ ವಿವರಿಸುವ ಮೊದಲು ಕೈದಿ ಅಂದ ಮಾತುಗಳೀಗ ನೆನಪಾಗಿ ಗುಂಡಿಗೆ ಗುಭಿಲ್ ಅಂದಿತು ಮಹೇಶನಿಗೆ. ಈ ಜೈಲ್‌ನಿಂದ ತಪ್ಪಿಸಿಕೊಳ್ಳುವುದು ಅಸಾಧ್ಯವೆಂದ ಅವನ ಮಾತು ನಿಜವಾಗಲಿದೆಯೇ?

ನೋ... ಹಾಗಾಗುವಂತಿಲ್ಲ, ಆಫ್ಟರಾಲ್ ಜೈಲ್‌ನಲ್ಲಷ್ಟೇ ಪರಿಚಿತವಾದ ಅವನ ಭವಿಷ್ಯ ನಿಜವಾಗಿ ಬಿಡುತ್ತದೆಯೇ? ಮನಸ್ಸಿನಲ್ಲೇ ಅಂದುಕೊಂಡ ಮಹೇಶ.

ಮತ್ತೊಮ್ಮೆ ಕೇರ್‌ಫುಲ್ಲಾಗಿ ಸುತ್ತಲೂ ಪರಿಶೀಲಿಸಿದ. ಅಪಾಯ ಯಾವ ರೂಪದಲ್ಲಿ, ಎತ್ತಣಿಂದ ಬರುತ್ತದೆಂಬುದು ಅರ್ಥವಾಗಲಿಲ್ಲ. ತಕ್ಷಣ ಹೊರಟುಬಿಡುವುದೆಂದು ನಿಶ್ಚಯಿಸಿ, ಇನ್ನೆರಡು ಹೆಜ್ಜೆ ಮುಂದಿಟ್ಟು ಟಕ್ಕನೆ ನಿಂತುಬಿಟ್ಟ.

ಅವನೆದುರಿಗೆ ಕತ್ತಲಲ್ಲಿ ರೇಡಿಯಂ ಡಯಲ್‌ನಂತೆ ಮಿಂಚುತ್ತಿದ್ದವು ಎರಡು ಕಣ್ಣುಗಳು. ಈ ಸಲ ತಣ್ಣಗಾಯಿತು ಮಹೇಶನೆದೆ. ಎತ್ತಿದ್ದ ಕಾಲನ್ನು ಹಾಗೆಯೇ ಕೆಳಗಿರಿಸಿಬಿಟ್ಟ. ಅದೇನೆಂದು ಅರ್ಥವಾದಾಗ ಗಂಟಲ ಪಸೆ ಆರಿ ಹೋಯಿತು.

ಸರಿಯಾಗಿ ಆಗಲೇ ಚಕ್ ಚಕ್ ಎಂದು ಬೆಳಗಿದವು ನಾಲ್ಕು ಪವರ್‌ಫುಲ್ ಬ್ಯಾಟರಿ ಲೈಟ್ಸ್. ಅವುಗಳ ತೀಕ್ಷ್ಣ ಬೆಳಕು ಕಣ್ಣಿಗೆ ಚುಚ್ಚಿದಂತಾಯಿತು ಮಹೇಶನಿಗೆ. ಗಟ್ಟಿಯಾಗೊಮ್ಮೆ ತಲೆಯೊದರಿ ಮುಂದಕ್ಕೆ ನೋಡಿದ.

ಮೆಷಿನ್‌ಗನ್ಸ್ ಹಿಡಿದ ನಾಲ್ವರು ಗಾರ್ಡ್‌ಗಳು ಗನ್ಸ್ ಏಮ್ ಮಾಡಿ, ಟ್ರಿಗರ್ ಮೇಲೆ ತೋರು ಬೆರಳಿರಿಸಿ, ಫೈರ್ ಮಾಡಲು ರೆಡಿಯಾಗಿ ನಿಂತಿದ್ದರು.

ಇನ್ನಿಬ್ಬರು ಗಾರ್ಡ್‌ಗಳ ಕೈನಲ್ಲಿನ ಚೈನ್‌ಗಳಿಂದ ಬಿಡಿಸಿಕೊಂಡು ಮಹೇಶನ ಮೇಲೆ ಹಾರಲು ಹಾತೊರೆಯುತ್ತಿದ್ದವು. ಎರಡು

ಸಮುರಾಯ್ ಹಂಟಿಂಗ್ ಡಾಗ್ಸ್. ಅವುಗಳ ಕಣ್ಣುಗಳೇ ರೇಡಿಯಂ ಡಯಲ್‌ನಂತೆ ಹೊಳೆಯುತ್ತಿದುದ್ದು.

''ಸ್ಟೇ ವೇರ್ ಯು ಆರ್! ಇನ್ನೊಂದು ಹೆಜ್ಜೆ ಮುಂದಿಡಲು ಪ್ರಯತ್ನಿಸಿದರೆ ನಿನ್ನ ಶರೀರ ಚಿಂದಿ ಮಾಡುತ್ತವೆ ಬುಲೆಟ್ಸ್. ಬದುಕುಳಿದರೆ ಕಿತ್ತು ತಿನ್ನಲು ರೆಡಿಯಾಗಿವೆ ಹಂಟಿಂಗ್ ಡಾಗ್ಸ್. ಮಾಮೂಲಿ ನಾಯಿಗಳಲ್ಲ ಇವು. ನರಮಾಂಸದ ರುಚಿಯ ಅಭ್ಯಾಸಗೊಂಡವು. ಅನುಮಾನವಿದ್ದರೆ ಪರೀಕ್ಷಿಸಲೇನೂ ಅಡ್ಡಿಯಿಲ್ಲ.'' ಕಂಚಿನ ಗಂಟೆಯಂತೆ ಮೊಳಗಿತ್ತು ಒಬ್ಬ ಗಾರ್ಡ್‌ನ ಧ್ವನಿ.

ಹೇಗಿದ್ದನೋ ಹಾಗೆಯೇ ಫ್ರೀಝಾಗಿಬಿಟ್ಟ ಮಹೇಶ. ಆ ವಿವರಣೆ ಕೇಳಿದ ಮೇಲೆ ಹಣೆಯಿಂದ ಬೆವರು ತೊಟ್ಟಿಕ್ಕತೊಡಗಿತ್ತು. ತನ್ನ ಸೆಲ್‌ಮೇಟ್ ಏಕಪ್ಪು ಖಚಿತವಾಗಿ ತನ್ನೊಡನೆ ಬರಲಾರೆನೆಂದ ಎಂಬುದೀಗ ಸ್ಪಷ್ಟವಾಗಿ ಅರಿವಾಗಿತ್ತು. ತಾನು ತಪ್ಪಿಸಿಕೊಳ್ಳಲಾರೆ ಎಂಬುದವನಿಗೆ ಅಷ್ಟು ಖಚಿತ.

'ಕೆಸರಲ್ಲಿ ಕುತ್ತಿಗೆಯವರೆಗೆ ಹೂತು ಹೋಗಿರುವೆ ಕಿಲ್‌ಮಾಸ್ಟರ್. ಇನ್ನು ನೀನಿಲ್ಲಿಂದ ಪಾರಾಗುವುದು ಕನಸೇ ಸೈ' ಚುಚ್ಚಿತು ಅಂತರಂಗ ಆಗಲೇ.

ಸೀರಿಯಸ್ಸಾಗಿ ಆಲೋಚಿಸಿದ ಮಹೇಶ.

'ಈಗ ನಾನು ಯಾವುದೇ ಡಿಸಿಷನ್ ತೆಗೆದುಕೊಂಡರೂ ಅಪಾಯ ಕಟ್ಟಿಟ್ಟ ಬುತ್ತಿ. ಹಾಗೂ ಡೆಸ್ಪರೇಟಾಗಿ ಪರಾರಿಯಾಗಲು ಪ್ರಯತ್ನಿಸಿದರೆ ಹತ್ತೆಜ್ಜೆಗೆ ಮೇಲೆ ಮುಂದಕ್ಕೆ ಹೋಗಲಾಗದು.'

ಗಾರ್ಡ್‌ಗಳ ಕೈನಲ್ಲಿರುವ ಮೆಷಿನ್‌ಗನ್ಸ್ ಗುರಿ ತಪ್ಪಬಹುದೇನೋ... ಆದರೆ ಸಮುರಾಯ್ ಜಾತಿಯ ಆ ಡಾಗ್ಸ್ ತನ್ನನ್ನು ಪ್ರಾಣಸಹಿತ ಉಳಿಸವು. ತನಗಿಂತಲೂ ದುಪ್ಪಟ್ಟು ಸ್ಪೀಡ್‌ನಲ್ಲಿ ಮೂವ್ ಆಗಬಲ್ಲ ಅವು ತನ್ನನ್ನು ಆ ಗಾರ್ಡ್ ಹೇಳಿದಂತೆಯೇ ಹುರಿದು ಮುಕ್ಕಿಬಿಡುತ್ತವೆ.

ಈಗಾಗಲೇ ತಪ್ಪು ಹೆಜ್ಜೆ ಇಟ್ಟಾಗಿತ್ತು. ಮತ್ತೆ ರಾಂಗ್ ಸ್ಟೆಪ್ ಇಟ್ಟು ತನ್ನ ಪರಿಸ್ಥಿತಿ ತೀರಾ ಕೆಳಮಟ್ಟಕ್ಕೆ ತಂದುಕೊಳ್ಳುವ ಆಸೆ ಎಳ್ಳಷ್ಟೂ

ಇರಲಿಲ್ಲ ಅವನಿಗೆ.

''ಹಲೋ ಕನ್ವಿಕ್ಟ್! ಏನು ಯೋಚಿಸುತ್ತಿರುವೆ? ನಮ್ಮಿಂದ ತಪ್ಪಿಸಿಕೊಳ್ಳಬೇಕೆಂದು ನೋಡುತ್ತಿರುವೆಯಾ? ಎಸ್ಕೇಪ್ ಆಗಬೇಕೆಂದುಕೊಳ್ಳುವುದರಲ್ಲಿ ತಪ್ಪೇನೂ ಇಲ್ಲ. ಪ್ರಯತ್ನಿಸು.'' ವ್ಯಂಗ್ಯವಾಗಿ ಹೇಳಿದ ಇನ್ನೊಬ್ಬ ಸೆಂಟ್ರಿ.

ತಕ್ಷಣ ಎರಡು ಕೈಗಳನ್ನೂ ಮೇಲೆತ್ತಿಬಿಟ್ಟ ಮಹೇಶ.

''ತಪ್ಪಾಯಿತು ಅಣ್ಣಂದಿರಾ... ದೇವರಾಣೆ ನನಗೆ ಎಸ್ಕೇಪ್ ಆಗುವಾಸೆಯಿಲ್ಲ, ಶರಣಾಗುತ್ತಿದ್ದೇನೆ'' ಎಂದು ಅನೌನ್ಸ್ ಮಾಡಿದ.

ಗಹಗಹಿಸಿ ನಕ್ಕ ಗಾರ್ಡ್ಸ್ ದರದರನೆ ಎಳೆದೊಯ್ದರು.

## 2

'ಟ್ರಿಣ್...ಟ್ರಿಣ್' ಎಂದು ಒಂದೇ ಸಮ ಫೋನ್ ಮೊಳಗ ತೊಡಗಿತ್ತು. ತಲೆಯೆತ್ತಿ ಅದರ ಕಡೆ ಅಸಹನೆಯಿಂದ ನೋಡಿದರು ಸೆಂಟ್ರಲ್ ಸರ್ವೀಸಿಂಗ್ ಸೆಲ್ ಚೀಫ್‌ಕರ್ನಲ್ ದಿನೇಶ್‌ಕುಮಾರ್.

ರಾತ್ರಿ ಹನ್ನೊಂದಾಗ ವೇಳೆ. ಯಾವುದೋ ಫೈಲ್ಸ್ ನೋಡುತ್ತಾ ಕುಳಿತಿದ್ದರವರು ತಮ್ಮ ಬಂಗಲೆಯಲ್ಲಿ. ಇಷ್ಟೊತ್ತಿನಲ್ಲಿ ಫೋನ್ ಮಾಡುವವರ್‍ಯಾರೆಂದು ಅರ್ಥವಾಗದೆ, ಅತ್ತ ನಡೆದು ರಿಸೀವರ್ ಎತ್ತಿ ಕಿವಿಗಾನಿಸಿಕೊಂಡರು.

ಆ ಕಡೆಯಿಂದೊಂದು ಧ್ವನಿ ಕೇಳಿಸಿ, ಕ್ಷಣ ಸ್ತಬ್ಧನಾದರು ಕರ್ನಲ್. ಇದುವರೆಗಿನ ಅವರ ಮುಖದ ಸಿಡುಕು ಮಾಯವಾಗಿ ಆ ಜಾಗದಲ್ಲಿ ಆತಂಕ ಪ್ರತ್ಯಕ್ಷವಾಯಿತು.

''ವಾಟ್! ವಾಟ್ ಡು ಯು ಮೀನ್? ಏನು ನೀನು

ಹೇಳುತ್ತಿರುವುದು?'' ಆಲ್‌ಮೋಸ್ಟ್ ಕೂಗುವ ಧ್ವನಿಯಲ್ಲಿ ಕೇಳಿದರು ಕರ್ನಲ್.

ಅತ್ತ ಬದಿಯ ಉತ್ತರ ಕೇಳಿದಾಗ ಕ್ಷೋಭೆಗೊಳಗಾಯಿತು ಅವರ ಮನ.

ಐದು ನಿಮಿಷ ಸೀರಿಯಸ್ಸಾಗಿ ಮಾತಾಡಿ ರಿಸೀವರ್ ಕ್ರೆಡಿಲ್ ಮಾಡಿದರು.

ಆರಿಹೋಗಿದ್ದ ಸಿಗಾರ್ ಪಕ್ಕಕ್ಕೆಸೆದು, ಹೊಸ ಸಿಗಾರನ್ನು ಹಚ್ಚಿಕೊಂಡರು. ಬುಸ್ ಬುಸ್ ಹೊಗೆಯುಗುಳುತ್ತ ಕೊಠಡಿಯಲ್ಲೇ ಶತಪಥ ಹಾಕತೊಡಗಿದರು.

ಎರಡು ನಿಮಿಷ ಯೋಚಿಸಿ ಒಂದು ನಿರ್ಣಯಕ್ಕೆ ಬಂದು, ಫೋನ್ ಬಳಿಗೆ ನಡೆದು, ಒಂದು ನಂಬರ್‌ಗೆ ಡಯಲ್ ಮಾಡಿದರು. ತಕ್ಷಣ ಬಂತು ರಿಪ್ಲೈ. ಒಂದೇ ಒಂದು ನಿಮಿಷ ಮಾತಾಡಿ ರಿಸೀವರ್ ಕೆಳಗಿಟ್ಟರು.

ನಂತರ ಅರ್ಜೆಂಟಾಗಿ ಡ್ರೆಸ್ ಮಾಡಿಕೊಳ್ಳತೊಡಗಿದರು.

★

ಮೂವರ ಮನದಲ್ಲೂ ಒಂದೇ ಯೋಚನೆ.

ನಡು ರಾತ್ರಿಯನ್ನು ಸಮೀಪಿಸುತ್ತಿರುವ ಈಗ ಅಷ್ಟೊಂದು ಅರ್ಜೆಂಟಾಗಿ ಏಕೆ ನಮ್ಮನ್ನು ಬರಹೇಳಿದರು ಬಾಸ್? ಏನಂತಹ ರಾಜಕಾರ್ಯ? ಗುರು ಬೇರೆ ಯಾವುದೋ ಅಸೈನ್‌ಮೆಂಟ್ ಮೇಲೆ ರಂಗೂನ್‌ಗೆ ಹೋಗಿರುವುದು ನಮ್ಮೆಲ್ಲರಿಗೂ ಗೊತ್ತು. ಇಂತಿರುವಾಗ ತಮ್ಮನ್ನು ಕರೆಸುತ್ತಿದ್ದಾರೆಂದರೆ ಏನೋ ಕುತ್ತಿಗೆಗೆ ನೇಣು ಬಿಗಿಯುವ ಅಸೈನ್‌ಮೆಂಟೊಂದು ತಮಗೆ ತಗುಲಿಕೊಳ್ಳಲಿದೆ.''

ಹಾಗೆಂದು ಯಾರೂ ತಮ್ಮ ಯೋಚನೆ ಹೊರಗಿಡುತ್ತಿರಲಿಲ್ಲ.

ಸೈಲೆಂಟಾಗಿ ಕಾರು ಡ್ರೈವ್ ಮಾಡುತ್ತಿದ್ದ ಚಂದನ್, ಹಿಂದಿನ ಸೀಟಿನಲ್ಲಿ ಕುಳಿತಿದ್ದರು ಶ್ಯಾಂ ಮತ್ತು ವಿಜಯ್.

★

''ಟೇಕ್ ಯುವರ್ ಸೀಟ್ಸ್.'' ಗಂಭೀರ ಧ್ವನಿಯಲ್ಲಂದರು ಕರ್ನಲ್. ''ಮೈ ಡಿಯರ್ ಏಜೆಂಟ್ಸ್, ನನ್ನ ಮಾತುಗಳನ್ನು ಏಕಾಗ್ರತೆಯಿಂದ ಆಲಿಸಿ. ಅರ್ಜೆಂಟ್ ಕಾರ್ಯಾಚರಣೆಯೊಂದರ ಮೇಲೆ ಮಹೇಶ ರಂಗೂನ್‌ಗೆ ಹೋಗಿರುವ ವಿಷಯ ನಿಮಗೂ ಗೊತ್ತು.'' ಮೂವರನ್ನೂ ನೋಡಿದರು.

ವಿಷಯ ತಮ್ಮ ಗುರುವಿನ ಕಡೆಗೇ ಟರ್ನಾದುದನ್ನು ಕಂಡು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.

''ಮಹೇಶ ಹೋಗಿ ಐದು ದಿನಗಳಾದವು. ನಾಳೆ ರಾತ್ರಿ ಎರಡು ಗಂಟೆಗೆ ಸರಿಯಾಗಿ ಬರ್ಮಾ ಸೀಕ್ರೆಟ್ ಸರ್ವೀಸ್ ಏಜೆಂಟ್ ಷಿಮೋಗಾನನ್ನು ಅವನು ಭೇಟಿಯಾಗಬೇಕು. ಈ ಅಸೈನ್‌ಮೆಂಟ್ ಬಗ್ಗೆ ಸಂಪೂರ್ಣ ವಿವರಗಳನ್ನರಿತಿರುವ ವ್ಯಕ್ತಿ ಅವನೊಬ್ಬನೇ. ಅವನ ಮೇಲೆ ಈ ಕಾರ್ಯಾಚರಣೆ ಆಧಾರಿತ ಎಂದರೂ ಅತಿಶಯೋಕ್ತಿಯಲ್ಲ. ಆದರೆ ಮಹೇಶ ರಂಗೂನ್ ಏರ್‌ಪೋರ್ಟ್‌ನಲ್ಲಿ ಕಾಲಿಡುತ್ತಿದ್ದಂತೆ ಅಪಾಯಗಳ ತಿರುಗಣೆಯಲ್ಲಿ ಸಿಕ್ಕಿಬಿದ್ದು ಏರ್‌ಪೋರ್ಟ್‌ನಲ್ಲೇ ಅವನಿಗೆ ಸ್ಮಗ್ಲರ್ ಎಂದು ಹಣೆಪಟ್ಟಿ ಹಚ್ಚಿದರೂ, ಅವರಿಂದ ಎಸ್ಕೇಪ್ ಆಗಿ ಸಿಟಿ ಪ್ರವೇಶಿಸಿದ. ನಂತರ ಅಲ್ಲಿನ ಒಬ್ಬ ಪ್ರಮುಖ ರಾಜಕೀಯ ನಾಯಕನೊಬ್ಬನ ಮರ್ಡರ್‌ನಲ್ಲಿ ಅವನ ಇನ್‌ವಾಲ್ವ್‌ಮೆಂಟ್ ಇದೆಯೆಂದು ನಕಲಿ ಎವಿಡೆನ್ಸ್ ಸಿಕ್ಕಿ ಅವನೀಗ ಅಲ್ಲಿ ಜೈಲಿನ ಅತಿಥಿಯಾಗಿದ್ದಾನೆ.''

ಮೂವರೂ ಸ್ತಬ್ಧರಾಗಿ ಕುಳಿತರು.

''ಚಂದನ್, ವಿಜಯ್, ವಿಜಯ್ ನೀವಿಬ್ಬರೂ ತಕ್ಷಣ ರಂಗೂನ್‌ಗೆ ಹೊರಟು ಬೈ ಹುಕ್ ಆರ್ ಕ್ರುಕ್ ಮಹೇಶನನ್ನು ಜೈಲಿನಿಂದ ಬಿಡಿಸಿ ಹೊರ ಕರೆತರಬೇಕು. ಶ್ಯಾಂ ಇಲ್ಲೇ ಕಮ್ಯೂನಿಕೇಷನ್ ವಿಂಗ್‌ನಲ್ಲಿ ನಿಮ್ಮ ಎಮರ್ಜೆನ್ಸಿ ಕರೆಗಾಗಿ ಕಾದಿರುತ್ತಾನೆ.

''ಅಟ್ ಎನಿ ಕಾಸ್ಟ್ ನಿಗದಿತ ವೇಳೆಗೆ ಷಿಮೋಗಾನನ್ನು ಮಹೇಶ ಭೇಟಿಯಾಗುವಂತೆ ಮಾಡುವುದು ನಿಮ್ಮ ಹೊಣೆ. ತುಸು ಎಚ್ಚರ

ತಪ್ಪಿದರೂ ನಿಮಗೂ ಅದೇ ಗತಿ ಕಾದಿದೆ ಎಂಬುದು ನೆನಪಿರಲಿ. ಆದ್ದರಿಂದ ಬಿ ವೆರಿ ವೆರಿ ಕೇರ್‌ಫುಲ್.

''ಇನ್ನೊಂದು ಗಂಟೆಯಲ್ಲಿ ನಿಮ್ಮ ಪ್ರಯಾಣ, ಅದಕ್ಕೆಲ್ಲಾ ಏರ್ಪಾಡಾಗಿದೆ. ಸ್ಪೆಷಲ್ ಎಫೆಕ್ಟ್ಸ್‌ನಲ್ಲಿ ನಿಮಗೇನು ಬೇಕೋ ಕೇಳಿ ಪಡೆದು ಪ್ರಯಾಣಕ್ಕೆ ಸಿದ್ಧರಾಗಿ. ಗುಡ್‌ಲಕ್'' ಅಂದರು ಕರ್ನಲ್.

ಮೇಲೆದ್ದು ಮೂವರೂ ಕ್ಯಾಬಿನ್‌ನಿಂದಾಚೆಗೆ ನಡೆದರು.

## 3

ಫಟ್ ಫಟ್ ನಾಲ್ಕು ಲಾಠಿಗಳು ಒಟ್ಟಿಗೆ ಮಹೇಶನ ತಲೆಯನ್ನು ಸಂಪರ್ಕಿಸಿದ್ದವು.

''ಸತ್ತೆನಪ್ಪೋ... ನಾನು ಸತ್ತೇ ಹೋದೆ'' ಎಂದು ಗಂಟಲು ಹರಿಯುವಂತೆ ಕೂಗಿಕೊಂಡು ನೆಲದ ಮೇಲೆ ಬಿದ್ದುಬಿಟ್ಟ ಮಹೇಶ.

ಅಷ್ಟೊತ್ತಿಗಾಗಲೇ ಸೀಳಿದ ತಲೆಯಿಂದ ರಕ್ತ ಧಾರಾಕಾರವಾಗಿ ಹೊರ ಬರತೊಡಗಿತ್ತು.

''ಬ್ಲಡಿರೋಗ್! ಎಷ್ಟುಕೊಬ್ಬು ನಿನಗೆ? ಸಹಕೈದಿಯ ಮೇಲೆ ಮರ್ಡರ್ ಅಟೆಂಪ್ಟ್ ಮಾಡಿದ್ದಲ್ಲದೆ, ಅಡ್ಡ ಬಂದ ಸೆಂಟ್ರಿಗೆ ಚೆನ್ನಾಗಿ ಹೊಡೆದು, ಜೈಲಿನಿಂದ ಎಸ್ಕೇಪ್ ಆಗಲು ಪ್ರಯತ್ನಿಸುವೆಯಾ? ಏನು ನೋಡುತ್ತಿರುವಿರಿ, ಒದೆಯಿರಿ'' ಅಂದ ಜೈಲ್ ಸೂಪರಿಂಟೆಂಡೆಂಟ್.

''ಸಾರ್, ತಪ್ಪಾಗಿ ಹೋಯಿತು. ಇದೊಂದು ಸಲ ನನ್ನ ಕ್ಷಮಿಸಿ ಬಿಡಿ.'' ಅಳುತ್ತಾ ಕೇಳಿಕೊಂಡ ಮಹೇಶ.

ಅವನ ವಿನಂತಿಗೆ, ಕೂಗಿಗೆ ಕಿವುಡಾದರು ಅವರು. ಹತ್ತು ನಿಮಿಷ

ಸತತವಾಗಿ ವಾಲಿಬಾಲ್, ಫುಟ್‌ಬಾಲ್‌ನಂತೆ ಆಡಿದರು. ನಂತರ ಹೊಡೆದೂ ಹೊಡೆದೂ ಸುಸ್ತಾಗಿ ಏದುಸಿರುಬಿಡುತ್ತಾ ನಿಂತರು.

''ಬ್ಲಡಿ ರ್‍ಯಾಸ್ಕಲ್, ನಿನ್ನಿಲ್ಲಿರಿಸಿಕೊಳ್ಳುವುದು ತಪ್ಪೆನಿಸುತ್ತಿದೆ ನನಗೆ. ಮೇಲಾಧಿಕಾರಿಗಳೊಡನೆ ಮಾತಾಡಿ ಆದಷ್ಟು ಬೇಗ ನಿನ್ನ ಮಾಂಡಲೇ ಜೈಲಿಗೆ ಕಳಿಸುವ ಏರ್ಪಾಡು ಮಾಡುತ್ತೇನೆ. ಅಲ್ಲಿಂದ ಬೇಕಾದರೆ ತಪ್ಪಿಸಿಕೊಳ್ಳುವೆಯಂತೆ. ಅಲ್ಲಿಯವರೆಗೆ ನಮ್ಮ ಸೆಲ್‌ನಲ್ಲೇ ಬಾಲ ಬಿಚ್ಚದೆ ತೆಪ್ಪಗೆ ಬಿದ್ದರು'' ಎಂದು ಗಾರ್ಡ್‌ಗಳಿಗೆ ಸನ್ನೆ ಮಾಡಿದ ಸೂಪರಿಂಟೆಂಡೆಂಟ್.

ತಲಾ ಇನ್ನೆರಡೇ ಎರಡು ಏಟು ಹಾಕಿ, ಸತ್ತ ಎಮ್ಮೆಯನ್ನು ಎಳೆದೊಯ್ಯುವಂತೆ ನೆಲದ ಮೇಲೆ ದರದರನೆ ಎಳೆದೊಯ್ದು, ಸೆಲ್‌ನೊಳಕ್ಕೆಸೆದು ಬಾಗಿಲು ಲಾಕ್ ಮಾಡಿದರು ಸೆಂಟ್ರಿಗಳು.

ಕಣ್ಣ ಕೊನೆಯಿಂದ ಮಹೇಶನತ್ತಲೇ ನೋಡುತ್ತಿದ್ದ ಅವನ ಸೆಲ್‌ಮೇಟ್. ನೋಡಲು ಮಾತ್ರ ನಿದ್ರಿಸುತ್ತಿರುವವನಂತೆ ಕಾಣುತ್ತಿದ್ದ.

''ಒದೆಗಳು ಚೆನ್ನಾಗಿ ಬಿದ್ದವೆ ಫ್ರೆಂಡ್?'' ಎಂಬ ಮಾತು ಮೆತ್ತಗೆ ಕೇಳಿಸಿ ಅದುರಿಬಿದ್ದು ಅತ್ತ ನೋಡಿದ ಮಹೇಶ.

ತನಗೆ ಸಹಾಯ ಮಾಡಿದ್ದ ಸಹಕೈದಿ ಸಣ್ಣಗೆ ನಗುತ್ತ, ಗೋಡೆಯನ್ನೊರಗಿ ಕುಳಿತಿದ್ದ. ಬಲವಂತವಾಗಿ ನಕ್ಕ ಮಹೇಶ.

''ನಾನು ಮೊದಲೇ ಹೇಳಿರಲಿಲ್ಲವೇ ಫ್ರೆಂಡ್? ನನ್ನ ಮಾತು ಕಿವಿಗೇ ಹಾಕಿಕೊಳ್ಳಲಿಲ್ಲ ನೀನು. ಇಲ್ಲಿನ ಸೆಂಟ್ರಿಗಳಿಗೂ ಕಳ್ಳು ಕುಡಿದ ಕೋತಿಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ದನಕ್ಕೆ ಬಡಿದಂತೆ ಬಡಿಯುತ್ತಾರೆ. ಐ ಯಾಮ್ ರಿಯಲಿ ಸಾರಿ ಮೈ ಫ್ರೆಂಡ್.'' ನೋವಿನ ಧ್ವನಿಯಲ್ಲಂದ ಆ ಕೈದಿ.

''ಇಟ್ಸಾಲ್‌ರೈಟ್ ಮಿಸ್ಟರ್...''

''ನವಿನ್'' ಅಂದ ಅವನ ಸೆಲ್‌ಮೇಟ್.

''ನವಿನ್... ಮೈ ಫ್ರೆಂಡ್. ನನ್ನ ಹೆಸರು ಮಹೇಶ್. ನಾನು ತಪ್ಪಿಸಿಕೊಳ್ಳಲಾರೆ ಎಂದು ಅಷ್ಟೊಂದು ಖಚಿತವಾಗಿ ಹೇಗೆ ಹೇಳಿದೆ?''

ಕೇಳಿದ ಮಹೇಶ ತುಸು ಬೆರಗಿನಿಂದಲೇ.

''ವೆರಿ ಸಿಂಪಲ್. ನಿನ್ನಂತೆಯೇ ನಾನೂ ಎರಡು ಸಲ ಎಸ್ಕೇಪ್ ಆಗಲು ಪ್ರಯತ್ನಿಸಿ ಸಿಕ್ಕಿಬಿದ್ದೆ. ನನ್ನನ್ನು ಎಗ್ಗಾ ಮಗ್ಗ ಹೊಡೆದರು'' ಅಂದ ನೆವಿನ್.

''ವೆಲ್... ಹಾಗಾದರೆ...''

''ನಿನ್ನ ಸಂಶಯ ನನಗರ್ಥವಾಯಿತು ಮಹೇಶ್. ಎರಡು ಸಾರಿ ತಪ್ಪಿಸಿಕೊಳ್ಳುವ ಪ್ರಯತ್ನವೆಸಗಿಯೂ ನನ್ನನ್ನೇಕೆ ಮಾಂಡಲೇ ಜೈಲಿಗೆ ಕಳಿಸಲಿಲ್ಲವೆಂದು ಆಶ್ಚರ್ಯಪಡುತ್ತಿರುವೆಯಾ?''

ಬೆಚ್ಚಿದ ಮಹೇಶ. ಟೆಲಿಪತಿಯ ಆಲೋಚನೆ ಮತ್ತೊಮ್ಮೆ ಬಂತು.

ತಾನೇ ಮಾತು ಮುಂದುವರೆಸಿದ ನೆವಿನ್, ''ನನ್ನಂತಹ ಸಣ್ಣಪುಟ್ಟ ಅಪರಾಧಿಗಳನ್ನು ಮಾಂಡಲೇ ಜೈಲಿಗೆ ಕಳಿಸುವುದಿಲ್ಲ, ಫ್ರೆಂಡ್ ಮಹೇಶ. ದೊಡ್ಡ ಸ್ಮಗ್ಲರ್ಸ್, ಮರ್ಡರರ್‌ಗಳನ್ನು, ಪೊಲಿಟಿಕಲ್ ಅಸಾಸಿನ್‌ಗಳನ್ನು ಮಾತ್ರ ಅಲ್ಲಿಗೆ ಕಳುಹಿಸುತ್ತಾರೆ. ನನಗೆ ತಿಳಿದಿರುವಂತೆ ಅಲ್ಲಿಗೆ ಹೋದವರೆಲ್ಲಾ ವಾಪಸ್ಸಾಗಿರುವುದು ಹೆಣಗಳಾಗಿ ಮಾತ್ರ.''

ಆ ಮಾತಿಗೆ ಲಘು ಕಂಪನಕ್ಕೊಳಗಾಯಿತು ಮಹೇಶನ ಶರೀರ. ನೆವಿನ್ ಕಡೆಗೆ ದಿಗ್ಭ್ರಮೆಗೊಂಡು ನೋಡಿದ.

''ಎಸ್ ಮಹೇಶ್... ಮಾಂಡಲೇ ಜೈಲಿನ ಬಗ್ಗೆ ಸಣ್ಣ ವಯಸ್ಸಿಂದಲೂ ಕೇಳಿದ್ದೇನೆ, ಓದಿದ್ದೇನೆ, ವಿಚಾರಿಸಿ ತಿಳಿದುಕೊಂಡಿದ್ದೇನೆ. ಅಲ್ಲಿ ಸತ್ತವರನ್ನು ಸಮುದ್ರಕ್ಕೆಸೆದು ಬಿಡುತ್ತಾರೆ. ಪ್ರಾಣ ಸಮೇತ ಹಿಂದಿರುಗಿ ವಿಕ್ರಮ ಸಾಧಿಸಿದವರ್‍ಯಾರೂ ಇಲ್ಲ.

''ರಂಗೂನ್ ನಗರದಿಂದ ನೂರು ಮೈಲಿ ದೂರದಲ್ಲಿರುವ ಬೋಲಾ ಐಲೆಂಡ್ ಮಧ್ಯದಲ್ಲಿನ ಮಾಂಡಲೇ ಜೈಲ್. ಅಲ್ಲಿರುವ ಅಧಿಕಾರಿಗಳು, ಸೆಂಟ್ರಿಗಳು ಮನುಷ್ಯರಲ್ಲ ಬಿಡು. ಇಲ್ಲಿನವರು ಅವರಿಗೆ ಕಂಪೇರ್ ಮಾಡಿದರೆ ದೇವರೆನ್ನಲೂ ಅಡ್ಡಿಯಿಲ್ಲ!'' ಎಂದು ಆ ಜೈಲಿನ ಬಗ್ಗೆ ವಿವರಿಸಿದ.

''ಐ.ಸೀ.'' ಅನ್ನುತ್ತಾ ತಲೆ ಕುಣಿಸಿದ ಮಹೇಶ.

''ನೀನು ಕೊಲೆಯ ಅಪರಾಧಿಯಾಗಿ ಇಲ್ಲಿಗೆ ಬಂದಿರುವ ಕಾರಣ, ಜೊತೆಗೆ ಎಸ್ಕೇಪ್‌ಗೆ ಪ್ರಯತ್ನಿಸಿದೆ ಎಂಬ ಕೋಪಕ್ಕೆ ನಿನ್ನನ್ನು ಆದಷ್ಟು ಬೇಗ ಅಲ್ಲಿಗೆ ರವಾನಿಸುವರೆಂದು ನನಗೆ ಡೌಟ್. ಅಲ್ಲಿಗೆ ಹೋಗುವುದಕ್ಕಿಂತಾ ಇಲ್ಲೇ ಸಾಯುವುದು ಸಾವಿರ ಪಾಲು ಮೇಲು'' ಅಂದ ನೆವಿನ್.

ಆಮೇಲೆ ಮಾತಾಡಲಿಲ್ಲ ಮಹೇಶ. ಅದೇಕೋ ಅವನ ಮನಸ್ಸು ಡಿಸಾಸ್ಟರ್ ಅನ್ನೇ ಶಂಕಿಸತೊಡಗಿತು. ತಾನೆಂತಹ ಟ್ರ್ಯಾಪ್‌ನಲ್ಲಿ ಸಿಕ್ಕಿಬಿದ್ದೆನೆಂದು ಅರಿವಾಗುತ್ತಿದ್ದಂತೆ ಬೆನ್ನ ಹುರಿಗೆ ಲೋಹ ಸ್ಪರ್ಶವಾದಂತೆ ಮೈ ಝುಂ ಎಂದಿತು.

ತನ್ನನ್ನು ಖಂಡಿತಾ ಮೂಂಡಲೇ ಜೈಲಿಗೆ ಕಳುಹಿಸುವರೆಂದು ಗ್ಯಾರಂಟಿಯಾಗಿಬಿಟ್ಟಿತ್ತು ಅವನಿಗೆ. ತಪ್ಪಿಸಿಕೊಳ್ಳುವ ಪ್ರಯತ್ನವೂ ವಿಫಲವಾಯಿತು. ನಾಳೆ ರಾತ್ರಿ ಎರಡು ಗಂಟೆಗೆ ಬರ್ಮೀಸ್ ಏಜೆಂಟ್ ಷಿಮೋಗಾನನ್ನು ಭೇಟಿಯಾದರೆ ಮಾತ್ರ ಅಸ್ಸೈನ್‌ಮೆಂಟ್‌ನ ಬಗ್ಗೆ ಪೂರ್ತಿ ವಿವರಗಳು ತಿಳಿಯಲು ಸಾಧ್ಯ. ಆದರೆ ತಾನಿಲ್ಲಿ!

''ಡೋಂಟ್ ವರಿ ಮಹೇಶ! ನಡೆದದ್ದನ್ನು ನೆನೆದು ಯೋಚಿಸುವುದರಿಂದೇನೂ ಪ್ರಯೋಜನ? ರೆಸ್ಟ್ ಆದರೂ ತೆಗೆದುಕೋ'' ಅಂದ ನೆವಿನ್.

ಮೆಲುನಗೆ ಬೀರಿ ತಲೆಯಾಡಿಸಿ ಕಣ್ಣು ಮುಚ್ಚಿಕೊಂಡ ಮಹೇಶ.

ಆಗವನ ಮನದಲ್ಲಿ ಮೂಡಿದ್ದು ಒಂದೇ ಹೆಸರು.

ವಾಂಗ್ ಛೂ?

ಆ ಸನ್‌ಆಫ್‌ಎ ಬಿಚ್‌ನಿಂದಲೇ ತನಗೀ ಸ್ಟೇಜ್ ಬಂದಿದ್ದು. ಬರ್ಮಾ ಸರ್ಕಾರದಲ್ಲಿ ಅವನಿಗೆಷ್ಟು ಪ್ರಭಾವವಿದೆಯೆಂದು ಈಗರಿವಾಗಿತ್ತು ತನಗೆ. ಏರ್‌ಪೋರ್ಟ್‌ನಲ್ಲಿ ಕಾಲಿಟ್ಟಾಗಿಂದ ನೀರು ಕುಡಿಯಲು ಅವಕಾಶ ಸಿಗದಂತೆ ಗಿರಗಿಟ್ಟಲೆ ಹೊಡೆಸುತ್ತಿದ್ದಾನೆ.

ಇನ್‌ಫ್ಯಾಕ್ಟ್ ಇಲ್ಲೇ ಅಲ್ಲ... ಈ ಅಸೈನ್‌ಮೆಂಟ್ ತನ್ನ ಕೈಗೆ ಬರುವ ಮೊದಲೇ ಭಾರತದಲೇ ತನ್ನ ಕೊಲಿಸಲು ಹುನ್ನಾರ ನಡೆಸಿದ. ಲೋಕಲ್

ಕ್ರಿಮಿನಲ್ಸ್ ಅನ್ನು ತನ್ನ ಮೇಲೆ ಛೂ ಬಿಟ್ಟ. ಅಲ್ಲಿ ಫೈಲಾದಾಗ ಇಲ್ಲಿ ತನ್ನ ಆಗಮನ ನಿರೀಕ್ಷಿಸಿ, ಇಲ್ಲೊಂದು ಪೊಗದಸ್ತಾದ ವ್ಯೂಹವನ್ನೇ ರಚಿಸಿದ.

ವಾಂಗ್ ಛೂ... ಅವನ್ಯಾರೇ ಆಗಿರಲಿ...ತನಗಿಂತಲೂ ಎರಡು ಸ್ಟೆಪ್ ಮುಂದಿದ್ದಾನೆಂಬುದು ಮಾತ್ರ ನಿಜ.

ನಡೆದ ಘಟನೆಗಳು ಅಲೆಯಲೆಯಾಗಿ ಅವನ ಕಣ್ಣ ಮುಂದೆ ಹಾದು ಹೋದವು...

## 4

ಗ್ಲಾಸ್‌ನಲ್ಲಿದ್ದ ಕೊನೆಯ ಗುಟುಕು ವಿಸ್ಕೀ ಹೀರಿ ಗ್ಲಾಸ್ ಟೇಬಲ್ ಮೇಲಿರಿಸಿ ಮೇಲೆದ್ದ ಮಹೇಶ. ಬಿಲ್ ಸಲ್ಲಿಸಿ ಹೊರನಡೆದ.

ರೆಕ್ಸ್ ಬಾರ್‌ನ ರೆಗ್ಯುಲರ್ ವಿಸಿಟರ್ ಅವನು. ಆ ಬಾರ್‌ನ ಜಂಟಿ ಓನರ್ಸ್ ಜಾನಿ, ಖಾದರ್ ಅಂಡರ್‌ವರ್ಲ್ಡ್‌ನ ಅವನ ಕಾಂಟಾಕ್ಟ್ಸ್. ಅವರಿಂದ ಸಾಕಷ್ಟು ಮಾಹಿತಿ ಸಿಗುತ್ತಿತ್ತವನಿಗೆ ಅಂಡರ್ ವರ್ಲ್ಡ್ ಆಕ್ಟಿವಿಟೀಸ್ ಬಗ್ಗೆ, ಒಂದಷ್ಟು ನಿಗದಿತ ಮೊತ್ತಕ್ಕೆ. ಈ ದಿನ ಅದೇಕೋ ಅವರಿಬ್ರೂ ಅವನನ್ನು ಕಂಡೂ. ಕಾಣದಂತೆ ಓಡಾಡಿದ್ದರು. ಬಹುಶಃ ಏನೂ ಮಾಹಿತಿಯಿಲ್ಲವೇನೋ ಎಂದವರನ್ನು ಮಾತಾಡಿಸದೆ ಹೊರನಡೆದಿದ್ದ ಮಹೇಶ.

''ಹಲೋ ಮಿಸ್ಟರ್!'' ಎಂಬ ಕೂಗು ಕೇಳಿಸಿ ತಲೆ ತಿರುಗಿಸಿ ನೋಡಿದ.

ಎದುರಿಗೆ ನಾಲ್ವರು ದೃಢಕಾಯರು ಬಿಡಿ ಬಿಡಿಯಾಗಿ ನಿಂತಿದ್ದರು.

ಏನು ಅನ್ನುವಂತೆ ಹುಬ್ಬು ಕುಣಿಸಿದ.

''ಮಿಸ್ಟರ್ ಅನ್ಸಾರಿ ನಿನ್ನನ್ನು ನೋಡಲಿಚ್ಛಿಸುತ್ತಾರೆ'' ಅಂದ

ಅವರಲ್ಲೊಬ್ಬ.

ಅನ್ಸಾರಿ...ಅನ್ಸಾರಿ ಯಾರವನು? ತಟಕ್ಕನೆ ನೆನಪಾಗಿತ್ತು.

ಹಿಂದೆಲ್ಲಾ ಅವನ ಹೆಸರು ಪ್ರತಿದಿನ ಪೇಪರ್‌ನಲ್ಲಿ ಬರುತ್ತಿದ್ದರೂ ಈಗಷ್ಟು ಚಲಾವಣೆಯಲ್ಲಿರಲಿಲ್ಲ. ದೊಡ್ಡ ಸ್ಮಗ್ಲರ್ ಅವನು. ಪೊಲೀಸ್ ಕಸ್ಟಡಿಯಿಂದ ಸಾಕಷ್ಟು ಸಲ ಎಸ್ಕೇಪ್ ಆದವನು. ದೆಹಲಿ ಪೊಲೀಸರ ವಾಂಟೆಡ್ ಲಿಸ್ಟ್‌ನಲ್ಲಿ ಇನ್ನೂ ಇದ್ದಾನವನು. ಫಾರಿನ್ ಕನೆಕ್ಷನ್ ಸಹ ಇದೆಯೆಂದು ರೂಮರ್.

ಅವನು, ಇವರ ಮಿಸ್ಟರ್ ಅನ್ಸಾರಿ ಒಬ್ಬನೇನಾ? ತನ್ನನ್ನು ತಾನೇ ಕೇಳಿಕೊಂಡ ಮಹೇಶ.

''ಯಾರು ನೀವು? ಈ ಮಿಸ್ಟರ್ ಅನ್ಸಾರಿ ಯಾರು?'' ಕೇಳಿದ.

''ಡಿಯರ್ ಕಿಲ್ ಮಾಸ್ಟರ್, ವಿವರಗಳನ್ನಿಲ್ಲೇ ಅರಿಯುವುದು ಒಳ್ಳೆಯ ವಿಧಾನವಲ್ಲಾ. ಹೇಳಿದವರು ಹೇಳಿದರೇನೇ ಚೆಂದ, ನಮ್ಮೊಡನೆ ಬಂದರೆ ಎಲ್ಲಾ ವಿವರಗಳನ್ನೂ ಅರಿಯಬಹುದು'' ಅಂದ ಆ ವ್ಯಕ್ತಿ.

ಕಿಲ್ ಮಾಸ್ಟರ್ ಅಂದರೆ ತಾನ್ಯಾರೆಂದು ಇವರಿಗೆ ಗೊತ್ತು. ಹೇಗೆ ತಿಳಿಯಿತು? ಖಾದರ್, ಜಾನಿಯರ ವ್ಯವಹಾರವೇ ಇದು? ಅದಕ್ಕೇ ತಲೆ ತಪ್ಪಿಸಿಕೊಂಡು ತಿರುಗಿದರೆ?

ಮಹೇಶ ಯೋಚಿಸತೊಡಗಿದ. ತಾನು ನಿರೀಕ್ಷಿಸಿಯೇ ಇರದ ಘಟನೆ ಇದು. ಸದ್ಯಕ್ಕೇನೋ ತನ್ನ ಕೈ ಖಾಲಿಯೇ. ಯಾವುದೇ ಅಸೈನ್‌ಮೆಂಟಿಲ್ಲ. ಡೆಪ್ತ್‌ನಲ್ಲಿ ನೋಡಿದರೆ ಇದೆಲ್ಲಾ ಯಾವುದೋ ವ್ಯೂಹದ ಒಂದಂಶ ಅನಿಸುತ್ತದೆ. ತನಗಾಗಿಯೇ ಹಾಕಿದಂತಿದೆ ಈ ಪ್ಲಾನ್. ಇವರ ಬುಡ ಏಕೆ ನೋಡಬಾರದು?

ಭುಜ ಎಗರಿಸಿ, ''ಆಲ್‌ರೈಟ್! ನಡೆಯಿರಿ ಹೋಗೋಣ. ನನಗೂ ನಿಮ್ಮ ಅನ್ಸಾರಿಯನ್ನು ನೋಡುವ ಆಸೆಯಾಗಿದೆ'' ಅಂದ.

ಟೆನ್ಷನ್‌ನಿಂದ ಬಿಗಿದಿದ್ದ ಅವರ ಮೈಗಳು ಸಡಿಲಗೊಂಡವಾಗ.

''ಥ್ಯಾಂಕ್ಯೂ ಸರ್! ಹೀಗೆಯೇ ಗಮ್ಯದವರೆಗೆ ಯಾವುದೇ ತರಲೆ ಮಾಡದೆ ಸಹಕರಿಸಿದರೆ ಸಾಕು'' ಅಂದ ಆ ವ್ಯಕ್ತಿ.

''ಫ್ರೆಂಡ್ಸ್! ನಿಮ್ಮಿಂದ ಪಾರಾಗುವುದು ನನಗೆ ಚಿಟಿಕೆ ಹೊಡೆದಷ್ಟೇ ಸುಲಭದ ಕೆಲಸ. ಇಂತಿರುವಾಗ ನಾನೇ ಬರುವೆನೆಂದು ಹೇಳಿದ ಮೇಲೂ ನನ್ನ ಸಹಕಾರದ ಬಗ್ಗೆ ಸಂಶಯವೇ? ಎಲ್ಲಿ ಟ್ರಾನ್ಸ್‌ಪೋರ್ಟ್?'' ಎನ್ನುತ್ತಾ ಸುತ್ತಲೂ ನೋಡಿದ ಮಹೇಶ.

ಆಗಲೇ ಪೇವ್‌ಮೆಂಟ್ ಪಕ್ಕಕ್ಕೆ ಬಂದು ನಿಂತಿತ್ತೊಂದು ಅಂಬಾಸಿಡರ್ ಕಾರು.

ಮಹೇಶ ಹತ್ತಿದ ಮೇಲೆ ಅವರೂ ಹತ್ತಿ ಕುಳಿತರು. ಯಥಾಪ್ರಕಾರ ಬಾರ್ ಕಡೆಗೆ ದಿಟ್ಟಿಸಿದ ಮಹೇಶ.

ಅವನ ಬಳಿ ಮಾತಾಡಿದ ವ್ಯಕ್ತಿಗೆ ಹೆಚ್ಚೆಟ್ ಸಿಗ್ನಲ್ ಮಾಡುತ್ತಿರುವ ಜಾನಿ, ಖಾದರ್ ಕಣ್ಣಿಗೆ ಬಿದ್ದರು. ಕ್ರೂರ ನಗೆಯೊಂದು ಮಿಂಚಿ ಮರೆಯಾಯಿತು ಮಹೇಶನ ತುಟಿಗಳ ಮೇಲೆ. 'ಐ ಷಲ್ ಕಮ್ ಅಂಡ್ ಸೀಯು ಬಾಸ್ಟರ್ಡ್.'

ಕಾರು ಸ್ಟಾರ್ಟಾಗಿ ಮುನ್ನಡೆಯಿತು. ಸ್ಟೀರಿಂಗ್ ಬದಿಯ ಒಂದು ಬಟನ್ ಅದುಮಿದ ಚಾಲಕನ ಸ್ಥಾನದಲ್ಲಿದ್ದ ಆ ವ್ಯಕ್ತಿ. ತಕ್ಷಣ ಎಲ್ಲಾ ವಿಂಡೋಗಳನ್ನೂ ಬ್ಲಾಕ್ ಗ್ಲಾಸಸ್ ಕವರ್ ಮಾಡಿದವು. ತಾನೆಲ್ಲಿಗೆ ಹೋಗುತ್ತಿರುವೆನೆಂದು ತಿಳಿಯುವ ಮಹೇಶನಾಸೆ ಮೊದಲಿನಲ್ಲೇ ವಿಫಲಗೊಂಡಿತು. ಕಾರೆತ್ತ ಹೋಗುತ್ತಿದೆಯೆಂದೇ ಅರ್ಥವಾಗುತ್ತಿರಲಿಲ್ಲ.

ಭುಜ ಎಗರಿಸಿ ಸೀಟಿಗೆ ತಲೆಯೊರಗಿಸಿ ಕಣ್ಣು ಮುಚ್ಚಿದ. ಛಾನ್ಸ್ ಸಿಕ್ಕಾಗ ರೆಸ್ಟ್ ತೆಗೆದುಕೊಳ್ಳಬೇಕೆನ್ನುವುದು ಅವನಿಗೆ ಅನುಭವ ಕಲಿಸಿದ ಪಾಠ.

ಸಡನ್ ಆಗಿ ನಿಂತಿತು ಕಾರು. ಬೆಚ್ಚಿ ಕಣ್ಣು ತೆರೆದ ಮಹೇಶ.

ಮಹೇಶನ ಕಡೆ ನೋಡಿ ನಕ್ಕ ಆ ವ್ಯಕ್ತಿ.

''ಟ್ರಬಲ್ ಕೊಟ್ಟಿದ್ದಕ್ಕೆ ಕ್ಷಮಿಸು ಕೆ-7. ನೀನು ಮಾತಿನಂತೆ ನಡೆದದ್ದಕ್ಕೆ ತುಂಬಾ ಸಂತೋಷವಾಗಿದೆ. ಆದರೂ ವಯಲೆಂಟ್ ತೀರಾ ವಯಲೆಂಟ್ ಏಜೆಂಟ್ ನೀನು. ಸೋ...'' ಅನ್ನುತ್ತಾ ತನ್ನವರ ಕಡೆ ನೋಡಿದ. ಪಿಸ್ತೂಲುಗಳನ್ನು ಹೊರ ತೆಗೆದರವರು. ''ನಾವು

ಸೇರಬೇಕಾದ ಜಾಗ ತಲುಪಿದ್ದೇವೆ. ಪ್ಲೀಜ್ ಗೆಟ್ ಡೌನ್'' ಅಂದ.

ಮುಖದಲ್ಲಿ ಯಾವುದೇ ಭಾವ ತೋರಗೊಡದೆ ಕೆಳಗಿಳಿದ ಮಹೇಶ.

ಆ ಪ್ರದೇಶದಲ್ಲಿ ಕಾರ್ಗತ್ತಲು ತುಂಬಿತ್ತು. ಎತ್ತ ನೋಡಿದರೂ ಏನೂ ಕಾಣಿಸದು. ಕ್ಷಣ ಯೋಚನೆಗೆ ಬಿದ್ದ. ಯಾವುದೀ ಏರಿಯಾ? ಇಲ್ಲಿಗೇಕೆ ಕರೆತಂದರು? ಎಷ್ಟು ಯೊಚಿಸಿದರೂ ಅರ್ಥವಾಗಲಿಲ್ಲ.

ಸುತ್ತಲೂ ಮತ್ತೊಮ್ಮೆ ನೋಡಿದ.

ನೋ ಯೂಸ್.

''ಕಮಾನ್ ಸರ್... ಪ್ಲೀಸ್ ಫಾಲೋ ಮಿ'' ಅನ್ನುತ್ತಾ ಮುಂದೆ ನಡೆದವನನ್ನು ಹಿಂಬಾಲಿಸಿದ ಮಹೇಶ.

ಹಿಂದೆ ಪಿಸ್ತೂಲುಗಳಿಂದ ಕವರ್ ಮಾಡುತ್ತಾ ಬಂದರು ಮಿಕ್ಕವರು.

ಐದು ನಿಮಿಷಗಳ ನಂತರ ಒಂದು ಸ್ಪಾಟ್‌ಗೆ ಕರೆದೊಯ್ದು ನಿಲ್ಲಿಸಿದರು. ಒಮ್ಮೆ ಕ್ಲಾಪ್ ಮಾಡಿದ ಮುಂದಿದ್ದ ವ್ಯಕ್ತಿ.

ಮರುಕ್ಷಣ ಫಳಕ್ ಫಳಕ್ ಎಂದು ಬೆಳಗಿದವು ಲೈಟ್ಸ್.

ತಾನೊಂದು ವಿಶಾಲವಾದ ಹಾಲ್‌ನಲ್ಲಿ ನಿಂತಿರುವನೆಂದು ಅರ್ಥವಾಯಿತು ಮಹೇಶನಿಗೆ. ಅಲ್ಲಿನ ದೃಶ್ಯ ನೋಡಿದಾಗ ತುಸು ಆತಂಕವುಂಟಾಗಿತ್ತು ಅವನಿಗೆ.

ಒಬ್ಬರಲ್ಲ...ಇಬ್ಬರಲ್ಲ... ಸುಮಾರು ಮೂವ್ವತ್ತು ದೃಢಕಾಯ ಪಿಸ್ತೂಲುಗಳನ್ನಿಡಿದು ಸುತ್ತಲೂ ನಿಂತಿದ್ದರು.

ಮಧ್ಯದಲ್ಲಿದ್ದ ಅವನು.

ತನ್ನನ್ನು ಕರೆತಂದವರ ಹಿಂದೆ ಯಾವುದೋ ದೊಡ್ಡ ಸಂಸ್ಥೆಯೇ ಇದೆಯೆಂದು ಕ್ಷಣವಾಗಿ ಗ್ರಹಿಸಿದ ಮಹೇಶ.

ಆಗಲೇ ಒಂದು ಕೊಠಡಿಯಿಂದ ಹೊರ ಬಂದ ಆರಡಿ ಎತ್ತರದ, ಸಾಲಿಡ್ ಪರ್ಸನಾಲಿಟಿಯ ವ್ಯಕ್ತಿಯೊಬ್ಬ. ಅವನ ಗತ್ತು, ಅವನ ಠೀವಿ ಅವನೇ ಅನ್ಸಾರಿ ಎಂದು ಸಾಬೀತುಪಡಿಸಿತು. ಪೊಲೀಸ್ ಫೈಲ್ಸ್‌ನಲ್ಲಿರುವ ಫೋಟೋಗೂ ಈಗ್ಗೂ ಬಹಳವೇ ಬದಲಾವಣೆಗೊಂಡಿದ್ದ. ಅವನ ಕಣ್ಣುಗಳು ಮಾತ್ರ ಕೆಂಪು ಗೋಲಿಗಳಂತೆ ಉರಿಯುತ್ತಿದ್ದವು.

''ವೆಲ್‌ಕಮ್ 'ಜಿಂಕೆ'... ಹಾರ್ಟಿ ವೆಲ್ ಕಂ. ನನ್ನ ಆಹ್ವಾನವನ್ನು ಕಡೆಗಣಿಸದೆ, ಅದರಲ್ಲೂ ಯಾವುದೇ ರಗಳೆ ಮಾಡದೆ ಇಲ್ಲಿಗೆ ಬಂದದ್ದಕ್ಕೆ ಬಹಳ ಖುಷಿಯಾಗಿದೆ. ಪ್ಲೀಜ್ ಟೇಕ್ ಯುವರ್ ಸೀಟ್'' ಅಂದ ಅನ್ಸಾರಿ.

''ಥ್ಯಾಂಕ್ಸ್ ಫ್ರೆಂಡ್ ಅನ್ಸಾರಿ'' ಅನ್ನುತ್ತಾ ಅಲ್ಲಿದ್ದ ಒಂದು ಕುರ್ಚಿಯಲ್ಲಿ ಕುಳಿತ ಮಹೇಶ.

''ಮಿಸ್ಟರ್ ಮಹೇಶ್. ನೀನು ಬಹಳ ಬುದ್ಧಿವಂತ. ಅದೇ ಬುದ್ಧಿಯಿಂದ ಇಲ್ಲಿ ನಾವೇಳಿದಂತೆ ಕೇಳಿಕೊಂಡು ಇರುವವರೆಗೆ ನಿನಗ್ಯಾವುದೇ ತೊಂದರೆಯಿಲ್ಲವೆಂದು ನಾನು ಗ್ಯಾರಂಟಿ ನೀಡುತ್ತೇನೆ'' ಅಂದ ಅನ್ಸಾರಿ.

''ದಟೀಸ್ ಓ.ಕೆ. ಅನ್ಸಾರಿ... ಆ ವಿಷಯ ನಮ್ಮವರು ಮೊದಲೇ ಹೇಳಿದ್ದಾರೆ. ಆದರೆ ನನಗೆ ಫೀಲ್ ಆದದ್ದು ಒಂದೇ ಒಂದು ವಿಷಯಕ್ಕೆ'' ಅಂದ ಮಹೇಶ.

''ಏನದು?'' ಕೇಳಿದ ಅನ್ಸಾರಿ ಆಶ್ಚರ್ಯದಿಂದ.

''ಕೇವಲ ನನ್ನನ್ನಿಲ್ಲಿಗೆ ಕರೆಸಲು ಇಷ್ಟೊಂದು ಡ್ರಾಮಾ ಆಡುವ ಅವಶ್ಯಕತೆಯಿರಲಿಲ್ಲ. ನಿನ್ನಂತಹವರ ಆಹ್ವಾನ ಅಂಗೀಕರಿಸುವುದೇ ನನ್ನ ಅಭ್ಯಾಸವೆಂದು ನಿನಗೂ ಗೊತ್ತಿರಬೇಕು. ನೀನಿಷ್ಟು ಕಷ್ಟ ಪಡುವ ಅವಶ್ಯಕತೆಯೇ ಇರಲಿಲ್ಲ'' ಅಂದ ಮಹೇಶ.

ಸ್ವಲ್ಪಹೊತ್ತು ಮಾತಾಡಲಿಲ್ಲ ಅನ್ಸಾರಿ. ಆಮೇಲೆ ಗಂಟಲು ಖೇಕರಿಸಿ, ''ಮಿಸ್ಟರ್ ಮಹೇಶ್ ನೀನು ಅಸಾಮಾನ್ಯನೆಂದು ನಮಗೆ ಗೊತ್ತು. ಆದ್ದರಿಂದಲೇ ನಮ್ಮ ಎಚ್ಚರಿಕೆಯಲ್ಲಿ ನಾವಿದ್ದವು. ಸೋ... ಇಲ್ಲಿಯವರೆಗೆ ಅನ್ಸಾರಿಯ ಪ್ಲಾನ್ ಅಚ್ಚುಕಟ್ಟಾಗಿ ಜಾರಿಗೊಂಡಿದೆ. ಯೂ ನೋ... ನಿನಗಿನ್ನೂ ನನ್ನ ವಿಷಯ ಸರಿಯಾಗಿ ಗೊತ್ತಿಲ್ಲ!'' ಗರ್ವದಿಂದ ಹೇಳಿದ.

ಗಹಗಹಿಸಿ ನಕ್ಕ ಮಹೇಶ.

ಅಲ್ಲಿದ್ದ ಎಲ್ಲರೂ ಸ್ತಬ್ಧರಾದರು ಅವನ ನಡವಳಿಕೆಗೆ.

''ಏಕೆ 'ಜಿಂಕೆ' ಏಕೆ ಆ ನಗು?'' ಸೀರಿಯಸ್ಸಾಗಿ ಕೇಳಿದ ಅನ್ಸಾರಿ.

''ಡಿಯರ್ ಅನ್ಸಾರಿ, ನಿನ್ನನ್ನು ನೋಡಿದರೆ ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುತ್ತಾ ಪ್ರಪಂಚವೂ ಕಣ್ಣು ಮುಚ್ಚಿದೆ ಅಂದುಕೊಳ್ಳುವ ಗಾದೆ ನೆನಪಾಯಿತಷ್ಟೇ. ನಿನ್ನ ಬಗ್ಗೆ ಯಾರಿಗೆ ಗೊತ್ತಿಲ್ಲವೆಂದುಕೊಂಡಿರುವೆ? ನಿನಗಾಗಿ ದೆಹಲಿ ಪೊಲೀಸರು ಮೂಲೆ ಮೂಲೆಯನ್ನೂ ತಡಕುತ್ತಿದ್ದಾರೆ'' ಅಂದ ಮಹೇಶ.

''ವಾಟ್!?''

''ಎಸ್ ಮ್ಯಾನ್. ಐದು ವರ್ಷಗಳಿಂದ ತಪ್ಪಿಸಿಕೊಂಡು ತಿರುಗುತ್ತಿರುವ ನಿನ್ನನ್ನು ಅಷ್ಟು ಸುಲಭವಾಗಿ ಮರೆತುಬಿಟ್ಟಾರೆಯೇ ಖಾಕಿ ಬಟ್ಟೆಯ ಜನ? ನಿನ್ನ ಸ್ಮಗ್ಲಿಂಗ್ ವ್ಯವಹಾರಗಳ ಬಗ್ಗೆ ಅವರಿಗೆ ಗೊತ್ತಿಲ್ಲವೆಂದುಕೊಂಡಿರುವೆಯಾ? ವರ್ಷದ ಬ್ರೌನ್‌ಷುಗರ್ ಕನ್‌ಸೈನ್‌ಮೆಂಟ್‌ನೊಡನೆ ಸಿಕ್ಕಿಬಿದ್ದು ಕೊನೆಯ ಕ್ಷಣದಲ್ಲಿ ಅದೃಷ್ಟ ಚೆನ್ನಾಗಿದ್ದು ತಪ್ಪಿಸಿಕೊಂಡೆ. ನಿನಗಾಗಿ ಸಿ.ಐ.ಡಿ.ಗಳು ಬೇಟೆ ನಾಯಿಗಳಂತೆ ರೌಂಡ್ಸ್ ಹೊಡೆಯುತ್ತಿದ್ದಾರೆ ಅನ್ಸಾರಿ.'' ನಗುತ್ತಾ ಹೇಳಿದ ಮಹೇಶ.

ಅನ್ಸಾರಿಯ ಮುಖ ಕಪ್ಪಿಟ್ಟಿತು. ''ನೋ... ಇದೆಲ್ಲಾ ಸುಳ್ಳು. ಹಸೀ ಸುಳ್ಳು...!'' ಗಂಟಲು ಹರಿಯುವಂತೆ ಕೂಗಿಕೊಂಡ.

''ನೀನು ಸೀಲಿಂಗ್ ಬಿದ್ದುಹೋಗುವಷ್ಟು ಜೋರಾಗಿ ಅರಚಿದರೂ ಸತ್ಯ ಸುಳ್ಳಾಗದು ಅನ್ಸಾರಿ... ಪಾಪ ಅವರು ನೀನು ದೇಶ ಬಿಟ್ಟಿರುವೆ ಅಂದುಕೊಂಡಿದ್ದಾರೆ. ಇಲ್ಲೇ ಸುತ್ತುತ್ತಿರುವೆಯೆಂದು ಗೊತ್ತಿಲ್ಲ. ನಿನ್ನ ಟೈಂ ಸಮೀಪಿಸಿದೆ ಅನ್ಸಾರಿ... ಬಹಳ ಹುಷಾರಾಗಿರು'' ಅಂದ ಮಹೇಶ.

''ಷಟಪ್... ತಲೆ ಹರಟೆ ನಿಲ್ಲಿಸು'' ಅಂದ ಅನ್ಸಾರಿ ಕಟುವಾಗಿ.

ಭುಜ ಎಗರಿಸಿದ ಮಹೇಶ. ''ಓ.ಕೆ. ಫ್ರೆಂಡ್, ಇಷ್ಟಕ್ಕೂ ನನ್ನನ್ನಿಲ್ಲಿಗೆ ಕರೆಸಿದ ಕಾರಣವೇನು? ಹೇಳಿಬಿಟ್ಟರೆ ಅನುಕೂಲ...'' ಜೇಬಿನಿಂದ ಸಿಗರೇಟ್ ಪ್ಯಾಕ್ ತೆಗೆದು, ಸಿಗರೇಟೊಂದು ಹಚ್ಚಿಕೊಂಡು ಕೂಲಾಗಿ ಕೇಳಿದ ಮಹೇಶ.

''ಜಸ್ಟ್ ವೈಟ್ ಮಿಸ್ಟರ್ ಮಹೇಶ... ಊಟ ಮಾಡುವುದೇ

ಊಟಂತೆ, ರುಚಿಯ ಪ್ರಸ್ತಾಪ ಮೊದಲೇ ಏಕೆ?'' ಅಂದ ಅನ್ಸಾರಿ.

''ಡಿಯರ್ ಸರ್, ನನಗೆ ಡೈರೆಕ್ಟಾಗಿ ವ್ಯವಹಾರಿಸಿಯೇ ಅಭ್ಯಾಸ. ಆದ್ದರಿಂದ ನೀನು ಡೈರೆಕ್ಟಾಗಿ ವಿಷಯ ತಿಳಿಸಿಬಿಟ್ಟರೆ ಒಳ್ಳೆಯದು...'' ಸಿಗರೇಟ್ ಹೊಗೆ ಉಂಗುರುಂಗುರವಾಗಿ ಹೊರಚೆಲುತ್ತಾ ಹೇಳಿದ ಮಹೇಶ.

''ವೆರಿಗುಡ್ ಮಹೇಶ್. ನನಗೂ ತಿರುವು ಪರವಿನ ವ್ಯವಹಾರ ವೆಂದರೆ ಆಗದು'' ಅಂದ ಅನ್ಸಾರಿ.

''ದೆನ್ ಟೆಲ್ ಮಿ ವಾಟಿಟೀಸ್?''

''ಓ.ಕೆ. ಹದಿನೈದು ದಿನಗಳ ಕಾಲ ನೀನು ನಮ್ಮ ಗೌರವಾನ್ವಿತ ಅತಿಥಿಯಾಗಿರಬೇಕು.'' ಅಂದ ಅನ್ಸಾರಿ ಮುಗುಳ್ನಗೆ ಬೀರುತ್ತಾ.

ಅರ್ಥವಾಗದವನಂತೆ ನೋಡಿದ ಮಹೇಶ.

ನಿನಗೆ ಅರ್ಥವಾಗದವದೆಂದು ನನಗೆ ಚೆನ್ನಾಗಿ ಗೊತ್ತು. ಏಕೆ, ಏನು ಎಂದೆಲ್ಲಾ ಕೇಳಬೇಡ. ಹದಿನೈದು ದಿನ ನೀನಿಲ್ಲೇ ಇದ್ದುಬಿಡಬೇಕು. ಹೊರಗಡೆಗೆ ಹೋಗುವಂತೆಯೇ ಇಲ್ಲ.''

''ಈಸಿಟ್?''

''ಹೌದು ಮಹೇಶ. ಜಸ್ಟ್ ಫಾರ್ ಫಿಫ್ಟೀನ್ ಡೇಸ್.''

''ವಿವರವಾಗಿ ಹೇಳಿದರೇನೇ ಚೆಂದ'' ಅಂದ ಮಹೇಶ.

''ಮೊದಲೇ ಹೇಳಿದೆನಲ್ಲ... ಏಕೆ, ಏನೆಂದು ಪ್ರಶ್ನಿಸಬೇಡವೆಂದು!''

''ನಿನ್ನನ್ನು ಬಂಧಿಸಿಯಾದರೂ ಇಲ್ಲಿರಿಸಿಕೊಳ್ಳುತ್ತೇವೆ ಮಹೇಶ್'' ಅಂದ ಅನ್ಸಾರಿ.

''ಅದು ನಿನ್ನ ಕೈನಿಂದಾಗದ ಕೆಲಸ ಅನ್ಸಾರಿ... ನಿನ್ನ ಬಳಿ ಹದಿನೈದು ದಿನಗಳಲ್ಲ... ತಿಂಗಳಿರಲೂ ನನ್ನದೇನೂ ಅಭ್ಯಂತರವಿಲ್ಲ. ಆದರೆ ಏಕೆಂಬ ಕಾರಣ ಬೇಕೆ ಬೇಕು.'' ಅವನ ಮನಸ್ಸಿನೊಳಹೊಕ್ಕು ನೋಡುವ ಇರಾದೆಯಿಂದ ಹೇಳಿದ ಮಹೇಶ.

''ನೋ ಫ್ರೆಂಡ್ ಮಹೇಶ ವಿವರಗಳನ್ನು ತಿಳಿಯಲೋದರೆ ನಿನಗೇ ಅಪಾಯ. ನೀನು ಮಾಡಬೇಕಾಗಿರುವುದು ಒಂದೇ ಕೆಲಸ. ನಾವು

ಬಿಡುಗಡೆ ಮಾಡುವವರೆಗೆ ಇಲ್ಲಿ ನೆಮ್ಮದಿಯಾಗಿರುವುದಷ್ಟೇ. ಆಗುವುದಿಲ್ಲವೆಂದು ಪ್ರತಿಭಟಿಸಿದರೆ ಮಾತ್ರ ನಿನ್ನನ್ನು ಬಂಧಿಸಿಯಾದರೂ ಇಲ್ಲೇ ಇರಿಸಿಕೊಳ್ಳುತ್ತೇವೆ. ತಪ್ಪಿಸಿಕೊಳ್ಳಲು ಪ್ರಯತ್ನಿಸಿದೆಯೋ... ಹುಚ್ಚು ನಾಯಿಯನ್ನು ಕೊಲ್ಲುವಂತೆ ಕೊಂದುಬಿಡುತ್ತಾರೆ ನನ್ನ ಅನುಚರರು.'' ಗಂಭೀರವಾಗಂದ ಅನ್ಸಾರಿ.

ಶರವೇಗದಲ್ಲಿ ಯೋಚಿಸತೊಡಗಿತು ಮಹೇಶನ ಮಿದುಳು. ಅನ್ಸಾರಿಯ ಯೋಚನೆಯಾದರೂ ಏನು? ತನ್ನನ್ನಿಲ್ಲಿ ಯಾವ ಕಾರಣಕ್ಕಾಗಿ ಬಂಧಿಸಲು ಪ್ರಯತ್ನಿಸುತ್ತಿದ್ದಾನೆ? ಈ ಹದಿನೈದು ದಿನಗಳಲ್ಲಿ ನಡೆಯಬಾರದ ಕೆಲಸಗಳೇನಾದರೂ ನಡೆಯಲಿವೆಯೇ? ಏನಾಗಬಹುದು?

ಒಂದು ವಿಷಯ ಮಾತ್ರ ಅವನಿಗೆ ಸ್ಪಷ್ಟವಾಯಿತು. ಹದಿನೈದು ದಿನಗಳಲ್ಲಿ ಏನೋ ಮಾರಕ ಘಟನೆಯೊಂದಂತೂ ಜರುಗಲಿದೆ. ಅದು ಭಾರತವನ್ನೋ ಬೇರಾವ ದೇಶವನ್ನೋ ತೊಂದರೆಗೀಡು ಮಾಡುವುದಂತೂ ಖಚಿತ!

ಮೊದಲೇ ತನ್ನ ನಡೆ ನಿಯಂತ್ರಿಸಲು ಪ್ರಯತ್ನಿಸುತ್ತಿದ್ದಾನೆ ಈ ರ್‍ಯಾಸ್ಕಲ್. ಬುದ್ಧಿವಂತ ಬಾಸ್ಟರ್ಡ್ ಇವನು. ಆದ್ದರಿಂದಲೇ ತನ್ನ ಬುದ್ದಿವಂತಿಕೆ ನಿರೂಪಿಸಿಕೊಂಡ. ಸಸ್ಪೆನ್ಸ್ ಹುಟ್ಟಿಸಿ ತನ್ನನ್ನಿಲ್ಲಿಗೆ ಬರಮಾಡಿಕೊಂಡ. ಗೆಸ್ಟಾಗಿ ಇರು ಅಂದ. ಆಗುವುದಿಲ್ಲವೆಂದರೆ ಬಂಧಿಸಿ ಯಾದರೂ ಇರಿಸಿಕೊಳ್ಳುವೆ ಅನ್ನುತ್ತಿದ್ದಾನೆ. ಯಾವುದೇ ಕೋನದಲ್ಲಿ ಯೊಚಿಸಿದರೂ ಅಪಾಯ ಕಣ್ಣ ಮುಂದೆ ಕುಣಿಯುತ್ತಿದೆ.

ಆ ಅಪಾಯವೇನೋ ಅರಿಯಬೇಕು. ಯಾವ ಕಾರಣದಿಂದವನು ತನ್ನನ್ನಿಲ್ಲಿ ಹದಿನೈದು ದಿನ ಬಂಧಿಯಾಗಿರಿಸಿಕೊಳ್ಳಬೇಕೆಂದಿದ್ದಾನೆ? ಇನ್ನೊಬ್ಬರಿಗೆ ಅರಿಯದಂತೆ ಆ ಕೆಲಸ ಏಕೆ ಮಾಡಬೇಕೆಂದು ಕೊಳ್ಳುತ್ತಿದ್ದಾನೆ!

ಎಷ್ಟೇ ತಲೆ ಕೆಡಿಸಿಕೊಂಡರೂ ತಲೆ ಬಿಸಿಯಾಯಿತೇ ಹೊರತು ಕಾರಣ ಮಾತ್ರ ಹೊಳೆಯಲಿಲ್ಲ ಮಹೇಶನಿಗೆ.

ಎರಡು ನಿಮಿಷದ ತೀವ್ರಾಲೋಚನೆಯ ನಂತರ ಒಂದು ನಿರ್ಣಯಕ್ಕಂತೂ ಬಂದ.

''ಫ್ರೆಂಡ್ ಅನ್ಸಾರಿ. ಇಷ್ಟು ಬುದ್ಧಿವಂತ... ಒಂದೇ ಒಂದು ಬುಲೆಟ್‌ನಿಂದ ವ್ಯವಹಾರ ಮುಗಿಸದೆ, ಇಷ್ಟೊಂದು ಗೋಗರೆಯುತ್ತಿರುವೆಯಲ್ಲ?'' ಅಂದ.

ಜೋರಾಗಿ ನಕ್ಕ ಅನ್ಸಾರಿ.

''ಮಹೇಶ್. ನಿನ್ನನ್ನಿಲ್ಲಿ ಬಂಧಿಸುವ ಇರಾದೆಯೇ ವಿನಹ, ನಿನ್ನನ್ನಿಲ್ಲಿ ಕೊಲ್ಲುವಾಸೆ ನನಗೆ ಎಳ್ಳಷ್ಟೂ ಇಲ್ಲ. ನನ್ನ ಬುಡಕ್ಕೆ ನಾನೇ ನೀರು ತಿದ್ದಿಕೊಳ್ಳುವ ಹುಚ್ಚು ಕೆಲಸ ನಾನು ಮಾಡಲಾರೆ.'' ನಿಧಾನವಾಗಿ ಹೇಳಿದ.

''ವಾಟ್ ಡು ಯೂ ಮೀನ್?''

''ನಿನಗೆ ಗೊತ್ತಿಲ್ಲವೆಂದರೆ ನಂಬುವಷ್ಟು ಮುಠ್ಠಾಳ ನಾನಲ್ಲ ಕಿಲ್‌ಮಾಸ್ಟರ್. ಆದರೂ ಕೇಳಿದೆ... ಹೇಳಿತ್ತಿದ್ದೇನೆ. ನೀನು ನನ್ನಿಚ್ಛೆಯಂತೆ ನಡೆದರೆ ಯಾವುದೇ ತೊಂದರೆಯಿರದು. ನಿನಗೆ ಯಾವುದೇ ತೊಂದರೆಯುಂಟು ಮಾಡಿದರೂ ನಿನ್ನ 'ಸೆಂಟ್ರಲ್ ಸರ್ವಿಸಿಂಗ್ ಸೆಲ್'ನಿಂದ ಮಾತ್ರ ತಪ್ಪಿಸಿಕೊಳ್ಳಲಾರವು. ಕೇಳಿ ಕೇಳಿ ಯಾರಾದರೂ ಬಂಡೆಯನ್ನು ಮೈ ಮೇಲೆಳೆದುಕೊಳ್ಳುತ್ತಾರೆಯೇ? ಕೇವಲ ಹದಿನೈದು ದಿನ... ಜಸ್ಟ್ ಫಿಫ್ಟೀನ್ ಡೇಸ್... ನಾವು ಹೇಳಿದಂತೆ ಕೇಳಿದರೆ ಸಾಕು. ಆಮೇಲೆ ನಿನಗೂ ನಮಗೂ ಸಂಬಂಧವಿಲ್ಲ. ಅದರ ಮೇಲೆ ಯಾವುದೇ ವಿವರಗಳನ್ನು ಮಾತ್ರ ಕೇಳಬೇಡ. ಏನು ನಿನ್ನ ಆನ್ಸರ್?'' ಅಂದ ಅನ್ಸಾರಿ.

ಮಹೇಶ ಮಾತಾಡಲಿಲ್ಲ. ಲಾಜಿಕಲ್ ಬಾಸ್ಟರ್ಡ್ ಅಂದುಕೊಂಡ ಮನದಲ್ಲಿ.

''ಕಮಾನ್ ಸರ್... ಏನು ನಿನ್ನ ನಿರ್ಣಯ?'' ನಿಮಿಷದ ನಂತರ ಮತ್ತೆ ಕೆದಕಿದ ಅನ್ಸಾರಿ.

''ಸಾರಿ ಅನ್ಸಾರಿ! ನೀನು ತಲೆ ಕೆಳಗಾಗಿ ನಿಂತು ಯೋಚಿಸಿದರೂ

ನನ್ನ ನಿರ್ಣಯ ಒಂದೇ. ನಿನ್ನಿಷ್ಟ ಬಂದಂತೆ ಮಾಡಿಕೋ'' ಎಂದು ಡೈರೆಕ್ಟಾಗಿ ಹೇಳಿಬಿಟ್ಟ ಮಹೇಶ.

ಅನ್ಸಾರಿಯ ಮುಖ ಕಪ್ಪಾಯಿತು. ಕೋಪದಿಂದ ಕಂಪಿಸ ತೊಡಗಿದವು ಮೂಗಿನ ಹೊಳ್ಳೆಗಳು. ತೀಕ್ಷ್ಣವಾಗಿ ನೋಡಿದ ಮಹೇಶನ ಕಡೆಗೆ.

ಅವನ ಆ ನೋಟಕ್ಕೆ ಕ್ಯಾರೇ ಅನ್ನಲಿಲ್ಲ ಮಹೇಶ. ಕಣ್ಣ ಕೊನೆಯಿಂದಲೇ ಸುತ್ತಲೂ ಪರಿಶೀಲಿಸಿ ನೋಡಿದ.

ತಪ್ಪಿಸಿಕೊಳ್ಳುವ ಅವಕಾಶ ಕಿಂಚಿತ್ತೂ ಇಲ್ಲ ಎಂದರಿಯಲು ಕ್ಷಣಗಳು ಹಿಡಿದವಷ್ಟೇ. ತನ್ನ ಕೈ ಕಾಲುಗಳನ್ನು ಕಟ್ಟಿ ಒಂದೆಡೆ ಎಸೆಯುವ ಮೊದಲೇ, ಅನ್ಸಾರಿ ಇನ್ನಷ್ಟು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವ ಮೊದಲೇ ಇಲ್ಲಿಂದ ಪಾರಾಗಬೇಕು.

ಇಲ್ಲದಿದ್ದರೆ ಅದೇನಾಗುತ್ತದೋ!

ಹೇಗೆ ಇಲ್ಲಿಂದ ಹೊರಬೀಳುವುದು! ತಾನಿರುವ ಜಾಗ ಯಾವುದೆಂದೇ ತಿಳಿಯದು ಫಸ್ಟ್ ಆಫ್ ಆಲ್.

ಅವನ ಆಲೋಚನೆಯ ಧಾಟಿ ಅರ್ಥವಾಗಿ ವಿಕೃತವಾಗಿ ನಕ್ಕ ಅನ್ಸಾರಿ.

ಒಬ್ಬರಲ್ಲ... ಇಬ್ಬರಲ್ಲ ಮೂವತ್ತಕ್ಕಿಂತಲೂ ಹೆಚ್ಚು ಜನ ಪಿಸ್ತೂಲುಗಳನ್ನಿಡಿದು ನಿಂತಿದ್ದಾರೆ ಸುತ್ತಲೂ. ಅನ್ಸಾರಿ ಕಣ್ಸನ್ನೆ ಮಾಡಿದರೆ ಸಾಕು... ತನ್ನ ಶರೀರ ತೂತು ತೂತು.

ಮೂವ್ ಮಾಡುವ ಇರಾದೆ ಅಡಗಿಸಿಕೊಂಡು ಸೈಲೆಂಟಾದ ಮಹೇಶ.

''ಮೈ ಡಿಯರ್ ಮಹೇಶ... ಈ ಅನ್ಸಾರಿಯ ಕ್ಲಚೆಸ್‌ನಿಂದ ಪಾರಾಗುವುದು ನಿನ್ನ ಹಣೆಯಲ್ಲಿ ಬರೆದಿಲ್ಲ. ನಿನ್ನನ್ನು ಹೇಗೆ ಇರಿಸಿಕೊಳ್ಳಬೇಕೆಂದು ನನಗೆ ಚೆನ್ನಾಗಿ ಗೊತ್ತು!'' ಅಂದ ವ್ಯಂಗ್ಯ ಧ್ವನಿ ಯಲ್ಲಿ.

''ವಂದಿಮಾಗಧರ ಅವಶ್ಯಕತೆಯಿಲ್ಲದೆ ನಿನ್ನನ್ನಿಲ್ಲಿ ನೀನೇ ಕಳಕೊಳ್ಳ

ಬೇಡ. ಅನ್ಸಾರಿ ಮೈ ಫ್ರೆಂಡ್! ನೀನು ಸೋಲುವೆ. ನನ್ನನ್ನು ಬಂಧನದಲ್ಲಿಡಲಾಗದು ನಿನ್ನ ಕೈನಿಂದ'' ಅಂದ ಮಹೇಶ.

''ಸಾರಿ ಫ್ರೆಂಡ್. ಐ ರಿಪೀಟ್... ನಿನ್ನನ್ನು ಕಂಟ್ರೋಲ್ ಮಾಡುವುದು ಹೇಗೆಂದು ನನಗೆ ಗೊತ್ತು!''

''ಹೇಗೆ ತಪ್ಪಿಸಿಕೊಳ್ಳುವುದೆಂದು ನನಗೂ ಗೊತ್ತು.'' ಚಕ್ಕನಂದ ಮಹೇಶ.

''ಇಂಪಾಸಿಬಲ್.'' ಅರಚಿದ ಅನ್ಸಾರಿ.

''ಇಟೀಸ್ ನೌವ್ ಪಾಸಿಬಲ್ ಅನ್ಸಾರಿ... ಅದು ನಿನ್ನ ಕೆಪಾಸಿಟಿಗೆ ಮೀರಿದ ಕೆಲಸ'' ಛಾಲೆಂಜ್ ಮಾಡಿದ ಮಹೇಶ.

''ಓ.ಕೆ... ಅದನ್ನು ನೋಡೇ ಬಿಡೋಣ?'' ಅನ್ನುತ್ತಾ ತನ್ನ ಅನುಚರರಿಗೆ ಸನ್ನೆ ಮಾಡಿದ ಅನ್ಸಾರಿ.

ಮರುಕ್ಷಣ ಎರಡು ಪಿಸ್ತೂಲು ಹಿಡಿಗಳು ಮಹೇಶನ ಹಿಂದಲೆಗೆ ಒಟ್ಟಿಗೆ ಅಪ್ಪಳಿಸಿದವು.

ಕರೆಂಟ್ ವೈನಲ್ಲಿ ಪಾಸಾದಂತಾಯಿತು ಮಹೇಶನಿಗೆ ಒಮ್ಮಿಂದೊಮ್ಮಲೇ. ಅನ್ಸಾರಿಯ ಮೇಲೆ ಕುಪ್ಪಳಿಸಲು ಪ್ರಯತ್ನಿಸಿದ. ಅವಯವಗಳು ಸಹಕರಿಸದೆ ಮುಂದೆ ಬಿದ್ದವನು ಹಾಗೆಯೇ ಪ್ರಜ್ಞೆ ಕಳೆದುಕೊಂಡ ಮಹೇಶ.

''ಸುಭಾಷ್... ನನ್ನ ಮುಂದೆಯೇ ತಪ್ಪಿಸಿಕೊಳ್ಳುವ ಸವಾಲೆಸೆಯುತ್ತಿದ್ದಾನೆ. ಈ ಬಚ್ಚಾ? ಅನ್ಸಾರಿಗೆ ಛಾಲೆಂಜ್ ಮಾಡಿದವರು ಇದುವರೆಗೆ ಪ್ರಾಣದೊಡನಿಲ್ಲ. ಈ ಬಚ್ಚಾ ಎಷ್ಟು ಮಾತ್ರದವನು?

''ಇವನನ್ನು ಎತ್ತಿಕೊಂಡು ಹೋಗಿ, ಕೇರ್‌ಫುಲ್ಲಾಗಿ ಬಂಧಿಸಿ, ಅಲರ್ಟಾಗಿ ನೋಡಿಕೊಳ್ಳಿ. ಎಸ್ಕೇಪ್ ಸ್ಪೆಷಲಿಸ್ಟ್ ಎಂಬ ಬಿರುದಿದೆ ಇವನಿಗೆ. ತುಸು ಅವಕಾಶ ಸಿಕ್ಕರೂ ಪಾರಾಗಿ ಬಿಡುತ್ತಾನೆ.

''ಕಣ್ಣಿಗೆಣ್ಣೆ-ಬಿಟ್ಟುಕೊಂಡು ಇವನ ಪಹರೆ ನಡೆಸಿ. ಏನಾದರೂ ತಪ್ಪಿಸಿಕೊಳ್ಳುವ ಸನ್ನಾಹ ನಡೆಸಿದರೆ ಮಾತ್ರ ನಿರ್ದಾಕ್ಷಿಣ್ಯವಾಗಿ ಕೊಂದುಬಿಡಿ'' ಎಂದು ತನ್ನ ಅನುಚರರಿಗೆ ಆಜ್ಞಾಪಿಸಿದ ಅನ್ಸಾರಿ.

ಮರುಕ್ಷಣ ಮಹೇಶನ ಅಚೇತನ ದೇಹವನ್ನು ಕೊಠಡಿಯೊಂದರೊಳಕ್ಕೆ ಸಾಗಿಸಿ, ಕೈಕಾಲು ಬಿಗಿದು ಕಟ್ಟಿ, ಬಾಗಿಲು ಮುಚ್ಚಿದರು ಅನುಚರರು.

ವಿಸ್ಕಿ ಬಾಟಲ್ ಓಪನ್ ಮಾಡಿ, ಪೆಗ್ ಮೇಲೆ ಪೆಗ್ ಹಾಕುತ್ತ, ತನ್ನದೇ ಯೋಚನೆಯಲ್ಲಿ ಮುಳುಗಿದ ಅನ್ಸಾರಿ.

## 5

'ಸಾಕು ಗುರು ಇನ್ನು ನಿದ್ರೆ! ಎದ್ದು ಮುಂದಿನ ಕೆಲಸ ನೋಡು. ಇದುವರೆಗಿನ ಅಡ್ವೆಂಚರ್ ಸಾಕು. ಮೊದಲಿಲ್ಲಿಂದ ಹೊರಬೀಳುವುದು ನೋಡು!''

ಯಾರೋ ಕಿವಿಯ ಬಳಿ ಹೇಳಿದಂತೆ ಭಾಸವಾಗಿ, ಬೆಚ್ಚಿಬಿದ್ದು, ಕಣ್ಣು ತೆರೆದ ಮಹೇಶ. ಅಂತರಾತ್ಮದ ಛಬುಕಿನೇಟು ಅದು.

ಧಿಂ ಎನ್ನುತ್ತಿದ್ದ ತಲೆಯನ್ನು ಒದರಿ ಮೇಲೇಳಲು ಪ್ರಯತ್ನಿಸಿದ. ಅಗರ್ಥವಾಯಿತು. ತನ್ನ ಕೈ ಕಾಲುಗಳು ಬಂಧನದಲ್ಲಿರುವ ಸಂಗತಿ.

ಇದ್ದ ಜಾಗದಿಂದ ಅಂಗುಲವಾದರೂ ಅಲ್ಲಾಡಲಾಗದಂತೆ ಬಂಧಿಸಿದ್ದಾರೆ. ಯಾರೋ ಕಸುಬುದಾರನೇ ಕಟ್ಟಿರುವ ಕಟ್ಟುಗಳು. ತಮಾಷೆಯ ಪ್ರಸಂಗ ಸೀರಿಯಸ್ಸಾಗಿದೆ ಅಂದುಕೊಂಡ ಮಹೇಶ. ತೀವ್ರಾಲೋಚನೆಯಲ್ಲಿ ತೊಡಗಿತು ಅವನ ಮನ.

ಶತ್ರುಗಳ ಯೋಚನೆಯೊಂದೇ ಹದಿನೈದು ದಿನಗಳ ಕಾಲ ತನ್ನ ಮೂವ್‌ಮೆಂಟ್ ನಿಯಂತ್ರಿಸುವುದು. ಅನ್ಸಾರಿ ಅದರಂತೆಯೇ ತನ್ನ ವಿಷಯದಲ್ಲಿ ಸರಿಯಾದ ಏರ್ಪಾಟುಗಳನ್ನೇ ಮಾಡಿದ್ದಾನೆ. ತನ್ನ ಸವಾಲು ಸುಳ್ಳಲ್ಲ ಎಂದು ನಿರೂಪಿಸಬೇಕು. ಅನ್ಸಾರಿಯ ಬುದ್ಧಿವಂತಿಕೆಗೆ

ಕುರಿತೇಟು ಹೊಡೆದಂತೆ ಇಲ್ಲಿಂದ ತಪ್ಪಿಸಿಕೊಂಡು ಹೋಗಬೇಕು. ಅಷ್ಟೇ ಅಲ್ಲ... ತಕ್ಷಣ ರೈಡ್ ಮಾಡಿ ಅನ್ಸಾರಿಯನ್ನು ಕಸ್ಟಡಿಗೆ ತೆಗೆದುಕೊಂಡರೆ ನಿಜ ತನ್ನಷ್ಟಕ್ಕೆ ತಾನೇ ಬಯಲಿಗೆ ಬರುತ್ತದೆ.

ಸುತ್ತಲೂ ನೋಡಿದ ಮಹೇಶ.

ಅದೊಂದು ಸಣ್ಣ ಕೊಠಡಿ. ಒಂದು ಮೂಲೆಯಲ್ಲಿ ಬೆಳಗುತ್ತಿತ್ತೊಂದು ಮೇಣದಬತ್ತಿ. ಆ ಬೆಳಕೇ ಕೊಠಡಿಗೆ.

ಒಂದು ನಿಮಿಷ ಆ ಕ್ಯಾಂಡಲ್ ಕಡೆಗೆ ನೋಡಿದ ಮಹೇಶ. ಹೇಗೆ ಅಲ್ಲಿಂದ ಪಾರಾಗುವುದು? ಆವರಿಸಲಿರುವ ಅಪಾಯವನ್ನು ತಪ್ಪಿಸುವುದು ಹೇಗೆ? ಆ ಅಪಾಯವಾದರೂ ಎಂತಾದ್ದು? ಎಷ್ಟೋ ಅಪರಾಧಗಳನ್ನು ಮಾಡಿಸಿ, ಇನ್‌ಡೈರೆಕ್ಟಾಗಿ ಎಷ್ಟೋ ಕುಕೃತ್ಯಗಳಿಗೆ ಷಾಮೀಲಾಗಿರುವ ಅನ್ಸಾರಿಯನ್ನು ಖೆಡ್ಡಾಗೆ ಕೆಡವುವುದು ಹೇಗೆ.

ಸೀರಿಯಸ್ಸಾಗಿ ಆಲೋಚಿಸಿದ ಮಹೇಶ. ಆಟೋಮ್ಯಾಟಿಕ್ಕಾಗಿ ಅವನ ನೋಟ ಮತ್ತೆ ಕ್ಯಾಂಡಲ್ ಕಡೆಗೆ ಹರಿಯಿತು. ನಿಧಾನವಾಗಿ ಒಂದು ಆಲೋಚನೆ ಅವನ ಮನದಲ್ಲಿ ರೂಪುಗೊಳ್ಳತೊಡಗಿತು.

ಅದರ ಸಾಧಕಬಾದಕಗಳತ್ತಲೇ ಗಮನವನ್ನು ಕೇಂದ್ರೀಕರಿಸಿದ.

★

''ಈಡಿಯಟ್ಸ್... ಸ್ಕೌಂಡ್ರಲ್ಸ್... ಒಬ್ಬರಿಗಾದರೂ ಬುದ್ಧಿಯಿಲ್ಲ! ಹೇಳಿದ್ದು ಮಾಡರು ಮಾಡಿದ್ದು ಹೇಳರು. ಬ್ಲಡಿ ಮಂಕೀಸ್?'' ಚಂದನ್, ಶ್ಯಾಂ ಕಡೆಗೆ ನೋಡುತ್ತಾ ಸೀರಿಯಸ್ಸಾಗಂದರು ಕರ್ನಲ್.

''ಶ್ಯಾಂ... ಯಾರಿಗೆ ಈ ಸುಪ್ರಭಾತ?'' ಸಣ್ಣದನಿಯಲ್ಲಂದ ಚಂದನ್.

ಮೈ ಉರಿದು ಹೋಯಿತು ಶ್ಯಾಂಗೆ. ಕಣ್ಣು ಕೆಂಪಾಗಿಸಿಕೊಂಡು ಚಂದನ್‌ಗೆ ಕಾಷನ್ ಕೊಡಲೋದ. ಆದರಷ್ಟರಲ್ಲಿ ತಡವಾಗಿಬಿಟ್ಟಿತು. ಎಷ್ಟೋ ಸಣ್ಣದನಿಯಲ್ಲಿ ಹೇಳಿದರೂ ಕರ್ನಲ್‌ರಿಗದು ಕೇಳಿಸಿಬಿಟ್ಟಿತ್ತು.

ತಕ್ಷಣ ಇನ್ನಷ್ಟು ರೈಯ್ಸಾದರು ಅವರು.

''ಹೇಳಿದ್ದು ನಿಮಗಲ್ಲಾ... ಈ ಗೋಡೆಗಳಿಗೆ... ಈ ಕುರ್ಚಿಗಳಿಗೆ! ರಾಸ್ಕಲ್ಸ್! ಮಾಡಿದ್ದೆಲ್ಲಾ ಮಾಡಿ ಏನೂ ಗೊತ್ತಿಲ್ಲದವರಂತಿರುವಿರಾ?'' ಎಂದು ಹರಿಹಾಯ್ದರು, ''ಯಾರ ಸಪೋರ್ಟ್‌ನಿಂದ ನೀವು ಹೀಗೆ ಮಾಡುತ್ತಿರುವಿರೆಂದು ನನಗೆ ಚೆನ್ನಾಗಿ ಗೊತ್ತು.''

ತಾನು ಬಾಯಿ ತೆರೆದದ್ದು ಎಷ್ಟು ತಪ್ಪಾಯಿತು ಎಂದು ಮನದಲ್ಲೇ ನೊಂದುಕೊಂಡ ಚಂದನ್ ಸೈಲೆಂಟಾಗಿಬಿಟ್ಟ.

''ಆಲ್‌ರೈಟ್... ಎಲ್ಲಿ...ಎಲ್ಲಿ ಆ ದೊಡ್ಡ ಕೋತಿ?'' ಬೈಗಳ ಪ್ರವಾಹ ನಿಲ್ಲಿಸಿ ಕೇಳಿದರು ಕರ್ನಲ್.

''ಗೊತ್ತಿಲ್ಲ ಸಾರ್'' ಅಂದ ಶ್ಯಾಂ.

''ಷಟಪ್! ನನ್ನ ಪ್ರಶ್ನೆಗದಲ್ಲ ಉತ್ತರ. ಐ ವಾಂಟ್ ಮಹೇಶ!'' ದುರುಗುಟ್ಟಿ ನೋಡುತ್ತ ಹೇಳಿದರು.

''ಛೇ... ಇದು ಬಹಳ ಅನ್ಯಾಯ ಶ್ಯಾಂ ಭಾಯ್ ಮನಬಂದಂತೆ ಬಯ್ಯುತ್ತಿದ್ದಾರಿವರು. ಇಲ್ಲಿಗೇ ಹೋಗಿ ಬರುತ್ತೇವೆಂದು ಹೇಳಿ ಹೋಗಲು ಗುರುವೇನಾದರೂ ಪ್ರೈಮರಿ ಸ್ಕೂಲ್ ಹುಡುಗನೇ? ಇವರಿಗೆ ಅರ್ಥವೇ ಆಗುವುದಿಲ್ಲವೇ?'' ಪಿಸು ಧ್ವನಿಯಲ್ಲಿ ಅಂದ ಚಂದನ್ ಈ ಸಲ.

ಅವನಷ್ಟೇ ಪಿಸುಧ್ವನಿಯಲ್ಲುಸುರಿದ ಶ್ಯಾಂ ಆಗ. ''ಒಪ್ಪಿದೆ ನಿನ್ನ ಮಾತು ಚಂದನ್ ಮಿಯಾ? ಆದರೆ ಬಾಸ್‌ಗೆ ಗುರು ಮುಖ್ಯ. ಅವನು ಕಾಣಿಸದಿರುವುದರಿಂದ ಎಲ್ಲಿಲ್ಲದ ಕೋಪಬಂದಿದೆ ಅವರಿಗೆ. ನೀನು ನನ್ನ ಬಳಿ ನಿವೇದನೆ ಮಾಡಲೋಗಿ ಅವರನ್ನು ಇನ್ನಷ್ಟು ಕೋಪಗೊಳಿಸ ಬೇಡ.''

''ಏನದು ಶೋಬನದ ಕೊಠಡಿಯಲ್ಲಿ ಗಂಡ ಹೆಂಡತಿ ಮಾತಾಡುವಂತೆ ಮಾತಾಡುತ್ತಿರುವಿರಿ. ಜೋರಾಗಿ ಮಾತಾಡಿ. ಎಲ್ಲಿ ಮಹೇಶ... ಎಲ್ಲಿ?'' ಸಿಗಾರ್ ಹೊತ್ತಿಸಿಕೊಳ್ಳುತ್ತ ಜೋರು ಧ್ವನಿಯಲ್ಲಿ ಅಬ್ಬರಿಸಿದರು ಕರ್ನಲ್.

''ಅದೇ ಗೊತ್ತಿಲ್ಲ ಸಾರ್... ಸಿಟಿಯಲ್ಲೇ ಇದ್ದಾನೆಂದು ಮಾತ್ರ ಗೊತ್ತು.'' ಮೆಲ್ಲನಂದ ಚಂದನ್.

ಇರದೆ ಎಲ್ಲೋಗುತ್ತಾನೆ? ಅದಲ್ಲ ನನಗೆ ಬೇಕಾಗಿರುವುದು. ಇಂದು ರಾತ್ರಿಯ ಮೀಟಿಂಗ್‌ನಲ್ಲಿ ಅವನಿಲ್ಲದಿದ್ದರೆ ನಮ್ಮ ಪ್ರತಿಷ್ಠೆಗೆ ಕುಂದಾಗದೆ? ಹೋಂ ಮಿನಿಸ್ಟರ್ ಬಳಿಯಿಂದ ಈಗಾಗಲೇ ಹತ್ತು ಸಾರಿ ಫೋನ್ ಬಂದಿದೆ. ಆ ಡರ್ಟಿ ರ್‍ಯಾಸ್ಕಲ್ ಬಗ್ಗೆಯೇ ಕೇಳುತ್ತಿದ್ದಾರೆ. ಫ್ಲಾಟ್‌ನಲ್ಲಿ... ಮಾಮೂಲಿ ಅಡ್ಡಾಗಳಲ್ಲಿಲ್ಲ. ನಿಮಗೂ ಗೊತ್ತಿಲ್ಲ. ಹಾಗಾದರೆ ಎಲ್ಲಿ ಹಾಳಾಗಿ ಹೋದ?'' ಅಂದರು ಕರ್ನಲ್.

ಅವರು ಫ್ಲೇರಪ್ ಆದುದಕ್ಕೆ ಸರಿಯಾದ ಕಾರಣವೇ ಇದೆಯೆನ್ನಿಸಿತು ಶ್ಯಾಂ ಮತ್ತು ಚಂದನ್‌ರಿಗೆ. ಆದರೆ ಮಹೇಶ ಎಲ್ಲಿ ಹೋದನೆಂದು ಅವರಿಗೂ ಗೊತ್ತಿರಲಿಲ್ಲ.

ಸರಿಯಾಗಿ ಆಗಲೇ ಟ್ರಿಣ್ಣೆನಿಸಿತು ಟೆಲಿಫೋನ್. ತಕ್ಷಣ ರಿಸೀವರ್ ಎತ್ತಿ ಎರಡು ನಿಮಿಷ ಮಾತಾಡಿ. ''ರೈಟ್ ಸರ್? ಈಗಲೇ ಬರುತ್ತೇವೆ'' ಎಂದು ರಿಸೀವರ್ ಕ್ರೆಡಿಲ್ ಮಾಡಿದರು ಕರ್ನಲ್.

ಆ ಕಾಲ್ ಎಲ್ಲಿಂದ ಬಂತೆಂದು ಅರ್ಥವಾಯಿತು ಶ್ಯಾಂ ಮತ್ತು ಚಂದನ್‌ರಿಗೆ.

''ನೀವೇನು ಮಾಡುವಿರೋ ನನಗೆ ಗೊತ್ತಿಲ್ಲ. ನಾನು ಹೋಂಮಿನಿಸ್ಟರ್ ಬಳಿಗೆ ಹೋಗುತ್ತಿದ್ದೇನೆ. ಹಿಂದಿರುವ ವೇಳೆಗೆ ಮಹೇಶ ಇಲ್ಲಿರಬೇಕು. ಅವಶ್ಯಕವೆನಿಸಿದರೆ ನಮ್ಮ ಇಡೀ ತಂಡವನ್ನೇ ರಂಗಕ್ಕಿಳಿಸಿ ಅವನನ್ನ ಟ್ರ್ಯಾಪ್‌ಮಾಡಿ!'' ಅನ್ನುತ್ತ ಎದ್ದರು ಕರ್ನಲ್.

''ಓ.ಕೆ. ಸರ್.''

''ಆಲ್ ರೈಟ್... ತಕ್ಷಣ ಹೊರಡಿ. ಇನ್ನೆರಡು ಗಂಟೆಗಳಲ್ಲಿ ಹೀ ಷುಡ್ ಬಿ ಹಿಯರ್ ಇಲ್ಲದಿದ್ದರೆ ರಾಮಾಯಣ. ಮತ್ತದೆ... ನಾವು ತಲೆ ತಗ್ಗಿಸುವ ಪರಿಸ್ಥಿತಿ ಏರ್ಪಡುತ್ತದೆ. ಹ್ಯಾವ್ ದಟ್ ಇನ್ ಮೈಂಡ್'' ಅಂದರು ಕರ್ನಲ್.

ತಕ್ಷಣ ಹೊರ ನಡೆದರು ಶ್ಯಾಂ ಮತ್ತು ಚಂದನ್.

ಖುಷಿಯಿಂದ ವಿಷಲ್ ಮಾಡಹೋಗಿ ಕೊನೆಯ ಕ್ಷಣದಲ್ಲಿ ಆ ಬಯಕೆಗೆ ತಡೆ ಹಾಕಿಕೊಂಡ ಮಹೇಶ.

ಅವನಿಂದ ಹತ್ತಡಿಗಳಷ್ಟು ದೂರದಲ್ಲಿತ್ತು ಕ್ಯಾಂಡಲ್. ಅದನ್ನು ಸಮೀಪಿಸಲು ಸಾಧ್ಯವಾದರೆ ತನ್ನ ಕಷ್ಟಗಳು ತೀರಿಹೋದಂತೇ. ಆಮೇಲೊಂದು ಕ್ಷಣ ತಡ ಮಾಡಲಿಲ್ಲ ಮಹೇಶ. ಶರೀರವನ್ನು ಸಡಿಲಗೊಳಿಸಿ ಕುರ್ಚಿ ಸಮೇತ ನಿಶ್ಶಬ್ದವಾಗಿ ಮುಂದಕ್ಕೆ ಕದಲಿದ.

ಅಂಗುಲಂಗುಲವಾಗಿ ಮೂವಾಗತೊಡಗಿತು ಕುರ್ಚಿ. ತುಸು ಶಬ್ದವಾದರೂ ಕೊಠಡಿಯ ಮುಂದೆ ಕಾವಲಿರಬಹುದಾದ ಹೀರೋಗಳು ಒಳಕ್ಕೆ ಬರುತ್ತಾರೆ. ಅದಾದರೆ ತನ್ನ ಎಸ್ಕೇಪ್ ಪ್ಲಾನ್, ತಾನು ಎರಡೂ ಫ್ಲಾಪ್ ಅದರಂತೆಯೇ ಲೆಕ್ಕ. ತನ್ನನ್ನು ಮೀರಿಸಿದವರಿಲ್ಲ ಅಂದುಕೊಳ್ಳುತ್ತಿರುವ ಅನ್ಸಾರಿಯ ಪ್ಲಾನ್‌ಗೆ ತಿರುಗೇಟು ಹೊಡೆಯಬೇಕು. ಹದಿನೈದು ದಿನ ತನ್ನನ್ನಿಲ್ಲಿ ಇರಿಸಿಕೊಳ್ಳಲೇನು ಕಾರಣ ಎಂಬುದು ತಿಳಿಯಬೇಕು.

ಐದು ನಿಮಿಷಗಳ ವ್ಯವಧಿಯಲ್ಲಿ ಹತ್ತಡಿ ದೂರ ಕ್ರಮಿಸಿ ಕ್ಯಾಂಡಲ್ ಸಮೀಪಿಸಿದ ಮಹೇಶ ಎರಡು ಕಾಲುಗಳನ್ನೂ ಕ್ಯಾಂಡಲ್ ಮೇಲೆ ಚಾಚಿದ. ನಿಧಾನವಾಗಿ ಹಗ್ಗ ಸುಡಲು ಶುರುವಾಯಿತು. ನೈಲಾನ್ ರೋಪ್ನ ಜೊತೆಗೇ ಕಾಲಿನ ಚರ್ಮವು ಸುಟ್ಟ ಕರಕುವಾಸನೆ ಬರತೊಡಗಿತು. ಹಲ್ಲು ಕಚ್ಚಿ ನೋವು ತಡೆ ಹಿಡಿದ ಮಹೇಶ. ಸಂಪೂರ್ಣ ಸುಟ್ಟು ತುಂಡರಿಸಿತು ನೈಲಾನ್ ರೋಪ್.

ಅದೇ ರೀತಿಯಲ್ಲಿ ಕೈಗಳ ಬಂಧನವನ್ನು ಕಳಚಿಕೊಂಡ ಮಹೇಶ ಎರಡು ನಿಮಿಷ ಕುರ್ಚಿಯಲ್ಲೇ ಕುಳಿತು ಸುಧಾರಿಸಿಕೊಂಡ. ಆದರೂ ಯೋಚಿಸುವುದು ಮಾತ್ರ ಬಿಡಲಿಲ್ಲ.

ಅನ್ಸಾರಿಯಂತಹ ಕ್ರಿಮಿನಲ್‌ನ ಬಾಯಿ ಬಿಡಿಸುವುದು ಸುಲಭದ ಕೆಲಸವಲ್ಲ. ಮೊದಲಿಲ್ಲಿಂದ ಹೊರಬಿದ್ದ ಮೇಲೆ ಮುಂದಿನ ನಡೆಯೇನೆಂದು ನಿರ್ಧರಿಸುವುದು ಒಳ್ಳೆಯದು.

ತನ್ನನ್ನು ಕೊಲ್ಲುವ ಉದ್ದೇಶವಂತೂ ಅನ್ಸಾರಿಗೆ ಎಳ್ಳಷ್ಟೂ ಇಲ್ಲ.

ಅದ್ಯಾವ ಕಾರಣಕ್ಕೋ ಬಂಧಿಸುವ ನಿರ್ಧಾರ ಮಾತ್ರ ಕೈಗೊಂಡಿದ್ದಾನೆ.

ಇನ್ನು ಸ್ವಲ್ಪ ಹೊತ್ತು ಪ್ರತಿಯೊಂದು ಆ್ಯಂಗಲ್‌ನಲ್ಲೂ ಯೊಚಿಸಿ ಒಂದು ನಿರ್ಣಯಕ್ಕೆ ಬಂದಂತೆ ತಲೆ ಕುಣಿಸಿದ ಮಹೇಶ. ಮೇಲೆದ್ದು ಅಲ್ಲಿಯವರೆಗೆ ತಾನು ಕುಳಿತಿದ್ದ ಕುರ್ಚಿಯನ್ನೆತ್ತಿಕೊಂಡು ಡೋರ್ ಬಳಿಗೆ ಬಂದು ಹಿಂದೆ ಮುಂದೆ ಯೋಚಿಸದೆ ಅದನ್ನು ಡೋರ್‌ಗೆ ಬಲವಾಗಿ ಅಪ್ಪಳಿಸಿಬಿಟ್ಟ.

ಕುರ್ಚಿ ಪೀಸ್‌ಪೀಸಾಯಿತು.

ಅವನ ಯೋಚನೆಯಂತೆ ಆ ಶಬ್ದ ಕೇಳಿದೊಡನೆ ಒಳಕ್ಕೆ ನುಗ್ಗಬೇಕು ಹೀರೋಗಳು.

ಹಾಗೆಯೇ ಆಯಿತು.

ನಿಮಿಷವಾಗುವ ಮೊದಲೇ ಕಿರಕಿರ ಶಬ್ದ ಮಾಡುತ್ತಾ ತೆರೆದುಕೊಂಡಿತು ಡೋರ್. ಸುಂಟರಗಾಳಿಯಂತೆ ಒಳನುಗ್ಗಿದ ಒಬ್ಬ ಹೀರೋ.

''ರ್‍ಯಾಸ್ಕಲ್ ಇಲ್ಲಿಂದ ತಪ್ಪಿಸಿಕೊಂಡು ಹೋಗಬೇಕೆಂದು ಕೊಂಡಿರುವೆಯಾ? ಅದು ನಿನ್ನಿಂದಾಗದ ಕೆಲಸ...'' ಅನ್ನುತ್ತ ಮುಂದೆ ನೋಡಿ ಕಕ್ಕಾಬಿಕ್ಕಿಯಾದ.

ಕುರ್ಚಿಯಲ್ಲಿ ಬಂಧನದಲ್ಲಿರಬೇಕಾದವ ಹೇಗೆ ಆದೃಶ್ಯನಾದ ಎಂಬುದೇ ಅರ್ಥವಾಗಲಿಲ್ಲ ಅವನಿಗೆ. ಒಂದು ಕಡೆ ತುಂಡರಿಸಿ ಬಿದ್ದಿದ್ದ. ಹಗ್ಗದ ಕಡೆಗೆ, ಕಾಲ ಬಳಿ ಮುರಿದು ಬಿದ್ದಿರುವ ಕುರ್ಚಿಯ ಕಡೆಗೆ ನಂಬದವನಂತೆ ಕಣ್ಣುಗಳನ್ನು ಉಜ್ಜಿಕೊಂಡು ನೋಡಿದ.

''ಆದೇಕೆ ಫ್ರೆಂಡ್ ಅಷ್ಟೊಂದು ಆಶ್ಚರ್ಯ... ನಿನಗೆ ಬೇಕಾದ ವ್ಯಕ್ತಿ ನಾನಿಲ್ಲೇ ಇರವಾಗ?'' ಅಂದ ಮಹೇಶ.

ಅದುರಿಹೋದ ಆ ಹೀರೋ.

ಮಾತು ಕೇಳಿದ ಕಡೆಗೆ ಗಿರ್ರನೆ ತಿರುಗಹೋದ.

ಕೈನಲ್ಲಿಡಿದಿದ್ದ ಕುರ್ಚಿಯ ಕಾಲನ್ನು ನೇರ ಅವನ ತಲೆಯ ಮೇಲಿಳಿಸಿದ ಮಹೇಶ. ಫಟ್ ಎಂದು ಬಂದಿತು ಶಬ್ದ. ಸೀಳಿದ

ತಲೆಯಿಂದ ಛಿಲ್ಲನೆ ರಕ್ತ ಚಿಮ್ಮಿತು. ಕಣ್ಣುಗಳ ಮುಂದೆ ನಕ್ಷತ್ರಲೋಕ ಪ್ರತ್ಯಕ್ಷವಾಗಿ ಮಂಡಿ ಮಡಚಿಕೊಂಡು ಮಕ್ಕಾಡೆ ಬಿದ್ದ ಹೀರೋ ಮತ್ತೆ ಮೇಲೇಳಲಿಲ್ಲ.

ಇನ್ನೆರಡು ನಿಮಿಷ ಕಾದ ಮಹೇಶ ಇನ್ಯಾರಾದರೂ ಬರುವರೇನೋ ಎಂದು. ಯಾರೂ ಬರಲಿಲ್ಲ. ಕೆಳಗೆ ಹೋಗಿ ಬಿದ್ದಿದ್ದವನ ಪಿಸ್ತೂಲೆತ್ತಿಕೊಂಡು ಹೊರ ಬಂದು ಬಾಗಿಲು ಮುಚ್ಚಿದ.

★

ಮೊತ್ತ ಮೊದಲ ಬಾರಿಗೆ ನಿಜಕ್ಕೂ ಭ್ರಮಿತನಾಗಿದ್ದ ಮಹೇಶ ಕೊಠಡಿಯಿಂದ ಹೊರ ಬಂದೊಡನೆ.

ಅದಕ್ಕೆ ಕಾರಣವಿಲ್ಲದಿರಲಿಲ್ಲ. ಮೂರ್ಛೆ ಹೋದವನ ವಿನಹ ಇನ್ನೊಬ್ಬರಿಲ್ಲ ಅಲ್ಲಿ. ಆಗಲೇ ಕಾಣಿಸಿದ್ದ ಸೈನ್ಯವೆಲ್ಲಾ ಎಲ್ಲಿ? ಹಲವಾರು ಯೋಚನೆಗಳು ತಲೆಯಲ್ಲಿ ಕಂಗೆಡಿಸತೊಡಗಿ ಬಂದು ಹಾಲ್‌ನಲ್ಲಿ ಕಾಲಿಟ್ಟ.

ಮರುಕ್ಷಣವೇ 'ಡೇಂಜರ್' ಎಂದು ಬೊಂಬಾರ್ಡ್ ಹೊಡೆಯ ತೊಡಗಿತು ಇದುವರೆಗೆ ಸೈಲೆಂಟಾಗಿದ್ದ ಅವನ ಸಿಕ್ತ್ ಸೆನ್ಸ್. ಇಮ್ಮಿಡಿಯೆಟ್ ಆಗಿ ಕೇಳಿಸಿತ್ತು 'ಸುಯ್...' ಎನ್ನುವ ಶಬ್ದ.

ಇನ್‌ಸ್ಟಂಟ್ ರಿಯಾಕ್ಟ್ ಆಗಿದ್ದ ಮಹೇಶ. ಸೂಪರ್ ಫಾಸ್ಟಾಗಿ ಹಿಂದಕ್ಕೆ ಜಂಪ್ ಮಾಡಿಬಿಟ್ಟ.

ಆ ವೇಗವೇ ಆ ದಿನ ಅವನ ಪ್ರಾಣವನ್ನುಳಿಸಿತ್ತು. ಹಿಂದಕ್ಕೆ ನೆಗೆದ ಮರುಕ್ಷಣವೇ ಅವನು ಮೊದಲಿದ್ದ ಜಾಗವನ್ನು ಹಾದು ಹೋಗಿತ್ತೊಂದು ಥಳಥಳ ಹೊಳೆಯುವ ಅಲಗಿನ ಒಂದು ಡ್ಯಾಗರ್.

ಮಹೇಶನ ಗುಂಡಿಗೆ ಝಲ್ಲೆಂದಿತ್ತು. ತನ್ನನ್ನು ಬೇಕೆಂದೇ ಬಂಧಿಸಲು ಕರೆತಂದಿದ್ದರೂ ಅನ್ಸಾರಿ ಕಣ್ಣು ಮುಚ್ಚಾಲೆಯಾಟ ಏಕೆ ಆಡುತ್ತಿದ್ದಾನೆಂದು ಅರ್ಥವಾಯಿತು ಮಹೇಶನಿಗೆ. ಇನ್‌ಫ್ಯಾಕ್ಟ್ ಒಳಗೆ

ಮೈ ಮರೆತು ಬಿದ್ದಿರುವವನನ್ನು ಬಿಟ್ಟು, ಅಲ್ಲಿನ್ಯಾರೂ ಇಲ್ಲ ಎಂದೇ ಅವನು ಅಂದುಕೊಂಡಿದ್ದ.

ಅವನ ಯೋಚನೆಗಳು ಇನ್ನೂ ಮುಗಿದಿರಲಿಲ್ಲ. ಆಗಲೇ ಯಾರೋ ಓಡಿ ಹೋಗುತ್ತಿರುವ ಶಬ್ದ ಅವನ ಕಿವಿಗಳಿಗೆ ಸ್ಪಷ್ಟವಾಗಿ ಕೇಳಿಸಿತ್ತು. ಸರ್ರನೆ ಹೊರಕ್ಕೋಡಿ ಬಂದ ಮಹೇಶ.

ತಟಕ್ಕನೆ ಅವನ ಕಾಲುಗಳಿಗೆ ಬ್ರೇಕ್ ಬಿದ್ದವು. ಸುತ್ತ ಎತ್ತ ನೋಡಿದರೂ ದಟ್ಟ ಪೊದೆಗಳೇ ತುಂಬಿದ್ದವು. ತಾನು ಬಂಧನದಿಂದ ಹೊರಬೀಳುವುದು ಗ್ಯಾರಂಟಿ ಎಂದು ಮೊದಲೇ ಊಹಿಸಿ, ಅನ್ಸಾರಿ ಆಯಕಟ್ಟಿನ ಸ್ಥಳಗಳಲ್ಲಿ ತನ್ನ ಅನುಚರರನ್ನಿರಿಸಿದ್ದರೆ?

ಅಲ್ಲಿಯವರೆಗೆ ಯೋಚಿಸಿದ್ದ ಮಹೇಶ. ಮುಂದೆ ಆಲೋಚಿಸಲು ಅವಕಾಶ ನೀಡಲಿಲ್ಲ ಆರನೇ ಇಂದ್ರಿಯ 'ಗೆಟ್... ಬ್ಯಾಕ್... ಗೆಟ್ ಟು ಕವರ್' ಎಂದು ಒಂದೇ ಸಮ ಅರಚತೊಡಗಿತು.

ಮಹೇಶ ಡೆಸ್ಪರೇಟಲಿ ಸುತ್ತಲೂ ನೋಡಿದ.

ಮರುಕ್ಷಣ ಧನ್... ಧನ್ ಎಂಬ ಪಿಸ್ತೂಲಗಳ ಭೀಕರ ಘರ್ಜನೆಗಳಿಂದ ತುಂಬಿಹೋಯಿತು ಆ ಪ್ರದೇಶ.

ಕಣ್ಣಿಗೂ ನಿಲುಕದಷ್ಟು ಫಾಸ್ಟಾಗಿ ಮಹೇಶ ಮೂವ್ ಆದ. ಮಹೇಶ ಛಂಗನೆ ಮೇಲೆಗರಿ ಒಂದು ಪಲ್ಟಿಯೊಡೆದು ಪೊದೆಯೊಂದರ ಬದಿಯಲ್ಲಿ ಬಿದ್ದ. ಬಿಸಿ ಹಬೆ ಹೊರ ಚೆಲ್ಲುತ್ತಾ ಅವನ ಮೈ ಬದಿಯಿಂದಲೇ ಹಾದು ಹೋದವು ಬುಲೆಟ್ಸ್.

ಅಷ್ಟು ಕಾರ್ಗತ್ತಲಲ್ಲೂ ಸ್ವಲ್ಪ ಹೆಚ್ಚು ಕಡಿಮೆ ಮಹೇಶ್‌ನತ್ತ ನಿಖರವಾಗಿ ಫೈರ್ ಮಾಡುತ್ತಿರುವ ಅನ್ಸಾರಿ ಅನುಚರರ ನೈಪುಣ್ಯತೆ ಮೆಚ್ಚದಿರಲಿಲ್ಲ ಅವನು.

ಅವರು ಮತ್ತೊಮ್ಮೆ ಫೈರ್ ಮಾಡಿದರು. 'ಧನ್..' ಎಂದು ಮೊಳಗಿದವು ಪಿಸ್ತೂಲುಗಳು. ಮಹೇಶನಿದ್ದ ಪೊದೆಯ ಸುತ್ತ ಬಿದ್ದು ಧೂಳೆಬ್ಬಿಸಿದವು ಬುಲೆಟ್ಸ್.

ಯೋಚನೆಗೆ ಬಿದ್ದ ಮಹೇಶ.

ತಾನೀಗ ಅವರತ್ತ ಫೈರ್ ಮಾಡದಿದ್ದರೆ ತನ್ನ ಪ್ರಾಣಕ್ಕೇ ಆಪತ್ತು. ತನ್ನ ಬಳಿ ಅಮ್ಯೂನಿಷನ್ ಇಲ್ಲವೆಂದು ಭಾವಿಸುತ್ತಾರೆ. ಜೊತೆಗೆ ಅವರೆಷ್ಟು ಜನ ಇದ್ದಾರೆಂದು ಗೊತ್ತಿಲ್ಲ. ಆದರೆ ತಾನೊಬ್ಬನೇ ಎಂದು ಅವರೆಲ್ಲರಿಗೂ ಗೊತ್ತು.

ಮರುಕ್ಷಣ, ಪಿಸ್ತೂಲ್ ಫ್ಲಾಷ್ ಕಾಣಿಸಿದ ಕಡೆಗೆ ನಳಿಗೆ ತಿರುಗಿಸಿ ಟ್ರಿಗರ್ ನೇವರಿಸಿದ.

ಧನ್...ಧನ್... ಎಂದು ಎರಡು ಸಲ ಘರ್ಜಿಸಿತು ಪಿಸ್ತೂಲು, ಫ್ಲಾಷ್ ಕಾಣಿಸಿದ ಇಂಚು ಎಡಕ್ಕೆ, ಬಲಕ್ಕೆ.

ಮರುಕ್ಷಣವೇ ಎರಡು ವಿಕೃತ ಆಕ್ರಂದನಗಳು ಕೇಳಿ ಬಂದಿದ್ದವು ಕ್ಷಣದಂತರದಲ್ಲಿ.

ಮುಂದಿನ ನಿಮಿಷ ಸಾಲಿಡ್ ಬೊಂಬಾರ್ಡಿಂಗ್ ಶುರುವಾಯಿತು ಅತ್ತ ಕಡೆಯಿಂದ. ಆ ವೇಳೆಗಾಗಲೇ ತಾನಿದ್ದ ಪೊದೆಯಿಂದ ನೂರು ಗಜಗಳಷ್ಟು ದೂರದಲ್ಲಿದ್ದ ಇನ್ನೊಂದು ದಟ್ಟ ಪೊದೆಯ ಬಳಿಗೆ ಸೈಲೆಂಟಾಗಿ ತೆವಳಿಬಿಟ್ಟಿದ್ದ ಮಹೇಶ.

ಅವನು ಫೈರ್ ಮಾಡಿದ ಜಾಗದತ್ತಲೇ ಕಾನ್‌ಸೆನ್ಟ್ರೇಟ್ ಆಗಿತ್ತು ಶತ್ರುಗಳ ಫೈರಿಂಗ್.

ಕೇರ್‌ಫುಲ್ ಆಗಿ ವಾಚ್ ಮಾಡಿ, ಆ ಫ್ಲಾಷ್ ಕಡೆಗೆ ಎರಡು ಸಲ ಫೈರ್ ಮಾಡಿದ ಮಹೇಶ. ಇನ್ನೆರಡು ಗೋಳುಗರೆವ ಕೂಗುಗಳು.

ತನ್ನ ಬಳಿಯಿರುವುದಿನ್ನು ಎರಡೇ ಬುಲೆಟ್ಸ್. ಅದನ್ನು ಶತ್ರುಗಳು ಗ್ರಹಿಸಿದರೆ ಶುರುವಾಗುತ್ತದೆ ತೊಂದರೆ ಎಂದವನು ಅಂದು ಕೊಳ್ಳುತ್ತಿರುವಾಗಲೇ ಯಾರೋ ಓಡುತ್ತಿರುವ ಶಬ್ದ.

ಅತ್ತ ಕಡೆಗೆ ಏಮ್ ಮಾಡಿದರೂ ಫೈರ್ ಮಾಡಲೋಗಲಿಲ್ಲ ಮಹೇಶ.

ಕ್ರಮೇಣ ದೂರವಾದವು ಹೆಜ್ಜೆಯ ಶಬ್ದಗಳು.

''ದೂರ ಹೋಗಿ ಬಿಟ್ಟರು ಕಳ್ಳ ರ್‍ಯಾಸ್ಕಲ್‌ಗಳು...'' ಎಂಬ ಮಾತು ಇದ್ದಕ್ಕಿದ್ದಂತೆ ಕೇಳಿಸಿ ಅದುರಿಬಿದ್ದು ತಟಕ್ಕನೆ ತಿರುಗಿದ ಮಹೇಶ.

ಆಟೋಮ್ಯಾಟಿಕ್ಕಾಗಿ ಪಿಸ್ತೂಲು ಮೇಲೆ ಬಂದಿತ್ತು.

ಸ್ವಲ್ಪ ದೂರದಲ್ಲಿ ನಿಂತಿದ್ದರು ಶ್ಯಾಂ ಮತ್ತು ಚಂದನ್.

ಆ ವೇಳೆಯಲ್ಲಿ ಅವರು ಅಲ್ಲಿಗೆ ಹೇಗೆ ಬಂದರೆಂದು ಎಷ್ಟು ಯೋಚಿಸಿದರೂ ಅರ್ಥವಾಗಲಿಲ್ಲ ಮಹೇಶನಿಗೆ.

''ನೀನಷ್ಟೊಂದು ತಲೆ ಕೆಡಿಸಿಕೊಂಡು ಯೋಚಿಸುವ ಅವಶ್ಯಕತೆಯಿಲ್ಲ ಬಿಡು ಗುರು. ಅಲ್ಲಿ ನಿನಗಾಗಿ ಬಾಸ್ ತಕಥೈಯಂತ ಆಡುತ್ತಿದ್ದಾರೆ. ನೀನೆಲ್ಲಿ ಎಂದು ಬೊಂಬ್ಡಾ ಹೊಡೆಯುತ್ತಿದ್ದಾರೆ'' ಅಂದ ಚಂದನ್.

ಬೆಚ್ಚಿಬಿದ್ದ ಮಹೇಶ. ಕರ್ನಲ್ ತನಗೇ ಕಾಯುತ್ತಿದ್ದಾರೆಯೇ? ಅಂದರೆ ಯಾವುದೋ ಅಸೈನ್‌ಮೆಂಟ್ ತನ್ನ ತಲೆಗೆ ಕಟ್ಟಲಿದ್ದಾರೆ ಎಂದೇ ಅರ್ಥ! ಅನ್ಸಾರಿಯ ಹದಿನೈದು ದಿನಗಳ ವ್ಯವಹಾರಕ್ಕೆ ಸಂಬಂಧಿಸಿದ್ದಲ್ಲ ತಾನೇ ಅದು. ಅದಿರಲಿ... ಇವರಿಷ್ಟು ನಿಖರವಾಗಿ ಇಲ್ಲಿಗೇ ಹೇಗೆ ಬಂದರು?

''ಭಾಯ್... ನಡೆದಿರುವುದಾದರೂ ಏನು ಕರೆಕ್ಟಾಗಿ ಹೇಳು!'' ಅಂದ ಮಹೇಶ ಜೇಬಿಗೆ ಕೈ ಹಾಕಿ ಅಲ್ಲೇ ಇದ್ದ ಸಿಗರೇಟ್ ಪ್ಯಾಕ್ ತೆಗೆದು ಒಂದು ಸಿಗರೇಟ್ ಹಚ್ಚಿಕೊಳ್ಳುತ್ತ

''ದೇವರಾಣೆಗೂ ಗುರು... ನಮಗೇನೂ ಗೊತ್ತಿಲ್ಲ. ನೀವು ಎಲ್ಲಿದ್ದರೂ ತಕ್ಷಣ ಕರೆತರುವಂತೆ ಹೇಳಿದರು ಮಾತ್ರ...'' ಅಂದ ಶ್ಯಾಂ. ತಲೆದೂಗಿದ ಮಹೇಶ ಇದ್ದಕ್ಕಿದ್ದಂತೆ ಅದೇಕೋ ಅದುರಿ ಬಿದ್ದ.

''ಏಕೆ ಗುರು... ಏನಾಯಿತು?'' ಅವನು ಕಂಗಾಲಾದುದನ್ನು ಗಮನಿಸಿ ಕೇಳಿದ ಚಂದನ್.

''ಮೈಗಾಡ್... ಬಿಲ್ಡಿಂಗ್‌ನಲ್ಲಿ ಒಬ್ಬ ಅಮಾಯಕನಿದ್ದಾನೆ. ಅವನನ್ನು ರಕ್ಷಿಸಬೇಕು'' ಎಂದು ಗಿರ್ರನೆ ತಿರುಗಿದ ಮಹೇಶ.

ಆಗಲೇ ಧನೇಲ್... ಎಂದು ಭಯಂಕರ ಶಬ್ದ ಮಾಡುತ್ತಾ ಸ್ಫೋಟಿಸಿತ್ತು ಅವನನ್ನು ಬಂಧಿಯಾಗಿರಿಸಿದ್ದ ಕಟ್ಟಡ.

ಉಸಿರುಗಟ್ಟಿದವನಂತಾದ ಮಹೇಶ. ಪ್ರತಿಮೆಗಳಂತೆ ನಿಂತರು ಶ್ಯಾಂ

ಚಂದನ್. ಅವರು ನೋಡುತ್ತಿರುವಂತೆಯೇ ಇಡೀ ಕಟ್ಟಡ ನೆಲ ಸಮವಾಯಿತು.

ನಿಟ್ಟುಸಿರುಗರೆದ ಮಹೇಶ ಸತ್ತ ವ್ಯಕ್ತಿಗಾಗಿ. ಎಂತಹ ಬ್ರಿಲಿಯಂಟ್ ಬಾಸ್ಟರ್ಡ್ ಅನ್ಸಾರಿ ಅನ್ನಿಸಿತ್ತು ಆ ಕ್ಷಣ.

ಅಲ್ಲಿಂದ ಅರೆ ಫರ್ಲಾಂಗ್ ದೂರದಲ್ಲಿತ್ತು ಚಂದನ್ ಮತ್ತು ಶ್ಯಾಂ ಬಂದಿದ್ದ ಮಾರುತಿ ಕಾರು.

ಮೂವರೂ ಕಾರನ್ನು ಸಮೀಪಿಸಿದರು. ಚಂದನ್ ಸ್ಟೀರಿಂಗ್ ಹಿಡಿದ. ಹಿಂದೆ ಆಸೀನರಾದರು ಮಹೇಶ ಮತ್ತು ಶ್ಯಾಂ. ಕಾರನ್ನು ಸ್ಟಾರ್ಟ್ ಮಾಡಿ ಮುನ್ನಡೆಸಿದ ಚಂದನ್.

''ಏನಾಯಿತು ಗುರು, ಏನಿದೆಲ್ಲಾ?'' ಕೇಳಿದ ಶ್ಯಾಂ.

ನಡೆದದ್ದನ್ನೆಲ್ಲಾ ಅವರಿಗೆ ವಿವರಿಸಿದ ಮಹೇಶ.

''ಮೈ ಗಾಡ್! ಇಷ್ಟೆಲ್ಲಾ ರಾಮಾಯಣವಾಯಿತೇ ಗುರು? ಹದಿನೈದು ದಿನ ನಿನ್ನನ್ನು ಬಂಧಿಸುವುದರಿಂದ ಅವರಿಗಾಗುತ್ತಿದ್ದ ಪ್ರಯೋಜನವಾದರೂ ಏನು?'' ಕೇಳಿದ ಚಂದನ್.

''ಅದನ್ನು ಹೇಳುವವನ ಬಳಿಗೇ ನಾವೀಗ ಹೋಗುತ್ತಿರುವುದು'' ಅಂದ ಮಹೇಶ.

''ಅಂದರೆ?''

'ನನ್ನನ್ನು ಅನ್ಸಾರಿಗೆ ಒಪ್ಪಿಸಲು ಬೃಹತ್ ಯೋಜನೆ ಹಾಕಿಕೊಂಡು ಆಚರಣೆಗಿಳಿಸಿದವರು ಜಾನಿ, ಖಾದರ್. ಅವರಿಬ್ಬರನ್ನೂ ಹಿಡಿದು ಕೈ ಕಾಲು ಮುರಿದರೆ ನಿಜ ತನ್ನಂತಾನೇ ಹೊರ ಬೀಳುತ್ತದೆ.'' ಅನ್ನುತ್ತ ತನ್ನ ಪ್ಲಾನ್ ವಿವರಿಸಲು ಶುರು ಮಾಡಿದ ಮಹೇಶ.

## 6

ಗಂಭೀರ ನಡಿಗೆಯಿಂದ ರೆಕ್ ಬಾರ್‌ಗೆ ಎಂಟರಾದ ಮಹೇಶ.

ಅವನ ಹಿಂದೆಯೇ ಒಳ ಬಂದರು ಶ್ಯಾಂ ಮತ್ತು ಚಂದನ್.

ಆ ಸೆಂಟರ್‌ನಲ್ಲಿ ಟ್ವೆಂಟಿಫೋರ್ ಅವರ್ಸ್ ಬಾರ್ ಅದೊಂದೇ. ಒಳಗಿದ್ದ ನಾಲ್ವರು ಕಸ್ಟಮರ್ಸ್ ಆರ್ಡರ್ ಪೂರೈಸುತ್ತಿದ್ದ ಇಬ್ಬರು ವೈಟರ್ಸ್ ಹೆಜ್ಜೆಗಳ ಶಬ್ದ ಕೇಳಿಸಿ... ಹೊಸ ಗಿರಾಕಿಗಳು ಅಂದುಕೊಳ್ಳುತ್ತ ಅತ್ತ ತಿರುಗಿದರು... ಬಂದವರಲ್ಲೊಬ್ಬ ಮಹೇಶನೆಂದರಿವಾಗಿ ಆಘಾತಕ್ಕೊಳಗಾಗಿ ಬಾಯಿ ತೆರೆದು ನಿಂತರು.

ಚಂದನ್ ಮತ್ತು ಶ್ಯಾಂ ಹೋಗಿ ಒಂದು ಟೇಬಲ್ ಮುಂದೆ ಕುಳಿತರು.

ಸುತ್ತಲೂ ನೋಡಿದ ಮಹೇಶ. ಜಾನಿ ಎಲ್ಲೂ ಕಾಣಿಸಲಿಲ್ಲ. ಇಷ್ಟೊತ್ತಿನಲ್ಲಿರುವವನು ಅವನೇ. ಆದರೆ ಎಕಿರುತ್ತಾರೆ ಈ ದಿನ? ಸಾಲಿಡ್ ಸಂಪಾದನೆಯಾಗಿರಬೇಕವನಿಗೆ ಅನ್ಸಾರಿಗೆ ತನ್ನನ್ನು ಪಾಯಿಂಟ್ ಔಟ್ ಮಾಡಿದ ಕಾರಣ. ಜಾನಿ, ಖಾದರ್ ಏನಿದ್ದರೂ ತೆರೆಯ ಮುಂದಿನ ಪಾತ್ರಗಳು ಹಿಂದಿರುವವನೇ ಮುಖ್ಯ.

ವೈಟರ್‌ಗಳ ಕಡೆಗೆ ನೋಡಿ ನಕ್ಕ ಮಹೇಶ.

''ಹಲೋ... ಏನಷ್ಟು ವಿಚಿತ್ರವಾಗಿ ನೋಡುತ್ತಿರುವಿರಿ? ನಾನೂ ಈ ಗ್ರಹದವನೇ. ನಿಮ್ಮ ಬಾಸ್ ಜಾನಿ ನಾನೂ ಕ್ಲೋಸ್ ಫ್ರೆಂಡ್ಸ್. ಅವನ ಬಳಿ ಅರ್ಜೆಂಟ್ ಕೆಲಸವೊಂದಿತ್ತು. ಎಲ್ಲಿದ್ದಾನವನು?'' ಪ್ರತಿಮೆಗಳಂತಾಗಿದ್ದ ವೈಟರ್ಸ್ ಅನ್ನು ಪ್ರಶ್ನಿಸಿದ ಮಹೇಶ.

ಆ ಮಾತಿಗೆ ಬೆಚ್ಚಿಬಿದ್ದರಿಬ್ಬರೂ.

''ಗೊತ್ತಿಲ್ಲ... ಬಾಸ್ ಎಲ್ಲಿ ಹೋದರೆಂದು ನಮಗೆ ಗೊತ್ತಿಲ್ಲ.'' ಉರು ಹೊಡೆದವರಂತೆ ಒಟ್ಟಿಗೆ ಹೇಳಿದರು.

''ಅಷ್ಟೊಂದು ಗಾಬರಿಯೇಕೆ? ಜಾನಿಯ ಬಳಿ ಅರ್ಜೆಂಟಾಗಿ ಮಾತಾಡಬೇಕು...'' ಅನ್ನುತ್ತಿದ್ದ ಮಹೇಶನ ಮಾತುಗಳಿಗೆ ಮಧ್ಯದಲ್ಲೇ ಅಡ್ಡಬಂದರವರು.

''ಗೊತ್ತಿಲ್ಲ... ಬಾಸ್ ಬಗ್ಗೆ ನಮಗೇನೂ ಗೊತ್ತಿಲ್ಲ'' ಅಂದರು ಮತ್ತೊಮ್ಮೆ.

''ಏನಂತೆ ಗುರು? ತಮ್ಮಂದಿರಿಬ್ಬರೂ ಗೊತ್ತಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿರುವಾಗ ಅವರನ್ನೇ ಕೇಳಿದರೇನು ಉಪಯೋಗ ಹೇಳು?'' ಅನ್ನುತ್ತಾ ಮಹೇಶನ ಬಳಿಗೆ ಬಂದ ಚಂದನ್.

ಚಂದನ್‌ನನ್ನೇ ಮೆಚ್ಚುಗೆಯಿಂದ ನೋಡಿದರಿಬ್ಬರೂ. ಅವರ ಕಡೆ ನೋಡಿ ನಕ್ಕ ಅವನು.

''ಗೊತ್ತಿಲ್ಲ ತಾನೇ? ನಿಜವಾಗಿಯೂ ಗೊತ್ತಿಲ್ಲ ಅಲ್ಲವೇ?'' ಅಂದ.

''ಹೌದು ಸಾರ್... ದೇವರಾಣೆ ಗೊತ್ತಿಲ್ಲ. ಈ ದೊಡ್ಡ ಮನುಷ್ಯನಿಗೆ ನಾನು ಹೇಳಿದ್ದು ಅರ್ಥವಾಗಲಿಲ್ಲ. ನೀವಾದರೂ ಹೇಳಿ'' ಅಂದ ಅವರಲ್ಲೊಬ್ಬ.

''ಆಯಿತಣ್ಣಾ... ಖಂಡಿತ ಹೇಳುತ್ತೇನೆ'' ಅನ್ನುತ್ತಿದ್ದಂತೆ ಬಿಗಿದ ಮುಷ್ಟಿ ರಪ್ಪನೆ ಅವನ ಮುಖದ ಮೇಲಿಳಿಸಿದ ಚಂದನ್.

ಕಿಟಾರನೆ ಕಿರುಚಿ, ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಅವನು ಹಿಂದಕ್ಕೆ ಬಿದ್ದುಬಿಟ್ಟ. ಮೂಗು ಫ್ಲಾಟ್ ಆಗಿ, ಬಾಯಿಂದ ಮೂಗಿಂದ ರಕ್ತ ದಳ ದಳ ಸುರಿಯತೊಡಗಿತು.

ಆ ದೃಶ್ಯ ನೋಡಿ ಎರಡನೆಯವನು ಚಟ್ಟನೆ ಚೀರಿ ಹಿಂದಕ್ಕೆ ತಿರುಗಿ, ಓಡಿಬಿಡಲು ಪ್ರಯತ್ನಿಸಿದ.

ಅವನು ಒಂದೆಜ್ಜೆ ಇಟ್ಟನಷ್ಟೆ. ಎರಡನೇ ಹೆಜ್ಜೆಗೆ ಬಂಡೆಯಂತೆ ಅಡ್ಡ ಬಂದು ನಿಂತಿದ್ದ ಶ್ಯಾಂ ಘಟಾರನೊಂದು ಡಿಚ್ಚಿ ಹೊಡೆದ.

''ಅಮ್ಮಾಗೇ...'' ಎಂದು ಊರೆಲ್ಲಾ ಕೇಳುವಂತರಚಿ ಟೇಬಲ್ ಮೇಲೆ ಬಿದ್ದು ಅದರ ಸಮೇತ ಕೆಳಕ್ಕುರುಳಿದ ಅವನು.

ಅಲ್ಲಿಯವರೆಗೆ ಇದ್ದದ್ದು ನಾಲ್ವರು ಕಸ್ಟಮರ್ಸ್. ಆಮೇಲೆ ಎದ್ದೆವೋ ಬಿದ್ದೆವೋ ಎಂದು ಹೊರಕ್ಕೆ ದೌಡಾಯಿಸಿಬಿಟ್ಟರು.

ಟೇಬಲ್ಲೊಂದರ ಮೇಲೆ ಕಾಲಲ್ಲಾಡಿಸುತ್ತಾ ಕುಳಿತು ಸಿಗರೇಟ್ ಹಚ್ಚಿಕೊಂಡ ಮಹೇಶ.

ಒಬ್ಬರು ಮೂವರಾದರು. ವೈಟರ್‌ಗಳಿಗೆ ಅಂಜಿಕೆ ಶುರುವಾಯಿತು.

894.814 308 72
ANA 1995



''ಕಮಾನ್ ಮ್ಯಾನ್... ಜಾನಿ ಎಲ್ಲಿದ್ದಾನೆ? ಬೇಗ ಹೇಳದಿದ್ದರೆ ನಿಮಗೆ, ಈ ಬಾರ್‌ಗೆ ಒಟ್ಟಿಗೆ ಬೆಂಕಿಯಿಟ್ಟು ಬಿಡುತ್ತೇವೆ.'' ಎಂದ ಕರ್ಕಶ ಧ್ವನಿಯಿಂದ ಚಂದನ್.

''ಕಾಸೀಂ, ರಷೀದ್, ಜಾವೇದ್... ಎಲ್ಲರೂ ಬನ್ನಿರೋ... ಈ ರಾಕ್ಷಸರು ನಮ್ಮ ಪ್ರಾಣ ತೆಗೆಯುತ್ತಿದ್ದಾರೆ.'' ಇದ್ದಕ್ಕಿದ್ದಂತೆ ಅರಚಿಕೊಂಡ ಕೆಳಗೆ ಬಿದ್ದಿದ್ದವರಲ್ಲೊಬ್ಬ.

ಆ ಕೂಗಿನ ಫಲವಾಗಿ ಸರಸರ ಕಿಚನ್‌ನೊಳಗಿಂದ ಹೊರ ಬಂದರು ಐದು ಜನ ಬಾರ್ ಕೆಲಸಗಾರರು. ಎಲ್ಲರ ಕೈಗಳಲ್ಲೂ ಒಂದೊಂದು ಹತಾರ.

''ನೋಡುವುದೇನು... ಬೆಂಡೆತ್ತಿ'' ಏಟು ತಿಂದವನು ಕೋಪ ಗೊಂಡ.

ಆರು ಜನರೂ ಒಬ್ಬರನೊಬ್ಬರು ಎಚ್ಚರಿಸಿಕೊಂಡು ಮುನ್ನುಗಿ ಬಂದರು. 637584

ತಲಾ ಇಬ್ಬರಂತೆ ಹಂಚಿಕೊಂಡು ಒಬ್ಬೊಬ್ಬರ ಷೇಪ್ ತೆಗೆದುಬಿಟ್ಟರು ಮಹೇಶ, ಶ್ಯಾಂ ಮತ್ತು ಚಂದನ್.

ಎರಡೇ ನಿಮಿಷದಲ್ಲಿ ರಕ್ತ ಸಿಕ್ತ ಮೈ, ಮುಖಗಳ ಆರೂ ಜನರೂ ಫ್ಲಾಟ್.

ತಮ್ಮವರೆಲ್ಲಾ ನೆಲಕ್ಕುರುಳಿದ ರಭಸಕ್ಕೆ ಕಂಗಾಲಾಗಿ ಹೋದರು ವೈಟರ್‍ಸ್. ಬಂದವರು ಮನುಷ್ಯರಲ್ಲ ಎಂಬ ಭಾವನೆ ಬಲಿಯತೊಡಗಿತು ಅವರಲ್ಲಿ, ಹೊಡೆಯುವುದೆಂದರೆ ಹಾಗೆ ಹೊಡೆಯುವುದೇ... ಅದೂ ಅಷ್ಟು ಫಾಸ್ಟಾಗಿ.

ಮೇಲೆದ್ದು ಪರಾರಿಯಾಗಿ ಬಿಡಲು ಪ್ರಯತ್ನಿಸಿದರು.

ಅವರ ಸೊಂಟಗಳಿಗೆ ಝಾಡಿಸಿ ಒದ್ದು ಮುಂದಕ್ಕೆ ಬಿದ್ದ ಅವರ ಕಾಲರ್‌ಗಳನ್ನಿಡಿದು ದರ ದರ ಎಳೆದು ತಂದರು ಚಂದನ್ ಮತ್ತು ಶ್ಯಾಂ.

ಅಷ್ಟಕ್ಕೇ ಸುಮ್ಮನಾಗದೆ, ಒಂದು ನಿಮಿಷ ಈ ಕೆನ್ನೆ, ಆ ಕೆನ್ನೆಗಳಿಗೆ ರೆಸ್ಟ್ ಕೊಡದೆ ಬಾರಿಸಿದರು.

ಆಗ ಜ್ಞಾನೋದಯವಾಯಿತು ಆ ಇಬ್ಬರಿಗೆ.

"ಬೇಡ... ಹೊಡೆಯಬೇಡಿ... ನಿಜ ಹೇಳಿ ಬಿಡುತ್ತೇವೆ" ಅಂದ ಒಬ್ಬ ಗೋಳೋ ಎಂದು ಅಳುತ್ತಾ.

"ರ್‍ಯಾಸ್ಕಲ್ಸ್... ಈ ಬುದ್ಧಿ ಮೊದಲೇ ಇದ್ದಿದ್ದರೆ ಇಷ್ಟೇಟುಗಳು ತಪ್ಪುತ್ತಿರಲಿಲ್ಲವೇ?" ಅನ್ನುತ್ತಾ ಇನ್ನೊಂದು ಬಿಟ್ಟ ಚಂದನ್.

"ಆಲ್ ರೈಟ್... ಎಲ್ಲಿದ್ದಾನೆ ಜಾನಿ?" ಕೇಳಿದ ಮಹೇಶ.

"ಅವನ ಮನೆಯಲ್ಲೇ ಇದ್ದಾನೆ. ಯಾರಿಗೂ ತಿಳಿಸಬೇಡಿ ಅಂದಿದ್ದ."

"ಅವನ ಮನೆಯಿರುವುದೆಲ್ಲಿ?"

ವಿಳಾಸ ತಿಳಿಸಿದ ವೈಟರ್.

ಅವರೆಲ್ಲರ ಕೈ ಕಾಲು ಟೇಬಲ್ ಕ್ಲಾತ್ಸ್ ಹರಿದು ಬಿಗಿದು ಕಟ್ಟಿ ಕಿಚನ್‌ನೊಳಕ್ಕೆ ಸೇರಿಸಿ ಬಾರ್ ಬಾಗಿಲು ಎಳೆದು ಕಾರಿನ ಕಡೆಗೆ ನಡೆದರು ಮೂವರೂ.

★

ಗ್ಲಾಸ್‌ನಲ್ಲಿದ್ದ ಕೊನೆಯ ಪೆಗ್ ಗಂಟಲಿಗೆ ಸುರುವಿಕೊಂಡು ಮೆಲುವಾಗಿ ವಿಷಲ್ ಹಾಕುತ್ತಾ ತನ್ನ ಮುಂದಿದ್ದ ನೋಟಿನ ಕಂತೆಗಳನ್ನ ಲೆಕ್ಕ ಹಾಕುವುದರಲ್ಲಿ ಮಗ್ನನಾದ ಜಾನಿ.

ಆ ವೇಳೆಗಾಗಲೇ ಸಕತ್ತಾಗಿ ಕುಡಿದಿದ್ದ ಕಣ್ಣುಗಳು ಕೆಂಪಡರಿದ್ದವು. ಮೈ ಗಾಳಿಯಲ್ಲಿ ತೇಲುತ್ತಿರುವಂತಿತ್ತು. ಇದ್ದಕ್ಕಿದ್ದಂತೆ ಏಕೋ ಅನುಮಾನ ಬಂದು ತಲೆಯೆತ್ತಿ ನೋಡಿದ.

ಎದುರಿಗೆ ಮೂರು ನೆರಳುಗಳು ಕಾಣಿಸಿದಂತಾಗಿ ನಾಲ್ಕೈದು ಸಲ ತಲೆಯೊದರಿ ಕಣ್ಣುಜ್ಜಿಕೊಂಡು, ಮತ್ತೊಮ್ಮೆ ನೋಡಿದ. ಕಾದ ಕಾವಿಯಿಂದ ಬರೆಯಿಟ್ಟಂತಾಯಿತು.

"ಜಾನಿ... ಲೆಕ್ಕ ಸರಿಯಾದೆಯೇ?" ಮೃದು ಧ್ವನಿಯಲ್ಲಿ ಕೇಳಿದ ಮಹೇಶ.

ಅದುರಿಹೋದ ಜಾನಿ. ಗಂಟಲ ತೇವ ಸಂಪೂರ್ಣವಾಗಿ

ಮಾಯವಾಯಿತು. ತನ್ನ ಮುಂದಿರುವುದು ನೆರಳುಗಳಲ್ಲ. ಮೂವರು ಮನುಷ್ಯರು... ಸರಿಯಾಗಿ ಕಾಣಿಸುತ್ತಿಲ್ಲ.

''ಏಯ್... ಯಾರು ನೀ?'' ಅಷ್ಟಕ್ಕೇ ನಿಂತಿತು ಮಾತು ಕಣ್ಣುಗಳು ಫೋಕಸ್ ಆಗಿ.

ಮಹೇಶನನ್ನು ಕಂಡೊಡನೆ ಚಿಟ್ಟನೆ ಚೀರ ಹೋಗಿ, ಕೊನೆಯ ಕ್ಷಣದಲ್ಲಿ ಕಂಟ್ರೋಲ್ ಮಾಡಿಕೊಂಡ. ವಿಸ್ಕಿ ಮತ್ತೆಲ್ಲಾ ಏಕ್‌ದಂ ಇಳಿದು ಹೋಯಿತು.

''ಮೈಗಾಡ್... ನೀನಾ... ಹೇಗೆ ಬಂದೆ... ಇಲ್ಲಿಗೆ ಹೇಗೆ ಬಂದೆ?'' ಕಂಪಿಸುತ್ತಾ ಕೇಳಿದ.

''ಅದೆಲ್ಲಾ ನಿಧಾನವಾಗಿ ಮಾತಾಡೋಣವಂತೆ. ಅವನನ್ನು ಅನ್ಸಾರಿಗೆ ತೋರಿಸಿದ್ದಕ್ಕೆ ನಿನಗೆ ಬಂದ ರಖಂ ಎಷ್ಟು ತಿಳಿಸುವೆಯಾ? ಹಾಗೆಯೇ ಖಾದರ್ ಅಮೌಂಟ್ ಸಹ ತಿಳಿಸು.'' ಸಿಗರೇಟ್ ಹಚ್ಚಿಕೊಳ್ಳುತ್ತಾ ಕೇಳಿದ್ದ ಮಹೇಶ.

ಸುಸ್ತಾಗಿ ಕುಳಿತು ಬಿಟ್ಟ ಜಾನಿ. ಬಾಯಿಂದ ಒಂದೇ ಒಂದು ಶಬ್ದ ಹೊರ ಬರಲಿಲ್ಲ ಅವನಿಗೆ.

''ಡೋಂಟ್ ವರಿ ಜಾನಿ. ನಿನ್ನ ಹಣಕ್ಕಾಗಿ ನಾವು ಬರಲಿಲ್ಲ. ನನ್ನ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿದರೆ ನಿನಗೇನೂ ಆಗದೆಂದು ಮಾತ್ರ ಹೇಳಬಲ್ಲೆ...''

''ಗೊತ್ತಿಲ್ಲ... ನನಗೇನೂ ಗೊತ್ತಿಲ್ಲ...'' ಮೆಲ್ಲನುಸುರಿದ ಜಾನಿ.

''ಗುರು... ಇವನಿಗೂ ನಾಲ್ಕು ಬಿಟ್ಟರಾಯಿತು. ನೀನು ಕುಳಿತುಕೋ, ನಾನು ಬಾಯಿ ಬಿಡಿಸುತ್ತೇನೆ'' ಅನ್ನುತ್ತಾ ಮುಂದೆ ಬಂದ ಚಂದನ್.

''ಜಾನಿ... ನೀನಾಡಿದ ನಾಟಕಕ್ಕೆ ನಿನ್ನನ್ನು ಪೀಸ್‌ಪೀಸ್ ಮಾಡಿ ಗಟಾರದಲ್ಲೆಸೆಯಬೇಕು. ನಮ್ಮವರು ಮೊದಲೇ ಒಳ್ಳೆಯವರಲ್ಲ. ನಿಜ ಹೇಳಿ ಪ್ರಾಣ ಉಳಿಸಿಕೋ. ಇಲ್ಲದಿದ್ದರೆ ಇಂದೇ ನಿನ್ನ ಕೊನೆಯ ದಿನ'' ಸಿಗರೇಟ್ ಹೊಗೆಯನ್ನು ಹೊರ ಚೆಲುತ್ತಾ ಹೇಳಿದ ಮಹೇಶ.

ಚೆನ್ನಾಗಿಯೇ ಯೋಚಿಸಿದ ಜಾನಿ, ಆದರೆ ಉಲ್ಟಾ ಆಗಿ! ಏನೋ

ಹೇಳಿ ತಪ್ಪಿಸಿಕೊಳ್ಳದಿದ್ದರೆ ಅನ್ಸಾರಿ ಪ್ರಾಣ ಸಮೇತ ಉಳಿಸಲಾರ ಎಂದು ಮನಸ್ಸಿನೊಂದು ಭಾಗ ಚುಚ್ಚತೊಡಗಿತ್ತು.

ಅವನ ಆಲೋಚನೆಯ ಜಾಡು ಅರ್ಥವಾಗಿ, ಕ್ರೂರವಾಗಿ ನಕ್ಕ ಮಹೇಶ.

''ನೋಡು ಜಾನಿ! ನಿನ್ನಲ್ಲಿ ಛತ್ರಿ ಬುದ್ಧಿ ಸಕತ್ತಾಗಿದೆಯೆಂದು ನನಗೆ ಚೆನ್ನಾಗಿ ಗೊತ್ತು. ಕಟ್ಟು ಕಥೆ ಹೇಳಿದೆಯೋ ನಾಲಿಗೆ ಕತ್ತರಿಸಿ ಬಿಡುತ್ತೇನೆ.'' ಗಡಸು ಧ್ವನಿಯಲ್ಲಿ ಎಚ್ಚರಿಸಿದ.

''ಹೇಳಲಿ ಬಿಡು ಗುರು... ಇವನ ಹಣೆಬರಹ ಸ್ಮಶಾನ ಕ್ಕೋಗಬೇಕೆಂದಿದ್ದರೆ ಯಾರೇನು ಮಾಡಲು ಸಾಧ್ಯ?'' ಅಂದ ಶ್ಯಾಂ.

''ನಿಜವಾಗಿಯೂ ನನಗೇನೂ ಗೊತ್ತಿಲ್ಲ. ಅನ್ಸಾರಿ ಕಡೆಯವನು ಬಂದು ಸಣ್ಣ ನಾಟಕ ಆಡೋಣ ಎಂದದ್ದಕ್ಕೆ ಒಪ್ಪಿದೆನಷ್ಟೇ. ನಿನ್ನನ್ನು ಬಾರ್‌ನಲ್ಲಿ ತೋರಿಸಿದರೆ ಐವತ್ತು ಸಾವಿರ ಕೊಡುವೆನೆಂದ ಅವನು. ಅಷ್ಟೇ ನಾನು ಮಾಡಿದ್ದು'' ಅಂದ ಜಾನಿ.

''ಅನ್ಸಾರಿ ಈಗಲ್ಲಿದ್ದಾನೆ?''

''ನನಗೆ ಗೊತ್ತಿಲ್ಲ. ಏನಾದರೂ ಅವಶ್ಯಕತೆಯೊದಗಿದಾಗ ಅವನ ಕಡೆಯವರು ಬರುತ್ತಾನೆ.''

''ಖಾದರ್ ಎಲ್ಲಿದ್ದಾನೆ?''

''ಅವನ ಆಗಮನ, ನಿರ್ಗಮನವೇ ನನಗೆ ಸಸ್ಪೆನ್ಸ್. ಇದ್ದರೆ ವಾರ ಇರುತ್ತಾನೆ. ಆಮೇಲೆ ತಿಂಗಳು ಕಾಣಿಸುವುದಿಲ್ಲ. ಬಂದರೂ ವ್ಯವಹಾರ ಗಮನಿಸಿ ಹೊರಟು ಹೋಗುತ್ತಾನೆ. ದೇವರಾಣೆ, ಇಷ್ಟರ ವಿನಹ ನನಗೇನೂ ಗೊತ್ತಿಲ್ಲ.'' ಒಂದು ಮೊಣಕಾಲೂರಿ ಕೈ ಮುಗಿಯುತ್ತಾ ಕುಳಿತು ಬಿಟ್ಟ ಜಾನಿ.

ಅವನ ರೀತಿಗೆ ನಕ್ಕ ಮಹೇಶ. ''ದೇವರು ಬೇರೆ ಕೇಡು ನಿನಗೆ ಜಾನಿ. ನಿನ್ನ ಬಾಯಿಂದ ನಿಜ ಬರಿಸಲು ಇರುವುದೊಂದೇ ದಾರಿ. ಒಂದು ಕಣ್ಣಿನ ಗುಡ್ಡ ಹೊರಕ್ಕೆಗರಿಸುತ್ತೇನೆ. ಇನ್ನೊಂದರಲ್ಲಿ ನೋಡಿಕೋ'' ಅನ್ನುತ್ತಾ ಬಲ ಮೊಣಕ್ಕೆ ಟ್ವಿಸ್ಟ್ ಮಾಡಿದ ಮಹೇಶ.

ವಹಿಸಲಾಯಿತು.

ಗಡಿಯಲ್ಲಿನ ಇಂಪಾರ್ಟೆಂಟ್ ಬೇಸ್‌ಮೆಂಟ್ಸ್, ಆಯಿಲ್ ಗ್ರೇಡ್ಡಿಂಗ್ಸ್, ನೇವಿಯ ಸ್ಟ್ರಿಂಗ್ಸ್, ಆರ್ಮಿಯ ರಹಸ್ಯ ವಿವರಗಳು... ಇವೇ ಮುಂತಾದ ಸೀಕ್ರೆಟ್ ಇನ್‌ಫರ್ಮೇಷನ್ಸ್‌ನ ಒಂದು ಮೈಕ್ರೋಫಿಲಂ ಅನ್ನು ಭದ್ರಪಡಿಸಿ ರೇಮಾಂಡ್ ಎಂಬ ಸೀನಿಯರ್ ಆಫೀಸರ್ ಕೈನಲ್ಲಿ ಕೊಟ್ಟು ಮಿಂಟೂಗೆ ಕಳಿಸಿದರು ಡಿಫೆನ್ಸ್ ಮಿನಿಸ್ಟರ್.

ಮಿಂಟೋವರೆಗೇನೋ ಕ್ಷೇಮವಾಗೇ ಹೋದ ರೇಮಾಂಡ್. ಮಿಂಟೋ ಏರ್‌ಪೋರ್ಟ್‌ನಲ್ಲಿ ಕಾಲಿಟ್ಟೊಡನೆ ಅವನನ್ನು ಭೀಕರವಾಗಿ ಕೊಲೆಯೆಸಗಿ ಮೈಕ್ರೋಫಿಲಂ ಅಪಹರಿಸಿದರು ಶತ್ರುಗಳು. ಆ ಮಾಹಿತಿ ಲೀಕೌಟ್ ಆದುದ್ದೇಗೆಂದೇ ಅರಿವಾಗಿಲ್ಲ ಇದುವರೆಗೆ.'

ತಕ್ಷಣ ರಂಗಕ್ಕಿಳಿದರು ಬರ್ಮಾ ಸೀಕ್ರೆಟ್ ಬ್ರಾಂಚ್ ಏಜೆಂಟರು. ಇಡೀ ದೇಶವೆಲ್ಲಾ ಸುತ್ತಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಅಲ್ಲಾಡಿ ಹೋಯಿತು ಬರ್ಮಾ ಸರ್ಕಾರ.

ಅದಕ್ಕೆ ಕಾರಣವೂ ಇತ್ತು.

ಬರ್ಮಾ ದೇಶದ ಭವಿಷ್ಯವೇ ಆ ಮೈಕ್ರೋಫಿಲಂನಲ್ಲಿತ್ತು. ದೇಶ ರಕ್ಷಣೆಯ ಕಾರ್ಯ ಭಾರವೆಲ್ಲಾ ಅಡಗಿತ್ತು ಮೈಕ್ರೋಫಿಲಂನಲ್ಲಿ. ಶತ್ರುಗಳ ಕೈನಲ್ಲದು ಬಿದ್ದರೆ ಬರ್ಮಾ ಇಪ್ಪತ್ನಾಲ್ಕು ಗಂಟೆಗಳಲ್ಲಿ ಬಲಿಷ್ಠ ರಾಷ್ಟ್ರವೊಂದರ ಕೈಗೊಂಬೆಯಾಗುವ ದಾರುಣ ಪರಿಸ್ಥಿತಿ ಏರ್ಪಡಾಗಿತ್ತು.

ಹೋದ ಏಜೆಂಟರೆಲ್ಲ ಕೈ ಅಲ್ಲಾಡಿಸಿಕೊಂಡು ವಾಪಸ್ಸಾದರು, ಷಿಮೋಗಾ ಎಂಬ ಒಬ್ಬ ಏಜೆಂಟರ ವಿನಹ.

ನಿನ್ನೆ ತಾನೇ ಅವನಿಂದೊಂದು ಮೇಸೇಜ್ ಬಂತು. ಶತ್ರುಗಳ ರಹಸ್ಯ ಒಂದಷ್ಟು ತಿಳಿಯಿತೆಂದು, ರೇಮಾಂಡ್ ಕೊಲೆಯಲ್ಲಿ ವಾಂಗ್ ಛೂ ಎನ್ನುವವನ ಕೈವಾಡವಿದೆಯೆಂದು, ಸಂಪೂರ್ಣ ವಿವರಗಳನ್ನರಿಯಲು ವಾರ ಬೇಕಾಗುವುದೆಂದು, ಸರಿಯಾಗಿ ಇಂದಿನಿಂದ ಏಳನೇ ದಿನ ರಾತ್ರಿ ಎರಡು ಗಂಟೆಗೆ ರಂಗೂನ್ ಹಾರ್ಬರ್‌ಗೆ ಸಮೀಪದಲ್ಲಿರುವ ಮೂಷ್ಲಿ

"ವಾಂಗ್ ಥೂ."

ಆಗ ಕರ್ನಲ್ ಬೆಚ್ಚಿಬಿದ್ದರು. ಅವರ ಕಳವಳ ಸ್ಪಷ್ಟವಾಗಿ ಗಮನಿಸಿದರು ಮೂವರೂ.

"ವೆಲ್... ಒಂದು ರೀತಿ ಇದು ಒಳ್ಳೆಯದೇ" ಅಂದರು. "ಕೊನೆಗೆ "ಹುಡುಕ ಹೋದ ಬಳ್ಳಿ ಕಾಲಿಗೇ ತೊಡರಿದಂತಾಯಿತು."

ಈಗ, "ವಾಟ್ ಡು ಮೀನ್ ಸರ್?" ಅಂದ ಮಹೇಶ.

"ಇಮ್ಮಿಡಿಯೆಟ್ ಆಗಿ ನೀನು ಇನ್‌ವಾಲ್ವ್ ಆಗಲಿರುವ ಅಸೈನ್‌ಮೆಂಟ್‌ನ ಕೇಂದ್ರ ಬಿಂದು ಈ ವಾಂಗ್ ಥೂ ಕ್ಯಾರೆಕ್ಟರ್" ಅಂದರವರು.

"ವಾಟ್?" ದಿಗ್ಭ್ರಮೆಗೊಂಡ ಮಹೇಶ.

"ಹೌದು ಸನ್. ಬಹಳ ಬುದ್ಧಿವಂತನಂತೆ ಕಾಣುತ್ತಾನೆ. ಬರ್ಮಾ ಸರ್ಕಾರದ ನಡೆಯನ್ನೆಲ್ಲಾ ಗಮನಿಸುತ್ತಿದ್ದಾನೆಂದರೆ ಸರ್ಕಾರದಲ್ಲಿ ಅವನ ಇನ್‌ಫ್ಲುಯೆನ್ಸ್ ಎಷ್ಟಿರಬಹುದು ಯೋಚಿಸು. ನೀನು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವೆಯೆಂದರಿತು ಅಡ್ವಾನ್ಸಾಗಿ ನಿನ್ನ ಮೂವ್‌ಮೆಂಟ್ ನಿಯಂತ್ರಿಸಲು ಪ್ರಯತ್ನಿಸಿದ್ದಾನೆ. ವೆಲ್... ಈ ಫೈಲ್ ನೋಡು, ನಿನಗೇ ಅರ್ಥವಾಗುತ್ತದೆ" ಎಂದು ಡ್ರ್ಯಾಯರ್‌ನಿಂದ ಒಂದು ಗ್ರೀನ್ ಫೈಲ್ ತೆಗೆದು ಅವನಿಗಿತ್ತರು ಕರ್ನಲ್.

ಫೈಲ್ ಓಪನ್ ಮಾಡಿದ ಮಹೇಶ.

ಬರ್ಮಾ ಮಿಲಿಟರಿಯಲ್ಲಿ ಒಳ್ಳೆಯ ಹೆಸರು, ಕೀರ್ತಿ ಗಳಿಸಿದವನು ಕಿಯಾಂಗ್. ಅವನೊಬ್ಬ ಮಿಲಿಟರಿ ತಜ್ಞ ಎನ್ನಲಡ್ಡಿಯಿಲ್ಲ. ಅವನ ಪ್ಲಾನ್‌ಗೆ ಎದಿರೇಟನ್ನುವುದೇ ಇಲ್ಲ. ಅವನಿಂದಲೇ ಬರ್ಮೀಸ್ ಆರ್ಮಿ-ಅಂತರರಾಷ್ಟ್ರೀಯ ಕೀರ್ತಿ ಪಡೆದಿತ್ತೆನ್ನಬಹುದು.

ಇತ್ತೀಚೆಗೆ ರಿಟೈರ್ ಆಗಿ, ಮಿಂಟೂ ನಗರದಲ್ಲಿ ಹಾಯಾಗಿ ವಿಶ್ರಾಂತಿಯನ್ನನುಭವಿಸುತ್ತಿದ್ದ ಕಿಯಾಂಗ್.

ಆಗಲೇ ಮಿಲಿಟರಿ ರಿವೈವ್ ಮಾಡುವ ಭಾರಿ ಯೋಜನೆಯೊಂದನ್ನು ಕೈಗೆತ್ತಿಕೊಂಡಿತ್ತು ಬರ್ಮಾ ಸರ್ಕಾರ. ಆ ಹೊಣೆಯನ್ನು ಕಿಯಾಂಗ್‌ಗೇ

ಗ್ರೌಂಡ್‌ನಿಂದ ಹೊರಬಂದಿದ್ದಾನೆ ಅನ್ಸಾರಿ.

''ಇಷ್ಟೇ ನನಗೆ ಗೊತ್ತಿರುವುದು ಮಹೇಶ. ಅನ್ಸಾರಿ ಇಲ್ಲೇ ಎಲ್ಲೋ ಇದ್ದಾನೆ. ಅಷ್ಟು ಮಾತ್ರ ಹೇಳಬಲ್ಲೆ'' ಅಂದ ಜಾನಿ.

''ಆಲ್‌ರೈಟ್. ಇನ್ನಾದರೂ ಡಬ್ಬಲ್ ಕ್ರಾಸ್ ವ್ಯವಹಾರ ಬಿಟ್ಟು ನೇರವಾಗಿ ಬದುಕು. ನಾವಿಲ್ಲಿಗೆ ಬಂದವೆಂದು ಅನ್ಸಾರಿಗೆ ತಿಳಿದರೆ ನಿನ್ನನ್ನು ಕೊಚ್ಚಿ ಹಾಕುತ್ತಾನೆ. ಎರಡು ದಿನ ಎಲ್ಲಾದರೂ ತಲೆ ಮರೆಸಿಕೊ. ಹೇಗಿದ್ದರೂ ಅವನೇ ಕೊಟ್ಟ ದುಡ್ಡಿದೆಯಲ್ಲ'' ಅಂದ ಮಹೇಶ.

ಆಗಲೆನ್ನುವಂತೆ ತಲೆಯಾಡಿಸಿದ ಜಾನಿ.

ಅವನ ಮನೆಯಿಂದ ಹೊರ ನಡೆದರು ಮೂವರು.

## 7

''ವಾಟ್... ವಾಟ್ ಡು ಯು ಮೀನ್? ಏನೀಗ ನೀನಂದದ್ದು?'' ದಿಗ್ಭ್ರಾಂತರಾಗಿ ಕೇಳಿದರು ಕರ್ನಲ್.

''ಹೌದು ಸಾರ್... ಆ ಕಟ್‌ಥ್ರೋಟನ್ನು ಹಿಡಿದಿದ್ದರೆ ಸಂಪೂರ್ಣ ವಿವರಗಳು ಸಿಗುತ್ತಿದ್ದವು'' ಅಂದ ಮಹೇಶ.

ಜಾನಿಯ ಬಳಿಯಿಂದ ನೇರ ಸೆಲ್ ಹೆಡ್ ಕ್ವಾರ್ಟರ್ಸ್‌ಗೆ ಬಂದಿದ್ದರು ಮೂವರೂ. ಅಷ್ಟೊತ್ತಿಗೆ ಅವರಿಗಾಗಿ ಅಸಹನೆಯಿಂದ ಮಿಡುಕುತ್ತಾ ಕಾಯುತ್ತಿದ್ದರು ಕರ್ನಲ್.

ಮಹೇಶ ಹೇಳಿದ ಕಥೆ ಕೇಳಿದ ಮೇಲೆ ಅವರ ಬಾಯಿಂದ ಹೊರ ಬಂದಿದ್ದ ಡೈಲಾಗ್ ಅದು.

''ಅವನ ಹೆಸರೇನೆಂದೆ? ಅದೇ ರಂಗೂನ್ ಕ್ಯಾರೆಕ್ಟರ್'' ಮತ್ತೆ ಕೇಳಿದರು.

ಸರ್ರನೆ ಅಂಗೈಗೆ ಜಾರಿದ 'ರಾಜ'ನ ಚೂಪು ಆಗಲು ಲೈಟ್ ಬೆಳಕಲ್ಲಿ ಫಳ್ಳನೆ ಪ್ರತಿಫಲಿಸಿತು.

ಗಡಗಡ ನಡುಗಿಬಿಟ್ಟ ಜಾನಿ ಚೂರಿಯ ದರ್ಶನ ಮಾತ್ರದಿಂದಲೇ. ''ಅದು ಅದೇಕೆ?'' ಅಂದ.

''ನಿನ್ನ ಕಣ್ಣಿನ ಆಪರೇಷನ್ ಮಾಡಲು. ತನ್ಮೂಲಕ ನಿನ್ನಿಂದ ಸತ್ಯ ಹೊರಡಿಸಲು'' ಅನ್ನುತ್ತಾ ಮುಂದೆ ಬಂದ ಮಹೇಶ.

ಕುರ್ಚಿಯಿಂದೆದ್ದು ಹಿಂದೆ ಹಿಂದೆ ಸರಿದ ಜಾನಿ ಗೋಡೆ ಸಿಕ್ಕಾಗ ಸ್ತಬ್ಧನಾದ.

ಭೀಷಣವಾಗಿ ನಗುತ್ತಾ ಅವನ ಕೆನ್ನೆಯ ಮೇಲೊಂದು ಕಾಟು ಹಾಕಿದ ಮಹೇಶ ಇಂಚಿನಷ್ಟೇ. ಛಿಲ್ಲನೆ ರಕ್ತ ಚಿಮ್ಮಿತ್ತು. ಚಿಟಾರನೆ ಕಿರಿಚಿದ ಜಾನಿ. ಚೂರಿ ಕೆಳ ತುಟಿ ಮೇಲಿಟ್ಟು ಪ್ರೆಸ್ ಮಾಡಿದ ಮಹೇಶ. ಕಸಕ್ಕನಿಳಿಯಿತದು.

''ನೆಕ್ಸ್ಟ್ ಐಟಮ್... ನಿನ್ನ ಕಣ್ಣು'' ಅಂದ ಮಹೇಶ.

ಮಹೇಶನ ಕಾಲಿಡಿದುಬಿಟ್ಟ ಜಾನಿ. ತನ್ನಂತಾನೇ ಹೊರ ಬರತೊಡಗಿದವು ಮಾತುಗಳು ಅವನ ರಕ್ತ ಸಿಕ್ತ ಬಾಯಿಂದ. ''ನಿಜವಾಗಿಯೂ ಅನ್ಸಾರಿ ಈಗೆಲ್ಲಿದ್ದಾನೆಂದು ಗೊತ್ತಿಲ್ಲ. ನನಗೇ ಅಲ್ಲ... ಯಾರಿಗೂ ಗೊತ್ತಿಲ್ಲ. ಅವನಿಗೆ ನಾಲ್ಕೈದು ವಿಳಾಸಗಳಿವೆ. ಅವ್ಯಾವೂ ನನಗೆ ಸರಿಯಾಗಿ ಗೊತ್ತಿಲ್ಲ. ಅವನ ಅಸಿಸ್ಟೆಂಟ್ ನನ್ನನ್ನವನ ಬಳಿಗೆ ಕರೆದೊಯ್ದಾಗ ಯಾರೋ ವಾಂಗ್ ಛೂ ಅನ್ನುವವನ ಬಗ್ಗೆ ಮಾತಾಡುತ್ತಿದ್ದರು. ರಂಗೂನ್‌ನಿಂದ ಬಂದನಂತೆ ಅವನು. 'ಜಿಂಕೆ'ಯನ್ನು ಬಂಧನದಲ್ಲಿರಿಸಿದರೆ ಎರಡು ಕೋಟಿ ಕ್ಯಾಷ್ ಕೊಡುತ್ತೇನೆಂದನಂತೆ'' ಅಂದ.

ಆ ಹೊಸ ಹೆಸರು ಕೇಳಿ ಮೂವರೂ ಬೆಚ್ಚಿದರು.

ಯಾರೀ ವಾಂಗ್ ಛೂ? ರಂಗೂನ್‌ನಿಂದ ಬಂದು ತನ್ನನ್ನು ಹದಿನೈದು ದಿನ ಬಂಧಿಸಿಡಲು ಲೋಕಲ್ ಸ್ಮಗ್ಲರ್ ಅನ್ಸಾರಿಯ ಬಳಿ ಎರಡು ಕೋಟಿ ವ್ಯವಹಾರ ಕುದುರಿಸಿದ್ದಾನೆ. ಅದಕ್ಕೇ ಅಂಡರ್

ಹಿಲ್ಸ್ ಬಳಿ ತನಗಾಗಿ ವೈಟ್ ಮಾಡಬೇಕೆಂದೂ ಆ ಸಂದೇಶದಲ್ಲಿ ತಿಳಿಸಿದ್ದ ಷಿಮೋಗಾ.

ಬರ್ಮಾ ಸೀಕ್ರೆಟ್ ಏಜೆಂಟರ ಲಿಸ್ಟ್ ಶತ್ರುಗಳ ಬಳಿ ಇದೆಯೆಂದು, ಅವರ ಮೂವ್‌ಮೆಂಟ್ಸ್ ಮಾನಿಟರ್ ಮಾಡುತ್ತಿರುವ ಕಾರಣ ಅವರನ್ನು ಕಳಿಸಿದರೆ ತನಗೆ ಡೇಂಜರ್ ಎಂದು ತಿಳಿಸಿ, ಇಂಡಿಯನ್ ಇಂಟೆಲಿಜೆನ್ಸ್ ಏಜೆಂಟ್ ಕಿಲ್‌ಮಾಸ್ಟರ್ ಕೆ-7 ಆಲಿಯಾಸ್ 'ಜಿಂಕೆ' ಯೊಬ್ಬನಿಂದ ಮಾತ್ರ ತಮ್ಮ ಸಮಸ್ಯೆ ಪರಿಹರಿಸಬಲ್ಲ ಛಾತಿಯಿದೆಯೆಂದು, ಸೆಲ್ ಅನ್ನು ರಿಕ್ವೆಸ್ಟ್ ಮಾಡಿಕೊಳ್ಳಿ ಎಂದು ತನ್ನವರಿಗೆ ಸೂಚಿಸಿದ್ದ ಷಿಮೋಗ.

ಆ ಮೇಲಿನ ವಿಷಯಗಳು ತನ್ನ ತಾನೇ ಅರ್ಥವಾಗಿ ಫೈಲ್ ಮುಚ್ಚಿದ ಮಹೇಶ.

''ಸನ್. ನಿನ್ನನ್ನು ತಕ್ಷಣ ಕಳಿಸುವಂತೆ ಪ್ರಧಾನಿಯವರೇ ಖುದ್ದಾಗಿ ಫೋನ್ ಮಾಡಿ ಹೇಳಿದರು. ವಾಂಗ್ ಛೂ ಫೋನ್ ಮಾಡಿದ್ದಾನೆ. ಬರ್ಮಾ ಸರ್ಕಾರ ನಮ್ಮ ಸಹಾಯ ಕೇಳುತ್ತದೆಂದು ಲೆಕ್ಕ ಹಾಕಿ ಅವರಿಗಿಂತಾ ಮೊದಲೇ ಭಾರತಕ್ಕೆ ಬಂದ. ಅನ್ಸಾರಿಯ ಹೆಲ್ಪ್‌ನಿಂದ ನಿನ್ನನ್ನು ಬಂಧಿಸಲು ವ್ಯೂಹ ರಚನೆ ಮಾಡಿದ. ನಿನ್ನನ್ನು ಹದಿನೈದು ದಿನ ಬಂಧನದಲ್ಲಿರಿಸಲೂ ಸರಿಯಾದ ಕಾರಣವೇ ಇದೆ.

''ಕೋಡ್‌ನಲ್ಲಿರುವ ಮೈಕ್ರೋಫಿಲಂ ಡೀಕೋಡ್ ಮಾಡಲು ಎಂಟರಿಂದ ಹತ್ತು ದಿನ ಹಿಡಿಯುತ್ತದೆ. ಮಿಕ್ಕ ಐದು ದಿನ ಅದನ್ನು ಮಾರುಕಟ್ಟೆಯಲ್ಲಿಟ್ಟು ಹರಾಜು ಹಾಕಲು. ಹೈಯೆಸ್ಟ್ ಬಿಡ್ಡರ್‌ಗೆ ಮೈಕ್ರೋಫಿಲಂ ಒಡೆತನ.

''ಈ ಯೋಚನೆ ವಾಂಗ್ ಛೂ ಒಬ್ಬನದೇನಾ? ಅಥವಾ ಇನ್ಯಾರದಾದರೂ ಇನ್‌ವಾಲ್ವ್‌ಮೆಂಟ್ ಇದೆಯೇ? ಅವನ ಹಿಂದೆ ಬೇರ್‍ಯಾವುದಾದರು ಸಂಸ್ಥೆ ಇದೆಯೇ? ಇವೆಲ್ಲವನ್ನೂ ಹೇಳಬೇಕಾದವನು ಷಿಮೋಗಾ.

''ಆದರೆ ಒಂದು ಮಾತ್ರ ನಿಜ. ಸರ್ಕಾರದ ಕೆಲಸ ವ್ಯಕ್ತಿಗಳ ಸಹಾಯ ಹಸ್ತವಿದೆ ವಾಂಗ್ ಛೂಗೆ. ಆದ್ದರಿಂದಲೇ ಟೂ ಸ್ಟೆಪ್ಸ್ ಮುಂದಿದ್ದಾನವ.

ಮೊದಲಿಂದಲೂ, ನೀನು ತಕ್ಷಣ ರಂಗೂನ್‌ಗೆ ಹೊರಡು. ನಿಗದಿತ ವೇಳೆಗೆ ಷಿಮೋಗಾನ ಭೇಟಿಯಾಗು. ಅಷ್ಟರಲ್ಲಿ ಏನಾದರೂ ಮುಖ್ಯ ಮಾಹಿತಿ ಬಂದರೆ ನಿನಗೆಲ್ಲಾ ತಿಳಿಸಲಾಗುತ್ತದೆ'' ಎಂದು ತಮ್ಮ ಬ್ರೀಫಿಂಗ್ ಮುಗಿಸಿದರು ಕರ್ನಲ್.

''ಅನ್ನಾರಿಯನ್ನು ಹಿಡಿದರೆ ಒಂದಷ್ಟು ವಿವರಗಳು ಸಿಗುವುದೇನೋ?'' ಅಂದ ಮಹೇಶ.

''ಡೋಂಟ್ ವರಿ ಸನ್. ಇಷ್ಟೆಲ್ಲಾ ಆದ ಮೇಲೆ ವಾಂಗ್ ಫೂ ಇಲ್ಲೇ ಇದ್ದಾನೆಯೇ? ಅನ್ನಾರಿಯ ವಿಷಯವನ್ನು ನಮ್ಮವರು ಗಮನಿಸುತ್ತಾರೆ. ಮೈಕ್ರೋಫಿಲಂ ಶತ್ರುದೇಶಗಳ ಕೈಸೇರುವ ಮೊದಲೇ ವಶಪಡಿಸಿಕೊಳ್ಳಬೇಕು. ಅದೇನಿದ್ದರೂ ಷಿಮೋಗಾ ಮತ್ತು ನಿನ್ನ ಭೇಟಿಯ ನಂತರ ನಿರ್ಧರಿಸಿಕೊಳ್ಳಿ'' ಎಂದು ಇನ್ನಷ್ಟು ವಿವರಗಳನ್ನ ನೀಡಿದರು ಕರ್ನಲ್.

ಅಂದು ಸಂಜೆಯ ರಂಗೂನ್ ಫ್ಲೈಟ್ ಹತ್ತಿದ ಮಹೇಶ.

★

ರಂಗೂನ್ ಏರ್‌ಪೋರ್ಟ್‌ನಲ್ಲಿ ಲ್ಯಾಂಡ್ ಆಗಿತ್ತು. ಫ್ಲೈಟ್ ಯಾವುದೇ ಅಡೆತಡೆಗಳಿಲ್ಲದೇನೇ. ಎಲ್ಲರಿಗಿಂತಾ ಕೊನೆಯಲ್ಲಿ ಫ್ಲೈಟ್ ಇಳಿಯಲು ರೆಡಿಯಾದ ಮಹೇಶ.

ಅಷ್ಟೊತ್ತಿಗಾಗಲೇ ಒಬ್ಬೊಬ್ಬರೇ ಇಳಿಯುತ್ತಿದ್ದರು ಪ್ರಯಾಣಿಕರು. ಕೊನೆಯವನಾಗಿ ಹೊರ ಬಂದ ಮಹೇಶ. ಕಸ್ಟಂಸ್ ತಪಾಸಣೆ ಮುಗಿಸಿಕೊಂಡು ಹೊರ ನಡೆಯುತ್ತಿದ್ದರು ಪ್ರಯಾಣಿಕರು.

ಲ್ಯಾಡರ್ ಮೇಲೆ ನಿಂತು ಸುತ್ತಲೂ ನೋಡಿದ ಮಹೇಶ. ಆಲ್ ಮೋಸ್ಟ್ ಬಹಳಷ್ಟು ನಿರ್ಮಾನುಷ್ಯವಾಗಿತ್ತು ಏರ್‌ಪೋರ್ಟ್. ಕಸ್ಟಂಸ್ ಕೌಂಟರ್ ಬಳಿ ಇರುವವರ ವಿನಹ ಎಲ್ಲರೂ ಆಗ ಖಾಲಿ ಮಾಡಿದ್ದರಾಗಲೇ.

ನಿಧಾನವಾಗಿ ನಡೆಯುತ್ತಾ ಬಂದು ಕ್ಯೂ ಸೇರಿಕೊಂಡ. ಕೌಂಟರ್ ಸಮೀಪಿಸುತ್ತಿದ್ದಂತೆ ಅದೇಕೋ ತಳಮಳ ಶುರುವಾಗಿತ್ತು. ಅದೇಕೆ ಎಂದು ಕ್ಯಾಚ್ ಮಾಡಲಾಗುತ್ತಿಲ್ಲ. ಪ್ಲೆಜೆಂಟ್ ಆಗಿತ್ತು ವಾತಾವರಣ. ತನ್ನನ್ಯಾರಾದರೂ ವಾಚ್ ಮಾಡುತ್ತಿರುವ, ಫಾಲೋ ಮಾಡುತ್ತಿರುವ ಅನುಮಾನವೇನಿಲ್ಲ. ಹಾಗಿದ್ದೂ ಈ ಅನೀಸಿನೆಸ್‌ಗೇನರ್ಥ? ತನ್ನನ್ನು ತಾನೇ ಕೇಳಿಕೊಂಡ.

ಅವನಿಗೊಂದು ಉತ್ತರ ಹೊಳೆಯುವ ಮೊದಲೇ ಕಸ್ಟಂಸ್ ಅಧಿಕಾರಿಗಳನ್ನು ಸಮೀಪಿಸಿದ್ದ.

''ವೆಲ್‌ಕಂ ಸರ್... ವೆಲ್ ಕಂ ಟು ಅವರ್ ಬ್ಯೂಟಿಫುಲ್ ಸಿಟಿ. ನಿಮಗ್ಹಿಡಿಸುವ, ನೀವು ಮೆಚ್ಚುವ ರಮಣೀಯ ಪ್ರದೇಶಗಳಿವೆ ನಮ್ಮ ದೇಶದಲ್ಲಿ...'' ಅನ್ನುತ್ತಾ ಎರಡು ನಿಮಿಷ ಸಿಟಿಯ ಅಂದ ಚೆಂದಗಳ ಬಗ್ಗೆ ವರ್ಣಿಸಿ, ''ಪಾಸ್ ಪೋರ್ಟ್ ಪ್ಲೀಸ್'' ಅಂದ ಒಬ್ಬ ಅಧಿಕಾರಿ.

ಪಾಸ್‌ಪೋರ್ಟ್, ವೀಸಾ ತೆಗೆದು ಅವನ ಕೈನಲ್ಲಿಟ್ಟ ಮಹೇಶ.

ಪಾಸ್‌ಪೋರ್ಟ್ ಚೆಕ್ ಮಾಡುವುದರಲ್ಲೇ ಬಿಜಿಯಾದ ಅಧಿಕಾರಿ. ಅವನನ್ನೇ ನೋಡುತ್ತಿದ್ದ ಮಹೇಶ. ಇದ್ದಕ್ಕಿದ್ದಂತೆ ಅವನ ಬದಲಾದ ಮುಖಭಾವ ಗಮನಿಸಿ ಬೆಚ್ಚಿಬಿದ್ದ.

''ಸಾರಿ ಮಿಸ್ಟರ್... ಇದು ನಕಲಿ ಪಾಸ್‌ಪೋರ್ಟ್‌ನಂತಿದೆ'' ಅಂದ ಆ ಅಧಿಕಾರಿ ನಿಧಾನವಾಗಿ.

''ವಾಟ್!?'' ಸ್ಟನ್ನಾಗಿ ಉದ್ಗರಿಸಿದ ಮಹೇಶ.

''ಎಸ್ ಮಿಸ್ಟರ್. ಇದು ಮುಲಾಜಿಲ್ಲದೆ ಫೋರ್ಜರಿ ಪಾಸ್‌ಪೋರ್ಟ್!'' ಅನ್ನುತ್ತಾ ಮಿಕ್ಕ ಅಧಿಕಾರಿಗಳ ಕೈಗೆ ಕೊಟ್ಟ. ಅವರೂ ಸಹ ಆ ಅಧಿಕಾರಿಯ ಮಾತನ್ನೇ ಪುಷ್ಟೀಕರಿಸಿದರು.

ಆಗ ತನ್ನ ಅನೀಸಿನೆಸ್‌ಗೇನು ಕಾರಣವೆಂದು ಅರಿವಾಗತೊಡಗಿತು ಅವನಿಗೆ. ''ಸಾರಿ ಸರ್! ಯು ಆರ್ ಮಿಸ್ಟೇಕನ್. ಇದು ಫೋರ್ಜರಿ ಅಲ್ಲ. ಸರಿಯಾಗಿ ನೋಡಿ'' ಅಂದ.

''ವಾಟ್ ಡು ಮೀನ್? ಇಷ್ಟು ಜನ ಅಲ್ಲವೆಂದು ಹೇಳುತ್ತಿದ್ದರೆ

ನೀನೊಬ್ಬ ಅಸಲಿ ಅನ್ನುವೆಯಾ? ಈ ವಿಷಯ ತೀರ್ಮಾನವಾಗುವವರೆಗೆ ನೀನಿಲ್ಲಿಂದ ಹೋಗುವಂತಿಲ್ಲ'' ಅಂದ ಒಬ್ಬ ಅಧಿಕಾರಿ.

ಅವರ ಕಡೆ ವಿಚಿತ್ರವಾಗಿ ನೋಡಿದ ಮಹೇಶ. ಅದು ಖಂಡಿತಾ ಫೋರ್ಜರಿ ಪಾಸ್‌ಪೋರ್ಟ್ ಅಲ್ಲವೇ ಅಲ್ಲ. ಆದರಿವರು ಫೋರ್ಜರಿಯೇ ಅನ್ನುತ್ತಿದ್ದಾರೆಂದರೆ... ನೋ ಡೌಟ್... ಶತ್ರುಗಳ ಕೈವಾಡ ಸ್ಪಷ್ಟ. ದಟ್ ಮೀನ್ಸ್... ಇವರು ಬೇಕೆಂದೇ ಸುಳ್ಳು ಹೇಳುತ್ತಿದ್ದಾರೆಂದಾಯಿತು. ತನ್ನ ಆಗಮನ ಶತ್ರುಗಳಿಗೆ ತಿಳಿದುಹೋಗಿದೆ. ಕರ್ನಲ್ ಹೇಳಿದಂತೆ ಸರ್ಕಾರದವರ್‍ಯಾರೋ ಶತ್ರುಗಳೊಡನೆ ಸಹಕರಿಸುತ್ತಿದ್ದಾರೆ. ಏರ್‌ಪೋರ್ಟ್‌ನಲ್ಲೇ ತನ್ನನ್ನು ಬಂಧಿಸುವ ಪ್ಲಾನ್ ಅವರದು. ಇಲ್ಲಿನ ಅಧಿಕಾರಿಗಳ ಮಾತಿನಂತೆ ನಡೆದರೆ ಪ್ರಾಣಕ್ಕೇ ಗಂಡಾಂತರ. ಇನ್ನೊಂದು ಕ್ಷಣ ಇಲ್ಲಿರಬಾರದು. ಸೆಕ್ಯೂರಿಟಿ ಬಂದರೆ ಪಾರಾಗುವುದು ಕಷ್ಟ.

ಅವನ ಆಲೋಚನೆಯನ್ನು ಬೇರೊಂದು ರೀತಿಯಲ್ಲಿ ಮಾಡಿಕೊಂಡು, ಹಲ್ಲು ಕಿಸಿಯುತ್ತಿದ್ದರು ಆಫೀಸರ್ಸ್.

''ಕಮಾನ್ ಮ್ಯಾನ್... ಫಾಲೋ ಮಿ.'' ಅಂದ ಒಬ್ಬ ಅಧಿಕಾರಿ.

ಅಷ್ಟೊತ್ತಿಗೊಂದು ನಿರ್ಣಯಕ್ಕೆ ಬಂದು ಬಿಟ್ಟಿದ ಮಹೇಶ.

''ಆಲ್‌ರೈಟ್ ಸರ್... ನನ್ನ ಪ್ರಾಮಾಣಿಕತೆ ನಿರೂಪಿಸಿಯೇ ಇಲ್ಲಿಂದ ಹೋಗುತ್ತೇನೆ'' ಅನ್ನುತ್ತಾ ಭುಜದಲ್ಲಿದ್ದ ಏರ್‌ಬ್ಯಾಗ್ ಕೈಗೆತ್ತಿಕೊಂಡ.

''ವೆರಿಗುಡ್... ಕಮಾನ್ ದೆನ್'' ಅನ್ನುತ್ತಿದ್ದ ಅಧಿಕಾರಿಯ ಮಾತುಗಳು ಪೂರ್ತಿಯಾಗುವ ಮೊದಲೇ ಪ್ರಚಂಡ ವೇಗದಲ್ಲಿ ಮೂವ್ ಆದ ಮಹೇಶ.

''ಏಯ್... ಏನಿದು! ಏನು ಮಾಡಲಿರುವೆ?'' ಅದುರಿ ಬಿದ್ದು ಎರಡೆಜ್ಜೆ ಹಿಂದಿಟ್ಟು ಹೇಳಿದ ಒಬ್ಬ ಅಧಿಕಾರಿ.

''ಬ್ಲೆಂಡೆಡ್ ಬಾಸ್ಟರ್ಡ್. ನನ್ನದು ಫೋರ್ಜರಿ ಪಾಸ್‌ಪೋರ್ಟಾ? ನಿಮಗ್ಯಾರೀ ಕೆಲಸ ಕೊಟ್ಟವರು?'' ಅನ್ನುತ್ತಿದ್ದಂತೆ ಏರ್‌ಬ್ಯಾಗ್ ಗಿರಗಿರ ತಿರುಗಿಸಿ ಅವರ ಮುಖಗಳು ಅಲ್ಲಾಡಿ ಹೋಗುವಂತೆ ಗಟ್ಟಿಸಿದ.

ಇಬ್ಬರು ಅಧಿಕಾರಿಗಳು ಕಿಟಾರನೆ, ಹಿಂದಕ್ಕೆ ಬಿದ್ದು ಬಿಟ್ಟರು. ಅದೇ ವೇಗದಲ್ಲೇ ಇನ್ನಿಬ್ಬರ ಎದೆಗಳಿಗೆ ಪಂಚ್ ಮಾಡಿ, ಕವಣೆಯಿಂದ ಬಿಟ್ಟ ಕಲ್ಲಿನಷ್ಟೇ ಫಾಸ್ಟಾಗಿ ಮುಂದುಕ್ಕೋಟ ಕಿತ್ತ.

''ಮೈ ಗಾಡ್... ಪರಾರಿಯಾಗುತ್ತಿದ್ದಾನೆ. ಹಿಡಿಯಿರಿ... ಕ್ಯಾಚ್ ಹಿಮ್'' ಮೊದಲು ಮೇಲೆದ್ದ ಅಧಿಕಾರಿ ಜೋರಾಗಿ ಕಿರುಚಿಕೊಂಡ. ಮಿಕ್ಕವರು ಅವನಿಗೆ ಶೃತಿ ಕೊಟ್ಟರು. ಅವರ ಕೂಗು ಕೊನೆಗೊಳ್ಳುವ ಮೊದಲೇ ಮಿಂಚಿನಂತೆ ಮೂವ್ ಆದರು ಸೆಕ್ಯೂರಿಟಿ ಗಾರ್ಡ್ಸ್. ಸೂಪರ್ ಫಾಸ್ಟಾಗಿ ಓಡುತ್ತಿದ್ದ ಮಹೇಶನ ಸುಳಿವಿಡಿದು ಅತ್ತ ಕಡೆಗೆ ಓಡಿದರು. ಕೂಗು, ಕೇಕೆಗಳು ಎಕೋ ಆಯಿತು ಏರ್‌ಪೋರ್ಟ್‌ನಲ್ಲಿ.

ಓಡುತ್ತಿರುವಂತೆಯೇ ತಲೆ ತಿರುಗಿಸಿ ನೋಡಿದ ಮಹೇಶ. ಅವರ ಕೈಗೆ ಸಿಗುವಾಸೆ ಎಳ್ಳಷ್ಟೂ ಇರಲಿಲ್ಲ ಅವನಿಗೆ. ಇನ್ನಷ್ಟು ವೇಗವಾಗಿ ಓಡಿ ಏರ್‌ಪೋರ್ಟ್ ಫೆನ್ಸಿಂಗ್ ಕ್ರಾಸ್ ಮಾಡಿ ಪಕ್ಕದಲ್ಲೇ ಇದ್ದ ಪೊದೆಗಳೊಳಕ್ಕೆ ನುಗ್ಗಿಬಿಟ್ಟ.

ಅವನು ಎಂಟ್ರೆನ್ಸ್ ಕಡೆಗಲ್ಲದೆ ಇನ್ನೊಂದು ಕಡೆ ಓಡಿದಾಗಲೇ ಡೌಟ್ ಬಂದಿತ್ತು ಗಾರ್ಡ್‌ಗಳಿಗೆ. ಅತ್ತ ಬದಿಯ ಪ್ರದೇಶವೆಲ್ಲಾ ದಟ್ಟ ಪೊದೆಗಳಿಂದ ತುಂಬಿತ್ತು. ಅವುಗಳೊಳಗೆ ಪ್ರವೇಶಿಸಿದರೆ ಹಿಡಿಯುವುದು ಕಷ್ಟ. ಇನ್ನೇನೂ ಮಾಡುವಂತಿರಲಿಲ್ಲ ಅವರು. ಆದರೂ ಅಲ್ಲೆಲ್ಲಾ ಹುಡುಕಾಡಿದರು. ಏನೂ ಪ್ರಯೋಜನವಾಗಲಿಲ್ಲ.

ಅಷ್ಟೊತ್ತಿಗವನು ಏರ್‌ಪೋರ್ಟ್‌ನಿಂದ ಬಹಳ ದೂರದಲ್ಲಿದ್ದಾನೆಂದು ಅವರಿಗೆ ಹೇಗೆ ತಿಳಿಯಬೇಕು. ಅರ್ಧ ಗಂಟೆ ಹುಡುಕಾಡಿ ಕೈ ಚೆಲ್ಲಿದರವರು.

ಎಲ್ಲರಿಗಿಂತಾ ತುಸು ಚುರುಕಾಗಿದ್ದ ಒಬ್ಬ ಅಧಿಕಾರಿಮಾತ್ರ ''ತಕ್ಷಣ ಕಂಟ್ರೋಲ್‌ರೂಂಗೆ ಫೋನ್ ಮಾಡಿ, ಎಲ್ಲಾ ಪೊಲೀಸ್ ಸ್ಟೇಷನ್‌ಗಳಿಗೂ ಇನ್‌ಫಾರ್ಮ್ ಮಾಡಿ'' ಎಂದು ಆಜ್ಞಾಪಿಸಿದ್ದರು.

ತಕ್ಷಣ ಒಳಕ್ಕೋಡಿದ ಒಬ್ಬ ಸೆಕ್ಯೂರಿಟಿ ಗಾರ್ಡ್ ತಮ್ಮಿಂದ ನಿಭಾಯಿಸಲಾಗದಿದ್ದ ಹೊಣೆ ಪೊಲೀಸರ ಹೆಗಲಿಗೇರಿಸಲು.

## 8

ಜುಹಾರಿ ಸೆಂಟರ್‌ನ ಒಂದು ಬಾರ್ ಕಮ್ ರೆಸ್ಟೋರೆಂಟ್‌ನ ಒಂದೂ ಮೂಲೆಯ ಟೇಬಲ್ ಆಕ್ರಮಿಸಿಕೊಂಡು ವಿಸ್ಕಿ ಸಿಪ್ ಮಾಡುತ್ತಾ ತನ್ನ ಪೊಜಿಷನ್ ಅಸೆಸ್ ಮಾಡಿಕೊಂಡ ಮಹೇಶ.

ಏರ್‌ಪೋರ್ಟ್‌ನಲ್ಲಿ ಕಾಲಿಟ್ಟೊಡನೆ ಕ್ರಿಟಿಕಲ್ ಸ್ಟೇಜ್ ರೀಚಾಗಿಬಿಟ್ಟಿತು ತನ್ನ ಪರಿಸ್ಥಿತಿ. ತನಗಾಗಿ ರಂಗೂನ್ ಪೊಲೀಸರು ಕೇರ್‌ಫುಲ್ಲಾಗಿ ಹುಡುಕತೊಡಗಿದ್ದಾರೆ. ಏರ್‌ಪೋರ್ಟ್‌ನಿಂದ ತಪ್ಪಿಸಿಕೊಂಡೊಡನೆ ಯಾವುದೋ ಒಂದು ಮೂಲೆಯ ಹೋಟೆಲ್‌ನಲ್ಲಿ ರೂಂ ಪಡೆದು ಗಂಟೆಯ ಹಿಂದಷ್ಟೇ ಹೊರಗಡೆಗೆ ಬಂದಿದ್ದ.

ಒಂದು ವಾರ ವೈಟ್ ಮಾಡಬೇಕು ತಾನು. ರಂಗೂನ್ ಪೌರರಂತೆಯೇ ಆರಾಮಾಗಿ ಓಡಾಡಿಕೊಂಡಿರಬೇಕೆಂದುಕೊಂಡಿದ್ದ. ಅವನ ಯೋಚನೆ ಸ್ಟಾರ್ಟಿಂಗ್‌ನಲ್ಲೇ ತಿರುಗೇಟು ಹೊಡೆದಿತ್ತು. ಶತ್ರುಗಳು ಮೊದಲಲ್ಲೇ ಮಗ್ಗಲು ಬಡಿದಿದ್ದರು.

ಬ್ಲಡಿ ವಾಂಗ್ ಥೂ ಬ್ಲಡಿ ಅಸೈನ್‌ಮೆಂಟ್ ಅಂದುಕೊಂಡ ಮನದಲ್ಲೇ.

ಜೇಬಿನಿಂದ ಸಿಗರೇಟ್ ಪ್ಯಾಕ್ ತೆಗೆದು, ಸಿಗರೇಟೊಂದನ್ನು ಹಚ್ಚಿಕೊಂಡ. ಮತ್ತೆ ಆಲೋಚನೆಗಳು ಮಿದುಳನ್ನು ಕಾಡತೊಡಗಿದವು.

ವಾಂಗ್ ಥೂ ಯಾರೇ ಆಗಿರಲಿ... ಕಿಲಾಡಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಅವನ ಮುಂಜಾಗ್ರತೆಯನ್ನಂತೂ ಮೆಚ್ಚಬೇಕಾದ್ದೇ. ತನ್ನನ್ನು ಇಂಡಿಯಾದಲ್ಲೇ ಅಲ್ಲ... ರಂಗೂನ್‌ನಲ್ಲೂ ಏಳು ಕೆರೆ ನೀರು

ಕುಡಿಸುತ್ತಿದ್ದಾನೆ ಅಂದ್ರೇ ಸಾಮಾನ್ಯನಲ್ಲ.

ನಿಟ್ಟುಸಿರುಗರೆದು ಆಲೋಚನೆಗಳಿಗೆ ಫುಲ್‌ಸ್ಟಾಪಿಟ್ಟು ಗ್ಲಾಸ್‌ನಲ್ಲಿದ್ದ ವಿಸ್ಕಿ ಒಂದೇ ಗುಟುಕಿನಲ್ಲಿ ಮುಗಿಸಿ ಎರಡು ದಂ ಸಿಗರೇಟು ಎಳೆದ ಮಹೇಶ.

ಷಿಮೋಗಾನನ್ನು ಭೇಟಿಯಾಗುವವರೆಗೆ ತಾನು ಮಾಡುವುದೇನೂ ಇಲ್ಲ. ಏನಾದರೂ ಸ್ಪೆಷಲ್ ನ್ಯೂಸಿದ್ದರೆ ತನಗೆ ತಿಳಿಸಲಾಗುತ್ತದೆ. ಹೊರಗೆ ತಲೆಯಿಡುವುದಂತೂ ಆರೋಗ್ಯಕ್ಕೆ ಎಳ್ಳಷ್ಟೂ ಒಳ್ಳೆಯದಲ್ಲ. ರೂಂಗೆ ಹೋಗಿ ಒಂದಷ್ಟು ನಿದ್ರೆ ಮಾಡಿ, ಆಮೇಲೆ ನಿಧಾನವಾಗಿ ಯೋಚಿಸಿದರಾಯಿತು ಅಂದುಕೊಂಡು ಬಿಲ್ ಸಲ್ಲಿಸಿ ರೆಸ್ಟೋರೆಂಟ್‌ನಿಂದ ಹೊರ ಬಂದ.

ಹೊಸದೊಂದು ಸಿಗರೇಟ್ ಹಚ್ಚಿ, ಹೋಟೆಲ್ ಕಡೆಗೆ ಹೆಜ್ಜೆ ಹಾಕತೊಡಗಿದ. ಹತ್ತೆಜ್ಜೆ ಇಡುವಷ್ಟರಲ್ಲೇ ಶುರುವಾಯಿತು ಆರನೇ ಇಂದ್ರಿಯದ ಗೋಳು. 'ಅಪಾ... ಅಪಾಯ' ಎಂದು ಒಂದೇ ಸಮ ಟಾಪ್ ಪಿಚ್‌ನಲ್ಲಿ ಚೀತ್ಕರಿಸತೊಡಗಿತು.

ಬೆಚ್ಚಿಬಿದ್ದು ಸುತ್ತಲೂ ನೋಡಿದ ಮಹೇಶ. ಯಾರೂ ಕಾಣಿಸಲಿಲ್ಲ. ಹಾಗಿದ್ದಲ್ಲಿ ಅಪಾಯ ಯಾವ ರೂಪದಲ್ಲಿ ಬಂದೆರಗೀತು? ಯಾವ ಕಡೆಯಿಂದ ಬಂದೀತು?

ಆ ಪ್ರಶ್ನೆಗಳಿಗೆ ಉತ್ತರ ಸಿಗುವ ಮೊದಲೇ ಒಂದು ಮೋಟು ಗೋಡೆಯ ಹಿಂದಿನಿಂದ ಸರಸರನೆ ಬಂದು, ಅವನನ್ನು ಸುತ್ತುವರೆದರು ರಂಗೂನ್ ಪೊಲೀಸರು.

ಮಿಂಚಿನ ನಡೆ ತೋರಿ ಹೋದ ಮಹೇಶ.

''ಡೋಂಟ್ ಮೂವ್ ಮಿಸ್ಟರ್. ಹೆಜ್ಜೆ ಮುಂದಿಡಲು ಪ್ರಯತ್ನಿಸಿದರೆ ಹೆಣವಾಗುವೆ!'' ಕಟು ಧ್ವನಿಯಲ್ಲಿ ಎಚ್ಚರಿಸಿದ ಎದುರಿಗೆ ಪಿಸ್ತೂಲಿಡಿದು ನಿಂತಿದ್ದ ಒಬ್ಬ ಪೊಲೀಸಾಫೀಸರ್.

ತಣ್ಣಗಾದವು ಮಹೇಶನ ಕೈ ಕಾಲುಗಳು. ಓಡಿ ಹೋಗುವ ಆಲೋಚನೆ ಮನಸಿಂದ ಬಹು ಬೇಗ ದೂರಾಯಿತು.

''ಏಕೆ... ನನ್ನನ್ನೇಕೆ ಅರೆಸ್ಟ್ ಮಾಡುತ್ತಿರುವಿರಿ?'' ಬಹಳ ಕಷ್ಟಪಟ್ಟು ಉಗುಳು ನುಂಗುತ್ತಾ ಕೇಳಿದ.

''ಷಟಪ್! ಏರ್‌ಪೋರ್ಟ್‌ನಿಂದ ಪರಾರಿಯಾದದ್ದೇ ಅಲ್ಲದೆ, ಹೋಂ ಮಿನಿಸ್ಟರ್ ಕ್ಲೋಸ್ ರಿಲೇಟಿವ್ ಪ್ರಮುಖ ರಾಜಕೀಯ ನಾಯಕ ವಾಂಗ್ ಛೂನನ್ನು ಕೊಲೆ ಮಾಡಿದ್ದಕ್ಕಾಗಿ ನಿನ್ನನ್ನು ಅರೆಸ್ಟ್ ಮಾಡುತ್ತಿದ್ದೇನೆ.'' ಗಂಭೀರವಾಗಂದ ಆಫೀಸರ್.

ಆ ಡೈಲಾಗ್ ಕೇಳಿ ಮೈ ಮೇಲೆ ಐಸ್ ನೀರು ಚೆಲ್ಲಿದಂತಾಯಿತು ಮಹೇಶನಿಗೆ.

'ಹೋಂ ಮಿನಿಸ್ಟರ್ ಕ್ಲೋಸ್ ರಿಲೇಟಿವ್ ಅನ್ನು ಕೊಲ್ಲಲಿ? ಆ ಕೊಲೆಗೂ ನನಗೂ ಏನು ಸಂಬಂಧ?'

ಅವನ ಆಲೋಚನೆಗಳೊಂದು ಹಂತ ತಲುಪುವ ಮೊದಲೇ ಕೈಗಳನ್ನು ಹ್ಯಾಂಡ್‌ಕಫ್ಸ್ ಅಲಂಕರಿಸಿದ್ದವು.

ದೂರದಲ್ಲಿ ಜೈಲ್ ಆವರಣದಲ್ಲಿನ ಗಂಟೆ ಠಂಣ್ ಎಂದು ಕೇಳಿ ಬಂದಾಗ ತನ್ನ ಆಲೋಚನಾ ಲಹರಿಯಿಂದ ಹೊರ ಬಂದ ಮಹೇಶ.

ಆಮೇಲೆ ಅವನನ್ನು ಸ್ಟೇಷನ್‌ಗೆ ಕರೆದೊಯ್ದು ಬೇಡಿ ತೆಗೆದರು. ಮೂರ್ಛೆ ಹೋದ ಅವನು ಕಣ್ಣು ತೆರೆದಿದ್ದು ಸಿಟಿ ಜೈಲಿನಲ್ಲಿಯೇ. ಇಲ್ಲಿಂದ ಮಾಂಡಲೇ ಜೈಲಿಗೆ ಟ್ರಾನ್ಸ್‌ಫರ್ ಆದರೆ ಗತಿಯೇನು ಎಂಬ ಯೋಚನೆ ಕಂಗೆಡಿಸತೊಡಗಿದರೂ ಹತ್ತೇ ಕ್ಷಣವಷ್ಟೇ ಅದು.

ಹತ್ತು ಕ್ಷಣಗಳ ನಂತರ ಗಾಢ ನಿದ್ರೆ ಅವನನ್ನಾವರಿಸಿತ್ತು.

★

''ವಾಟ್ ಡು ಯು ಮೀನ್?'' ಕಂಚಿನಂತಹ ಧ್ವನಿಯಲ್ಲಿ ಪ್ರಶ್ನಿಸಿದ ಛೂ.

''ಎಸ್ ಬಾಸ್... 'ಜಿಂಕೆ'ಯನ್ನು ಹುಡುಕಿಕೊಂಡು ಅವನ ಅಸಿಸ್ಟೆಂಟ್ ಚಂದನ್ ಮತ್ತು ಸೆಲ್‌ನ ಛೀಫ್ ಆಫ್ ಸೆಕ್ಯೂರಿಟಿ ವಿಜಯ್

ರಂಗೂನ್‌ಗೆ ಬರುತ್ತಿದ್ದಾರೆಂದು ನಮಗೆ ಮೆಸ್ಸೇಜ್ ಬಂದಿದೆ.'' ಮತ್ತೊಮ್ಮೆ ವಿವರಿಸಿದ ಆ ವ್ಯಕ್ತಿ.

ವಿಶಾಲವಾದ ಆ ಹಾಲ್‌ನಲ್ಲಿ ಸಾಲಾಗಿ ನಿಂತಿದ್ದರು ಇಪ್ಪತ್ತೈದು ಜನ ಅನುಚರರು. ಎಲ್ಲರ ಕೈಗಳಲ್ಲೂ ಮೆಷಿನ್‌ಗನ್ಸ್.

ಅವರೆಲ್ಲರಿಗಿಂತ ಮುಂದಿದ್ದ ವಾಂಗ್ ಥೂ ರೈಟ್ ಹ್ಯಾಂಡ್ ಚೆಂಗ್‌ಲೀ.

ಬರ್ಮಾ ಭೂಗತ ವ್ಯವಹಾರಗಳ ಅನಭಿಷಿಕ್ತ ದೊರೆ ಮಿಸ್ಟರ್ ವಾಂಗ್ ಥೂ. ಇನ್ನೊಬ್ಬರಿಗೆ ತಿಳಿಯದಂತೆ ಸ್ಮಗ್ಲಿಂಗ್ ಮಾಡುವುದರಲ್ಲಿ ಅವನು ಎತ್ತಿದ ಕೈ. ಆದ್ದರಿಂದಲೇ ಅವನ ಯೋಚನೆಗಳಿಗೆ ಇದುವರೆಗೆ ಯಾವುದೇ ತೊಂದರೆಯುಂಟಾಗಿರಲಿಲ್ಲ.

ಸರ್ಕಾರದ ಪ್ರಮುಖ ಅಧಿಕಾರಗಳೆಲ್ಲ ಅವನ ಜೀತದಾಳುಗಳೇ. ರಾಜಕೀಯ ನಾಯಕರೂ ಸಹ ಅವನ ಸಪೋರ್ಟ್ ಇಲ್ಲದೆ ಬದುಕಲಾಗದು.

ಬರ್ಮಾದಲ್ಲಿ ಯಾವುದೇ ಚಳುವಳಿಯಾಗಲಿ, ಗಲಾಟೆಯಾಗಲಿ, ಮರ್ಡರ್ ಆಗಲಿ, ದರೋಡೆಯಾಗಲಿ... ಅದರಲ್ಲಿ ವಾಂಗ್ ಥೂ ಟಚ್ ಇರಲೇಬೇಕು, ಇದ್ದೇ ಇರುತ್ತದೆ. ಆದರೂ ಅವನು ಮಾತ್ರ ಎಂದು ಬಯಲಿಗೆ ಬಂದವನಲ್ಲ.

ಇನ್‌ಫ್ಯಾಕ್ಟ್ ಅವನೊಂದು ಫೋಟೋ ಇದುವರೆಗೆ ಯಾವುದೇ ಪತ್ರಿಕೆಯಲ್ಲಿ ಬಂದಿಲ್ಲ.

ನಂಬಿಕಸ್ತ ಅಧಿಕಾರಿಗಳ ಮೂಲಕವೇ ಅವನಿಗೆ ಮೈಕ್ರೋಫಿಲಂ ಬಗ್ಗೆ ತಿಳಿದು ಬಂದಿತ್ತು. ಕಾದು ದಕ್ಕಿಸಿಕೊಂಡ. ಆಮೇಲೆ ಬರ್ಮಾ ಸೀಕ್ರೆಟ್ ಬ್ರಾಂಚ್‌ನವರಿಗೆ ಅದರ ಯಾವುದೇ ಸುಳಿವೂ ಸಿಗದಂತೆ ಮುಂಜಾಗ್ರತೆ ವಹಿಸಿದ.

ಬರ್ಮಾ ಸರ್ಕಾರ 'ಜಿಂಕೆ'ಯ ಸಹಾಯ ಯಾಚಿಸಲಿದೆಯೆಂದು ತಿಳಿದು ಮೊದಲೇ ಕಿಲ್ ಮಾಸ್ಟರ್‌ನನ್ನು ಕಟ್ಟಿ ಹಾಕಲು ಪ್ರಯತ್ನಿಸಿದ.

ಸಾಧ್ಯವಾಗಲಿಲ್ಲ.

ಎರಡನೇ ಪ್ರಯತ್ನವಾಗಿ ರಂಗೂನ್‌ನಲ್ಲಿ ಕಾಲಿಟ್ಟೊಡನೆ ಬಲೆ ಹರಡಿದ. ಸಿಕ್ಕಿಕೊಂಡ ಮಹೇಶ ಹಾಯಾಗಿದ್ದಾನೀಗ ಜೈಲಿನಲ್ಲಿ.

ಇದುವರೆಗೆ ಮಾಡಿರುವ ಕೆಲಸಗಳ್ಯಾವುವೂ ಇನ್ನೊಬ್ಬರ ಕಣ್ಣಿಗೆ ಬಿದ್ದಿಲ್ಲವೆನ್ನುವುದೇ ಅವನ ರಿಮಾರ್ಕಬಲ್ ಅಚೀವ್‌ಮೆಂಟ್.

''ಬಾಸ್!'' ಎಂಬ ಚಿಂಗ್‌ಲೀ ಕರೆಗೆ ತನ್ನ ಆಲೋಚನೆಗಳಿಂದ ಹೊರಬಂದ ವಾಂಗ್ ಛೂ.

''ಎಸ್ ಚಿಂಗ್‌ಲೀ.. ಟೆಲ್ ಮಿ'' ಅಂದ.

''ಈಗೇನು ಮಾಡಬೇಕೋ ಹೇಳಿ. ಅವರು ಯಾವುದೇ ಕ್ಷಣದಲ್ಲಾದರೂ ರಂಗೂನ್‌ಗೆ ಕಾಲಿಡಬಹುದು'' ಅಂದ ಚಿಂಗ್‌ಲೀ.

ಸಿಗಾರ್ ಬಾಕ್ಸ್‌ನಿಂದ ಹವಾನಾ ಸಿಗಾರ್ ತೆಗೆದು ಅದರ ಫ್ಲೇವರ್ ಮೂಸಿ ನೋಡಿ ಬಾಯಲ್ಲಿ ಇಟ್ಟುಕೊಂಡ ವಾಂಗ್ ಛೂ. ಲೈಟರ್ ಕ್ಲಿಕ್ ಮಾಡಿ ಹತ್ತಿಸಿದ ಚಿಂಗ್‌ಲೀ. ತೃಪ್ತಿಯಾಗಿ ಹೊಗೆ ಹೊರ ಚೆಲ್ಲಿದ ಮೇಲೆ ಹೇಳಿದ ವಾಂಗ್ ಛೂ. ''ಡೋಂಟ್ ವರಿ ಚಿಂಗ್‌ಲೀ... ಅವರಿಗಾಗಿ ನಾವು ಹೊರಬೀಳಬೇಕಾದ ಅವಶ್ಯಕತೆಯೇನಿಲ್ಲ. ಅವರು ನಮ್ಮನ್ನೇನೂ ಮಾಡಲಾರರು.''

''ಅಂದರೆ?'' ಅರ್ಥವಾಗಲಿಲ್ಲ ಚಿಂಗ್‌ಲೀಗೆ.

''ಅಂದರೆ ನಾವು ಭಯಪಡಬೇಕಾದ್ದು 'ಜಿಂಕೆ'ಯೊಬ್ಬನಿಗೆ ಮಾತ್ರ. ಸಧ್ಯಕ್ಕವನು ಜೈಲಿನಲ್ಲಿದ್ದಾನೆ. ಅವರಿಬ್ಬರೂ ರಂಗೂನ್‌ಗೆ ಬರುವುದರೊಳಗೆ 'ಜಿಂಕೆ' ಮಾಂಡಲೇ ಜೈಲಿಗೆ ಟ್ರಾನ್ಸ್‌ಫರ್ ಆಗಿರುತ್ತಾನೆ.'' ಮುಗುಳ್ನಗೆಯಾಡುತ್ತ ಹೇಳಿದ ವಾಂಗ್ ಛೂ.

''ಬಾಸ್!'' ಆಶ್ಚರ್ಯದಿಂದ ಉದ್ಗರಿಸಿದ ಚಿಂಗ್‌ಲೀ.

''ಎಸ್ ಚಿಂಗ್‌ಲೀ... ಅದಕ್ಕೆಲ್ಲ ಏರ್ಪಾಟುಗಳೂ ಆಗಲೇ ಆಗಿವೆ. ನಾಳೆ ಕಿಲ್‌ಮಾಸ್ಟರ್ ಅನ್ನು ಮಾಂಡಲೆ ಜೈಲಿಗೆ ಕಳಿಸುತ್ತಾರೆ. ಅಲ್ಲಿಂದವನು ಏನೇನೇ ಮಾಡಿದರೂ ಪಾರಾಗಲಾರ... ಏಕೆಂದರೆ ಅಲ್ಲಿಂದ ಪ್ರಾಣ ಸಮೇತ ಹೊರಬಂದವರು ಇದುವರೆಗೆ ಒಬ್ಬರೂ ಇಲ್ಲ. ಜೊತೆಗೆ ಅಲ್ಲಿನ ನಮ್ಮ ಮನುಷ್ಯರು ಪ್ರತಿದಿನ ಅವನ ಪ್ರಾಣ ತೆಗೆಯಲು

ಅಟೆಂಪ್ಟ್ ಮಾಡುತ್ತಲೇ ಇರುತ್ತಾರೆ.

''ಸೋ... ಅವನ ಅಸಿಸ್ಟೆಂಟ್ಸ್ ಬಂದರೂ ಮಹೇಶ ಎಲ್ಲೂ ಅವರಿಗೆ ಕಾಣಿಸದ ಕಾರಣ ಭಾರತಕ್ಕೆ ಹಿಂದಿರುತ್ತಾರೆ. ಈಗ ಅನಾವಶ್ಯಕವಾಗಿ ನಾವವರ ಮೇಲೆ ಬಿದ್ದರೆ ನಮಗೆ ನಾವೇ ಪಬ್ಲಿಸಿಟಿ ಕೊಟ್ಟುಕೊಂಡಂತಾಗುತ್ತದೆ. ದಟೀಸ್ ರಾಂಗ್! ನಮ್ಮವರ್‍ಯಾರೂ ಹೊರಗಡೆ ತಲೆಯಿಡಲೇ ಬಾರದು'' ಅಂದ ವಾಂಗ್ ಛೂ.

''ಓ.ಕೆ. ಬಾಸ್.''

''ಇನ್ನೊಂದು ವಿಷಯ... ಇಪ್ಪತ್ನಾಲ್ಕು ಗಂಟೆಗಳ ಕಾಲ ನಮ್ಮ ಸುಳಿವು ಇನ್ನೊಂದು ಕಣ್ಣಿಗೆ ತಿಳಿಯಬಾರದು. ನಮ್ಮ ಬಳಿಯಿರುವ ಮೈಕ್ರೋಫಿಲಂಗಾಗಿ ಕೆಲವು ಸ್ನೇಹಿತರು ಬರುವವರಿದ್ದಾರೆ. ಅವರೆಲ್ಲರೂ ಬಂದ ಮೇಲೆಯೇ ಶುರುವಾಗುತ್ತದೆ ಮೀಟಿಂಗ್. ಸರಿಯಾಗಿ ಇನ್ನು ಇಪ್ಪತ್ನಾಲ್ಕು ಗಂಟೆಗಳಲ್ಲಿ ಕೆಲವು ಬಿಲಿಯನ್ಸ್ ನಮ್ಮ ಸೇಫ್ ಸೇರುತ್ತದೆ. ಗೋಲ್ಡನ್‌ಗ್ಯಾಂಗ್‌ನ ಟಾಪ್ ಕಮಾಂಡರ್ಸ್ ಸಹ ಬಿಡ್ಡಿಂಗ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. ಇದು ನಮ್ಮ ಜೀವನದಲ್ಲೇ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ'' ಅಂದ ವಾಂಗ್ ಛೂ.

ಮಾತಡಲಿಲ್ಲ ಚೆಂಗ್‌ಲೀ. ಏನೆಂದು ಮಾತಾಡಿಯಾನು? ಬಾಳೆ ಹಣ್ಣು ಸುಲಿದು ಬಾಯಲ್ಲಿಟ್ಟಂತೆ ಸ್ಪಷ್ಟವಾಗಿ ವಿವರಿಸುತ್ತಿದ್ದರೆ ಏನು ತಾನೇ ಹೇಳಲು ಸಾಧ್ಯ?

ತನ್ನ ಬಾಸ್ ಬಗ್ಗೆ ತನಗೆ ಗೊತ್ತಿಲ್ಲದಿರುವ ವಿಷಯವೇ ಇಲ್ಲ. ಕಿಲ್‌ಮಾಸ್ಟರ್‌ಗೆ ದೆಹಲಿಯಲ್ಲೇ ಬ್ರೇಕ್ ಹಾಕಲು ನೋಡಿದ. ಅದು ವಿಫಲಗೊಂಡು ಅವನು ಬರುತ್ತಿದ್ದಾನೆಂದು ತಿಳಿದೊಡನೆ ಏರ್‌ಪೋರ್ಟ್‌ನಲ್ಲೇ ನೇಣುಕುಣಿಕೆ ಬಿಗಿದ.

ಅವನಲ್ಲಿಂದ ತಪ್ಪಿಸಿಕೊಂಡನೆಂದು ತಿಳಿದ ಕೂಡಲೇ ಮೂಂಗ್ ಛೂನನ್ನು ಕೊಂದು ಆ ಅಪರಾಧ 'ಜಿಂಕೆ'ಯ ತಲೆಗೆ ಕಟ್ಟಿದ. ಅರೆಸ್ಟ್ ಮಾಡಿಸಿ ಜೈಲಿಗೆ ಕಳಿಸಿದ. ಅಲ್ಲಿಂದ ಎಸ್ಕೇಪ್ ಆಗಲು ಪ್ರಯತ್ನಿಸಿದನೆಂದು ಅರಿತ ಕೂಡಲೇ ಮಾಂಡಲೇ ಜೈಲಿಗೆ ಕಳಿಸುವ

ಏರ್ಪಾಡೂ ಮಾಡಿಬಿಟ್ಟಿದ್ದಾನೆ. ರಂಗೂನ್‌ಗೆ ಬರಲಿರುವ ಚಂದನ್ ಮತ್ತು ವಿಜಯ್‌ರಿಗೆ ಯಾವುದೇ ಕ್ಲೂ ಸಿಗದಂತೆ ಪರ್ಫೆಕ್ಟಾಗಿ ಎಲ್ಲಾ ಕೆಲಸ ಮಾಡಿ ಮುಗಿಸಿದ್ದಾನೆ. ಇಂತಹವನನ್ನು ಸೋಲೆಂದಿಗೂ ಬಾಧಿಸ ಲಾರದು. ಯಾವುದೇ ಕೆಲಸಕ್ಕೆ ಕೈ ಹಾಕಿದರೂ ಜಯವೇ.

ಈಗಲೂ ಫೈನಲ್ ವಿಕ್ಟರಿ ತಮ್ಮದೇ.

''ಚಿಂಗ್‌ಲೀ!''

ವಾಂಗ್ ಭೂ ಕರೆಗೆ ತನ್ನ ಆಲೋಚನೆಗಳಿಂದ ಹೊರಬಂದ ಚಿಂಗ್‌ಲೀ.

''ಹೇಳಿ ಬಾಸ್'' ಅಂದ.

''ಇಲ್ಲಿಯವರೆಗೆ ಈ ವಾಂಗ್ ಭೂಗೆ ಎದುರೇ ಇಲ್ಲ. ಈ ಸಲವೂ ಜಯಮಾಲೆ ನಮ್ಮ ಕತ್ತಿಗೇ ಬೀಳಬೇಕು. ಮುಂದಿನ ಇಪ್ಪತ್ನಾಲ್ಕು ಗಂಟೆ ನಮ್ಮ ಸುಳಿವು ಹೊರ ಪ್ರಪಂಚಕ್ಕೆ ತಿಳಿಯಲೇಬಾರದು. ನಮ್ಮವರೆಲ್ಲರನ್ನೂ ಸ್ಥಾವರಕ್ಕೆ ಕಳಿಸಿಬಿಡು. ನೀನೊಬ್ಬ ಮಾತ್ರ ಇಲ್ಲೇ ಇದ್ದು, ಪ್ರತಿ ವಿಷಯವನ್ನೂ ಆಗಿಂದಾಗಲೇ ರಿಪೋರ್ಟ್ ಮಾಡುತ್ತಿರು. ಅಂಡರ್‌ಸ್ಟಾಂಡ್?!'' ಅಂದ ವಾಂಗ್ ಭೂ.

''ಓ.ಕೆ. ಬಾಸ್!''

ಅವನೇನು ಮಾಡಬೇಕಾಗಿದೆಯೆಂದು ವಿವರಿಸಲು ಶುರು ಮಾಡಿದ ವಾಂಗ್ ಭೂ.

ಅವನು ಮಾಡಿದ್ದು ಎರಡೇ ತಪ್ಪು.

ಒಂದು-ಅಷ್ಟೊತ್ತಿಗಾಗಲೇ ಚಂದನ್ ಮತ್ತು ವಿಜಯ್ ರಂಗೂನ್‌ನಲ್ಲಿದ್ದಾರೆಂದು ತಿಳಿಯದೇ ಹೋದದ್ದು.

ಎರಡು- ಅವರಿಬ್ಬರನ್ನು ಅಂಡರ್ ಎಸ್ಟಿಮೇಟ್ ಮಾಡಿದ್ದು.

★

# 9

"ನಾವಿಲ್ಲಿಗೆ ಬಂದದ್ದಾದರೂ ಏಕೆ? ಮಹೇಶನನ್ನು ಬಿಡಿಸಲೇ ಅಥವಾ ಜೈಲ್ ಕಟ್ಟಡದ ಕನ್‌ಸ್ಟ್ರಕ್ಷನ್ ನೋಡಿ ಸಂತೋಷಿಸಲೇ?" ಮನಸ್ಸಿಲ್ಲದ ಮನಸ್ಸಿನಿಂದ ಸಿಗರೇಟ್ ಸೇದುತ್ತಾ ಅದೂ ಸೇರಿ ಹತ್ತನೇ ಸಾರಿ ಅಂದ ವಿಜಯ್.

ಸಿಡುಕಿನಿಂದ ಮುಖ ತಿರುಗಿಸಿ ಅವನ ಕಡೆಗೆ ನೋಡಿದ ಚಂದನ್.

ಮತ್ತೊಮ್ಮೆ ಅದೇ ಪ್ರಶ್ನೆ ಮಾಡಿದ ವಿಜಯ್!

"ನಿನಗೇಕಾದರೂ ಬಂತು ಮಾರಾಯ ಆ ಅನುಮಾನ?" ಕೇಳಿದ ಚಂದನ್.

"ನಿನ್ನ ವರಸೆ ನೋಡುತ್ತಿದ್ದರೆ... ಬಂದಾಗಿಂದ ಕಣ್ಣು ಹಿಗ್ಗರಿಸಿ ನೋಡುತ್ತಿರುವೆಯೇ ಹೊರತು... ಏನು ಮಾಡುವುದೆಂದು ಹೇಳುತ್ತಲೇ ಇಲ್ಲವಲ್ಲ" ಅಂದ ಚಂದನ್.

"ವಿಜಯ್ ಭಾಯ್... ಇಷ್ಟೊಂದು ಮೈ ಬೆಳೆಸಿದೆ. ಅದರಲ್ಲಿ ಒಂದು ಪರ್ಸೆಂಟ್ ಮಿದುಳು ಬೆಳೆಸಿದ್ದರೆ... ಪ್ಚ್... ಹೋಗಲಿ ಬಿಡು. ಇದೇನು ನಮ್ಮ ಅತ್ತೆ ಮನೆ ಅಂದುಕೊಂಡೆಯಾ, ಇತ್ತ ಕಡೆಯಿಂದ ಹೋಗಿ ಅತ್ತ ಕಡೆಯಿಂದ ವಾಪಸ್ಸು ಬರಲು?" ಅಂದ.

"ಬಂದದ್ದು ಸುಮ್ಮನೆ ನೋಡುತ್ತಾ ಇರಲಂತೂ ಅಲ್ಲ. ಅಲ್ಲವೇ?"

"ಆತುರಗಾರನಿಗೆ ಬುದ್ಧಿ ಮಟ್ಟವಂತೆ ಭಾಯ್, ಮೊದಲು ಇಲ್ಲಿನ ಸೆಟಪ್ ಅರ್ಥ ಮಾಡಿಕೊಳ್ಳಬೇಕು. ಬಳಗವೆಷ್ಟಿದೆಯೋ ಅರಿಯಬೇಕು." ಎಕ್ಸ್‌ಪ್ಲೋಸ್ ಮಾಡಿದ ಚಂದನ್. ಆಮೇಲೆ ತಲೆಕೆಳಗಾಗಿ ತಪಸ್ಸು

ಮಾಡಿದರೂ ನಮ್ಮಿಂದೇನೂ ಮಾಡಲಾಗದು'' ಅಂದ ವಿಜಯ್ ಮುಖಕ್ಕೊಡೆದಂತೆ.

ಆಗ ವೇಳೆ ಹತ್ತೂವರೆ. ಆಕಾಶದಲ್ಲಿ ಚಂದ್ರ ಪ್ರಕಾಶಿಸುತ್ತಿದ್ದ ನದಿಯ ಮೇಲಿಂದ ತಣ್ಣನೆಯ ಗಾಳಿ ಸುಂಯ್... ಎಂದು ರಭಸವಾಗಿ ಬೀಸುತ್ತಿತ್ತು. ಸಬ್ ಜೈಲಿನಿಂದ ಮಾತುಗಳು ಗಾಳಿಯಲೆಗಳ ಮೂಲಕ ತೇಲಿ ಬರುತ್ತಿದ್ದವು. ಅದಕ್ಕೆ ಮೊದಲಷ್ಟೇ ಜೈಲ್ ಗಡಿಯಾರದ ಠಂಗ್ ಠಂಗ್ ಶಬ್ದ ಕೇಳಿಸಿತ್ತು.

''ಹಿಂದೆ ಮುಂದೆ ನೋಡಿ ಯೋಚಿಸಿ ಅರ್ಥ ಮಾಡಿಕೊಳ್ಳದಿದ್ದರೆ ನಮಗೂ ಗುರುವಿನ ಗತಿಯೇ ಬರುತ್ತದೆ ಭಾಯ್. ಜೈಲ್ ಸುಖ ಅನುಭವಿಸುವುದಕ್ಕೋ ನಾವಿಲ್ಲಿಗೆ ಬಂದದ್ದು? ಗುರುವನ್ನು ಒಳಗಿಂದ ಹೊರಕ್ಕೆ ಕರೆತರಲೇ ಹೊರತು ನಾವೂ ಒಳಹೋಗಿ ಅವನೊಡನೆ ಸಂಸಾರ ನಡೆಸಲಲ್ಲ'' ಅವನ ಮಾತನ್ನೇ ಅವನಿಗೆ ತಿರುಗಿಸುತ್ತಾ ಹೇಳಿದ ಚಂದನ್.

ಸುಮ್ಮನಾದ ವಿಜಯ್. ಇವನೊಡನೆ ವಾದಿಸಿಯೂ ಪ್ರಯೋಜನವಿಲ್ಲವೆಂಬ ಮನೋಭಾವದಲ್ಲಿ.

''ಇಟ್ಸಾಲ್ ರೈಟ್ ವಿಜಯ್... ನಾನು ಬರುವವರೆಗೆ ಇಲ್ಲಿರು. ಒಂದು ಸಲ ಪೊಜಿಷನ್ ನೋಡಿ ಬರುತ್ತೇನೆ'' ಅನ್ನುತ್ತಾ ಮುಂದಕ್ಕೆ ನಡೆದ ಚಂದನ್.

''ಕಮಾನ್ ಭಾಯ್... ಇನ್ನರ್ಧ ಗಂಟೆಯಲ್ಲಿ ಗುರುವನ್ನು ಬಿಡಿಸಲಿದ್ದೇವೆ'' ಅನ್ನುತ್ತ ಅವನನ್ನು ಕರೆದುಕೊಂಡು ಸೆಕ್ಯುರಿಟಿ ಇಲ್ಲದ ಒಂದು ಕಡೆ ಹೋಗಿ ನಿಂತ.

''ಚಂದನ್... ಇದನ್ನು ಬಿಟ್ಟು ಬೇರೆ ದಾರಿ ಇಲ್ಲವೆನ್ನುವೆಯಾ?'' ಕೇಳಿದ ವಿಜಯ್.

''ಇಲ್ಲ ವಿಜಯ್, ಮಹೇಶನನ್ನು ಹೊರಕ್ಕೆ ಕರೆತರಲು ಸಬ್ ಜೈಲ್ ಸ್ಫೋಟಿಸದೆ ದಾರಿಯೇ ಇಲ್ಲ. ಆ ಗೊಂದಲದಲ್ಲಿ ಗುರುವನ್ನು ಕರೆಕೊಂಡು ಫಾಸ್ಟಾಗಿ ಇಲ್ಲಿಂದ ಟೆಂಟ್ ಎತ್ತಿಬಿಡಬೇಕು'' ಎಂದು ತನ್ನ

ಪ್ಲಾನ್ ಮತ್ತೊಮ್ಮೆ ವಿವರಿಸಿದ ಚಂದನ್.

ತಮಗೆ ಬೇಕಾದುದನ್ನೆಲ್ಲ ಇಬ್ಬರು ರೆಡಿ ಮಾಡಿಕೊಂಡರು.

''ಗೆಟ್ ರೆಡಿ ವಿಜಯ್... ಯಾವುದೇ ಪರಿಸ್ಥಿತಿಯಲ್ಲೂ ಈ ಕೆಲಸ ವಿಫಲವಾಗುವಂತಿಲ್ಲ. ಬಿ ಕೇರ್‌ಫುಲ್ ಜೈ ಬೋಲೋ ಆಂಜನೇಯ...'' ಅನ್ನುತ್ತ ಜೋರಾಗಿ ಬಾಯಿ ತೆರೆದ ಚಂದನ್.

ಮರುಕ್ಷಣ ಭಯಂಕರ ಶಬ್ದವೊಂದು ಹೊರ ಬಂದಿತ್ತು ಅವನ ಬಾಯಿಂದ.

★

ಯಾವುದೋ ಆಲೋಚನೆಯಲ್ಲಿ ಮುಳುಗಿದ್ದ ಮಹೇಶನ ಕಿವಿಗೆ ಗಾಳಿಯ ಮೂಲಕ ಷೇಕ್ ಆಗಿಬಂದು ಕೇಳಿಸಿತು ಆ ಸೌಂಡ್. ಅದು ಕೇಳಿದೊಡನೆ ಅವನು ಕ್ಷಣ ಸ್ತಬ್ಧನಾದ.

''ಏಕೆ ಫ್ರೆಂಡ್? ವಾಟೀಸ್ ದ ಮ್ಯಾಟರ್?'' ಕೇಳಿದ ಅವನ ಸಹ ಕೈದಿ.

ಅವನ ಮಾತಿಗೆ ಉತ್ತರಿಸದೆ ಮತ್ತಷ್ಟು ಕೇರ್‌ಫುಲ್ಲಾಗಿ ಆಲಿಸಿದ ಮಹೇಶ. ಮರುಕ್ಷಣ ಕ್ಲಿಯರ್ ಆಯಿತು ಅವನ ಡೌಟ್. ದಿಢೀರನೆ ಮುಗುಳ್ನಗೆ ಪ್ರತ್ಯಕ್ಷವಾಗಿತ್ತವನ ತುಟಿಗಳ ಮೇಲೆ.

''ಪ್ಚ್... ಮಾಂಡಲೇ ಜೈಲಿನ ಬಗ್ಗೆ ಕೇಳಿದಾಗಿಂದ ಹೀಗೇ ಇದೆ ನಿನ್ನ ಪರಿಸ್ಥಿತಿ, ಹುಚ್ಚು ಹಿಡಿದಂತೆ. ಏನಿದು? ಒಮ್ಮೆ ಆಲೋಚಿಸುವೆ, ಇನ್ನೊಮ್ಮೆ ನಗುವೆ. ಇದ್ದಕ್ಕಿದ್ದಂತೆ ಗಂಭೀರನಾಗುವೆ?'' ಅಂದ ನವಿನ್.

''ಡೋಂಟ್ ವರಿ ಫ್ರೆಂಡ್... ನನಗೇನೂ ಆಗಿಲ್ಲ. ಹೈಕ್ಲಾಸಾಗಿದ್ದೇನೆ. ಇಲ್ಲಿದ್ದರೆ ತಾನೇ ಮಾಂಡಲೇ ಜೈಲಿಗೆ ಹೋಗುವುದು?'' ಅಂದ.

''ವಾಟ್? ಮತ್ತೆ ತಪ್ಪಿಸಿಕೊಳ್ಳುವ ಯೋಜನೆಯೇ? ತಿಂದ

ಏಟುಗಳನ್ನು ಮರೆತು ಬಿಟ್ಟಿಯಾ?'' ಕೇಳಿದ ನವೀನ್.

''ಮರೆಯಲಿಲ್ಲ ಫ್ರೆಂಡ್... ಇನ್ನು ಕೆಲವೇ ನಿಮಿಷಗಳಲ್ಲಿ ಎಸ್ಕೇಪ್ ಆಗಲಿದ್ದೇವೆ. ಗೆಟ್ ರೆಡಿ'' ಅನ್ನುತ್ತಲೇ ಬಾಯಿಂದ ನರಿ ಊಳಿಡುವಂತೆ ಶಬ್ದ ಮಾಡಿದ ಮಹೇಶ.

''ಡ್ಯಾಮಿಟ್, ನಿನಗೆ ನಿಜವಾಗಿಯೂ ಹುಚ್ಚು ಹಿಡಿಯಿತು. ಈಗ ನಾವೆಲ್ಲಿದ್ದೇವೆಂದು ಗೊತ್ತೇ?'' ನವೀನ್ ಕೇಳಿದ ಆತಂಕದಿಂದ.

''ಗೊತ್ತು ಫ್ರೆಂಡ್... ಎಲ್ಲಾ ಗೊತ್ತು. ಜಸ್ಟ್‌ವೈಟ್ ಅಂಡ್ ಸೀ.'' ಎಂದು ಮತ್ತೊಮ್ಮೆ ಹಾಗೆಯೇ ಊಳಿಟ್ಟ ಮಹೇಶ.

ಭಯಭ್ರಾಂತನಾಗಿ ಅವನ ಕಡೆಗೇ ನೋಡುತ್ತಿದ್ದುಬಿಟ್ಟ ನವೀನ್. ಮಹೇಶನ ಬಾಯಿಂದ ಎರಡು ಸಲ ನರಿಯ ಊಳಿಡುವಿಕೆ ಕೇಳಿಬಂದೊಡನೆ ಆಚೆ ಬದಿಯ ಶಬ್ದಗಳು ಥಕ್ಕನೆ ನಿಂತು ಹೋದವು.

ಆ ಸೆಲ್‌ನೊಳಗಿಂದ ವಿಚಿತ್ರ ಸೌಂಡ್ ಕೇಳಿಸಿ ಓಡೋಡುತ್ತ ಬಂದ ಸೆಂಟ್ರಿ.

''ರ್‍ಯಾಸ್ಕಲ್ಸ್... ಏನು ಈ ಕೂಗುಗಳು? ಅರ್ಧರಾತ್ರಿ ವೇಳೆಯಲ್ಲಿ ಹುಚ್ಚರಂತೆ ಚೀರಾಡುತ್ತ ಪ್ರಶಾಂತವಾದ ಜೈಲಿನ ವಾತಾವರಣ ಹಾಳುಗೆಡವಬೇಕೆಂದುಕೊಂಡಿರುವಿರಾ? ಬಿದ್ದ ಏಟುಗಳನ್ನು ಮರೆತು ಬಿಟ್ಟರೇನು? ನಾಯಿಯ ಬೊಗಳಾಟ, ಕತ್ತೆಯ ಕಿರುಚಾಟ ಮಾಡದಿದ್ದರೆ ನಿದ್ದೆ ಬರದೇ?'' ಎಂದು ಸರ್ರನೆ ಹರಿಹಾಯ್ದ.

ನಿರ್ಲಕ್ಷವಾಗಿ ತಲೆ ಎಗರಿಸಿದ ಮಹೇಶ.

''ನನ್ನ ಬಾಯಿ... ನನ್ನಿಷ್ಟವಯ್ಯಾ! ನನ್ನಿಷ್ಟ ಬಂದಂತೆ ಅರಚುತ್ತೇನೆ. ಏನು ಮಾಡುವೆ?'' ಅಂದ.

ಸೆಂಟ್ರಿಗೆ ಮೈಯ್ಯೆಲ್ಲಾ ಉರಿದು ಹೋಯಿತು. ''ಎಷ್ಟು ಧೈರ್ಯವೋ ನಿನಗೆ? ಬಾಯಿಗೆ ಬಂದಂತೆ ಕೂಗಿ ನಿದ್ರಿಸುತ್ತಿರುವವರ ಎಬ್ಬಿಸುವುದಲ್ಲದೆ ನನಗೇ ಎದುರು ವಾದಿಸುವೆಯಾ?'' ಸೀರಿಯಸ್ಸಾಗಿ ಕೇಳಿದ.

''ಝಾಡಿಸಿ ಒದ್ದರೆ ಮತ್ತೆ ನೀರು ಕೊಡುವವರೆಗೆ ಮೇಲೇಳಲಾಗದ

ಉಳಾ, ನನ್ನನ್ನೇನು ಮಾಡಬಲ್ಲೆ ನೀನು?'' ಚಿಟಿಕೆ ಹೊಡೆದು ಕೇಳಿದ ಮಹೇಶ.

ಕಂಪ್ಲೀಟ್ ಅವಕ್ಕಾಗಿಬಿಟ್ಟ ಗಾರ್ಡ್.

''ಏನಂದೆ...? ಮುಗಿಯಿತು... ಇಂದಿಗೆ ನಿನ್ನ ಕಥೆ ಮುಗಿದೇ ಹೋಯಿತು'' ಅನ್ನುತ್ತ ತಡ ಮಾಡದೆ ಬೀಗ ತೆರೆದು ಒಳಕ್ಕೆ ನುಗ್ಗಿದ.

ಆ ಅವಕಾಶಕ್ಕಾಗಿಯೇ ಕಾಯುತ್ತಿದ್ದ ಮಹೇಶ. ಅವನನ್ನು ಒಳಕ್ಕೆ ಬರಿಸಲೇ ರೊಚ್ಚಿಗೆಬ್ಬಿಸಿದ ಅವನು.

ರೋಷದಿಂದ ಒಳಕ್ಕೆ ಬಂದ ಸೆಂಟ್ರಿ ಅವನ ಲೆಕ್ಕಾಚಾರದಂತೆಯೇ.

''ರ್‍ಯಾಸ್ಕಲ್... ಲೋಫರ್... ಈಡಿಯಟ್... ನನಗೇ ಎದುರುತ್ತರ ಕೊಡುವೆಯಾ? ನಿನ್ನನ್ಯಾರು ರಕ್ಷಿಸುವರೋ ನೋಡೇ ಬಿಡುತ್ತೇನೆ'' ಅಂದ ಸೆಂಟ್ರಿ.

''ಡಿಯರ್ ಸೆಂಟ್ರಿ... ನೀನೆಷ್ಟು ಗಂಟಲು ಹರಿಯುವಂತೆ ಕಿರುಚಿದರೂ ಏನೂ ಪ್ರಯೋಜನವಿಲ್ಲ. ಮೊದಲಿಲ್ಲಿಂದ ಹೊರಹೋಗುವ ದಾರಿ ಅರ್ಜೆಂಟಾಗಿ ಹುಡುಕಿಕೋ.'' ಮಲಗಿರುವಂತೆಯೇ ಎಚ್ಚರಿಸಿದ ನವಿನ್, ''ಏಕೆಂದರೆ ಅವನಿಗೆ ತೀವ್ರವಾಗಿ ಹುಚ್ಚು ಕೆದರಿದೆ.''

ಅದುರಿಬಿದ್ದು ಅತ್ತ ಕಡೆ ನೋಡಿದ ಸೆಂಟ್ರಿ.

ಮರುಕ್ಷಣ ಪಾದರಸದಂತೆ ಪ್ರೊಜೆಕ್ಟಾದ ಮಹೇಶ. ಅಷ್ಟೇ, ಪಟಾರನೆ ಸಂಪರ್ಕಿಸಿತ್ತು ಸೆಂಟ್ರಿಯ ಕಿವಿಯ ತಳಭಾಗಕ್ಕೆ.

ಕರೆಂಟ್ ಷಾಕ್ ತಗುಲಿದಂತೆ ಗಡಗಡ ನಡುಗಿದ ಸೆಂಟ್ರಿ ಮೂರ್ಛೆ ಹೋಗಿ ಹಾಗೇ ಕುಸಿದುಬಿದ್ದ.

ಸರಿಯಾಗಿ ಆಗಲೇ ಭೂಕಂಪವಾದಂತೆ 'ಧನೇಲ್' ಎಂಬ ಭಯಂಕರ ಶಬ್ದ ಮಾಡುತ್ತ ಎರಡು ಸ್ಫೋಟಗಳು ಸಂಭವಿಸಿದ್ದವು. ಒಂದು ಸಲ ಬೊಂಬಾರ್ಡಾಯಿತು ಜೈಲ್.

ನಡೆದದ್ದೇನೋ ಅರ್ಥವಾಗದೆ ದಿಗ್ಮೂಢವಾಗಿ ನೋಡುತ್ತಿದ್ದುಬಿಟ್ಟ ನವಿನ್.

ಫಳ್...ಫಳೀರ್ ಎಂದು ಮುರಿದು ಬಿತ್ತು ಜೈಲಿನ ಗೋಡೆ. ಅದರ ಹಿಂದೆಯೇ ಆವರಣದೊಳಕ್ಕೆ ಬಂದು ಬಿದ್ದ ಕೆಲವು ಬಾಂಬ್‌ಗಳು ಭೀಕರ ಶಬ್ದ ಮಾಡುತ್ತಾ ಎಕ್ಸ್‌ಪ್ಲೋಡ್ ಆದವು.

''ಕಮಾನ್ ಫ್ರೆಂಡ್... ನಾನು ಮೊದಲೇ ಹೇಳಲಿಲ್ಲವೇ ಮತ್ತೊಮ್ಮೆ ಇಂತಹ ಒಳ್ಳೆಯ ಅವಕಾಶ ನಮಗೆ ಸಿಗಲಾರದು. ಕಮಾನ್...'' ಅನ್ನುತ್ತ ನವಿನ್, ಕೈ ಹಿಡಿದುಕೊಂಡು, ಬಾಂಬ್‌ಗಳು ಸ್ಫೋಟಿಸುತ್ತಿದ್ದ ದಿಕ್ಕಿನ ಕಡೆಗೆ ಫಾಸ್ಟ್ ಸ್ಪ್ರಿಂಟ್ ಮಾಡಿದ ಮಹೇಶ.

ಆ ಕತ್ತಲಲ್ಲಿ ಆ ಗೊಂದಲ, ಗಲಭೆಯ ನಡುವೆ ಅವರನ್ನು ಇಗೋ ಅನ್ನುವವರಿಲಿಲ್ಲ. ಎಲ್ಲೆಲ್ಲೂ ಹಾಹಾಕಾರ.

ಬಾಂಬ್ಸ್ ಯಾರು ಎಸೆಯುತ್ತಿದ್ದಾರೆಂದು ಅರ್ಥವಾಗದೆ, ಆಲೋಚಿಸುತ್ತಿದ್ದರು ಸೆಂಟ್ರಿಗಳು. ಫಿಷ್ ಮಾರ್ಕೆಟ್‌ನಂತಾಗಿತ್ತು ಜೈಲ್ ಆವರಣವೆಲ್ಲ.

ಎರಡೇ ನಿಮಿಷಗಳಲ್ಲಿ ಮುರಿದ ಗೋಡೆಗಳ ಮಧ್ಯದಿಂದ ನುಸುಳಿ, ಜೈಲಿನಿಂದ ಹೊರ ಬಂದುಬಿಟ್ಟಿದ್ದರು ಮಹೇಶ ಮತ್ತು ನವಿನ್.

''ಕಮಾನ್ ಗುರು... ಇತ್ತ ಬಾ...'' ಜೋರಾಗಿ ಕೂಗಿಕೊಂಡ ಚಂದನ್. ಅತ್ತ ಕಡೆಗೆ ಓಡಿದ ಮಹೇಶ.

ತನ್ನ ಬಳಿಯಿರುವ ಬಾಂಬ್ ಸ್ಟಾಕ್ ಖಾಲಿ ಮಾಡುವುದರಲ್ಲೇ ತಲ್ಲೀನನಾಗಿದ್ದ ವಿಜಯ್.

''ಭಾಯ್... ಬಾ ಸಾಕು... ಬಹಳ ಹೊತ್ತು ನಾವು ಈ ಪರಿಸರದಲ್ಲಿರಬಾರದು'' ಅನ್ನುತ್ತ ಬಲವಂತವಾಗಿ ಅವನನ್ನೆಳೆದುಕೊಂಡು ದೌಡು ಕಿತ್ತ ಚಂದನ್.

ನಾಲ್ವರೂ ನದಿಯ ಕಡೆಗೆ ಮ್ಯಾಕ್ಸಿಮಮ್ ಸ್ಪೀಡ್‌ನಲ್ಲಿ ಓಡಿದರು.

ಸೆಂಟ್ರಿಗಳು ಆ ಏರಿಯಾಗೆ ಬರುವುದಕ್ಕೆ ಮೊದಲೇ ಅಲ್ಲಿಂದ ಮೈಲಿಯಷ್ಟು ದೂರವಾಗಿದ್ದರು ಮಹೇಶ ಮತ್ತವನ ಸ್ನೇಹಿತರು.

★

ಸಿಗರೇಟ್ ಹೊತ್ತಿಸಿಕೊಂಡು ಸುತ್ತಲೂ ನೋಡಿದ ಮಹೇಶ. ರಾತ್ರಿ ಎರಡಾಗಲು ಇನ್ನು ಹತ್ತು ನಿಮಿಷವಷ್ಟೇ ಉಳಿದಿತ್ತು. ಹಾರ್ಬರ್‌ಗೆ ಸಮೀಪದ ಮೂವ್ಲಿ ಹಿಲ್ಸ್ ಏರಿಯಾ ಅದು. ಷಿಮೋಗಾ ಅವನನ್ನು ಭೇಟಿಯಾಗಬೇಕಾದ ಜಾಗ ಅದೇ.

ಸರಿಯಾಗಿ ಎರಡು ಗಂಟೆಗೆ ಷಿಮೋಗಾ ಅಲ್ಲಿಗೆ ಬರಬೇಕು.

ನಿರ್ಮಲವಾಗಿತ್ತು ಆಕಾಶ. ಅಡ್ಡ ಸಿಗುವ ಮೋಡಗಳನ್ನು ಸೀಳಿಕೊಂಡು ಮುನ್ನಡೆಯುತ್ತಿದ್ದ ಚಂದ್ರ. ಸಮುದ್ರದ ಮೇಲಿಂದ ತಣ್ಣನೆಯ ಗಾಳಿ ಬೀಸಿ ಬರುತ್ತಿತ್ತು. ಹಾರ್ಬರ್‌ನಲ್ಲಿ ಕೂಲಿಗಳ ಕೂಗುಗಳೂ ಅತ್ತ ಕಡೆಗೆ ತೇಲಿ ಬರುತ್ತಿದ್ದವು.

ಸರಿಯಾಗಿ ಎರಡು ಗಂಟೆಗೆ ಹಿಲ್ ಪಕ್ಕದಲ್ಲಿ ಕಾಣಿಸಿತ್ತೊಂದು ಆಕಾರ. ಮಹೇಶ ಆತಂಕದಿಂದ ಅತ್ತ ಕಡೆಗೆ ನೋಡುತ್ತಿದ್ದ.

ಹೆಜ್ಜೆಯ ಮೇಲೆ ಹೆಜ್ಜೆಯಿಡುತ್ತ, ಅವನ ಕಡೆಗೆ ಬರತೊಡಗಿತು ಆ ಆಕಾರ.

ಯಾವುದಕ್ಕೂ ಒಳ್ಳೆಯದೆಂದು ಷರ್ಟ್‌ನ ಮೇಲಿನೆರಡು ಬಟನ್ಸ್ ಬಿಚ್ಚಿದ್ದ ಮಹೇಶ ಇನ್‌ಸ್ಟಂಟಾಗಿ 'ರಾಣಿ'ಯನ್ನು ಹೊರಕ್ಕೆ ಸೆಳೆಯಲು.

ನೋಡ ನೋಡುತ್ತಿದ್ದಂತೆಯೇ ಮಹೇಶನ ಮುಂದೆ ಬಂದು ನಿಂತ ಆ ವ್ಯಕ್ತಿ.

''ಸಮುದ್ರದ ಮೇಲಿಂದ ಬೀಸುವ ಗಾಳಿ ಆರೋಗ್ಯಕ್ಕೆ ಬಹಳ ಒಳ್ಳೆಯದಲ್ಲವೇ?''

ಮಹೇಶನ ಮುಖವನ್ನೇ ತೀಕ್ಷ್ಣವಾಗಿ ನೋಡುತ್ತ ಕೇಳಿದ ಆಗಂತುಕ.

ಕೇಳುವವರಿಗದು ಸರ್ವೇ ಸಾಧಾರಣ ಪ್ರಶ್ನೆಯಾದರೂ ಅದೇ ಷಿಮೋಗಾ ಮಹೇಶನ ಭೇಟಿಯಾದಾಗ ಎಚ್ಚರಿಸಬೇಕಾಗಿದ್ದ ಕೋಡ್ ಸೆಂಟೆನ್ಸ್.

'ಸೋ... ನೋ ಡೌಟ್... ದಿಸಿಸ್ ಫ್ರೆಂಡ್ ಷಿಮೋಗಾ.'

''ಸದ್ಯಕ್ಕೆ ವಿಷದ ಗಾಳಿ ಬರುತ್ತಿದೆ ಫ್ರೆಂಡ್. ತುಸು ಏಮಾರಿದರೂ ಪ್ರಾಣ ತೆಗೆದುಬಿಡುತ್ತದೆ'' ಅಂದ ಮಹೇಶ. ಅದವನು ನೀಡಬೇಕಾದ ಉತ್ತರವಾಗಿತ್ತು.

ಬಿಗಿಹಿಡಿದಿದ್ದ ಉಸಿರನ್ನು ಆಗ ಹೊರಚೆಲ್ಲಿದ ಬಂದಾತ.

''ನನಗೆ ಗೊತ್ತಿತ್ತು ಡಿಯರ್ ಕೆ-7 ಎಷ್ಟೇ ಅಡ್ಡಿ, ಆತಂಕಗಳು ಎದುರಾದರೂ ಪ್ರಳಯವೇ ಸಂಭವಿಸಿದರೂ ನೀನಿಲ್ಲಿಗೆ ಬಂದೇ ಬರುವೆಯೆಂದು ಗೊತ್ತಿತ್ತು. ಐ ಯಾಮ್ ಷಿಮೋಗಾ'' ಎಂದು ತನ್ನನ್ನು ತಾನು ಪರಿಚಯಿಸಿಕೊಂಡ.

''ಆಲ್ ರೈಟ್ ಷಿಮೋಗಾ. ನಾವಲ್ಲಿ ಕುಳಿತು ಮಾತನಾಡೋಣ...'' ಎಂದು ಒಂದು ಬಂಡೆ ತೋರಿಸಿದ ಮಹೇಶ.

ಇಬ್ಬರೂ ಅಕ್ಕ ಪಕ್ಕ ಕುಳಿತರು.

ಜೈಲ್‌ನಿಂದ ತಪ್ಪಿಸಿಕೊಂಡ ನವೀನ್‌ನಿಂದ ಹಿಡಿದು ಎಲ್ಲರೂ ಮಹೇಶನನ್ನು ಸೇರಿಕೊಂಡಿದ್ದರು.

ಆ ವೇಳೆಗೆ ಪೊಲೀಸರು ರಂಗಕ್ಕಿಳಿದಿದ್ದರು. ರಂಗೂನ್ ರಸ್ತೆಗಳು ಪೊಲೀಸ್ ಸೈರನ್ಸ್, ವಿಷಲ್‌ಗಳಿಂದ ತುಂಬಿ ಹೋಯಿತು.

ನವೀನ್ ತಾನು ಹೋಗುವುದೇ ಇಲ್ಲವೆಂದ. ಅವರೊಡನೆಯೇ ಇರುವೆನೆಂದ. ಕೊನೆಗೆ ಅವನ ಮನವೊಲಿಸಿ ಕಳಿಸುವಷ್ಟರಲ್ಲಿ ಕಲಿತ ವಿದ್ಯೆಯನ್ನೆಲ್ಲ ವ್ಯಯಿಸಬೇಕಾಯಿತು ಮಹೇಶ.

ಚಂದನ್ ಮತ್ತು ವಿಜಯ್‌ರನ್ನು ಹೋಟೆಲ್‌ನಲ್ಲೇ ಇರುವಂತೆ ಹೇಳಿ ತಾನೊಬ್ಬನೇ ರೆಂಡ್ ಝುವಾಸ್‌ಗೆ ಹೊರಟಿದ್ದ ಮಹೇಶ.

''ಹೇಳು ಫ್ರೆಂಡ್ ಷಿಮೋಗಾ... ನಿನಗೆ ತಿಳಿದಿರುವ ನೀನು ಸಂಗ್ರಹಿಸಿರುವ ವಿಷಯಗಳನ್ನೆಲ್ಲಾ ಬಾಚೂ ತಪ್ಪದಂತೆ ತಿಳಿಸು'' ಅಂದ ಮಹೇಶ.

''ಫ್ರೆಂಡ್ ಜಿಂಕೆ! ನಿನಗಾದ ತೊಂದರೆಗೆ ವಿಷಾದಿಸುತ್ತೇವೆ. ಬ್ಲಡಿ ವಾಂಗ್ ಥೂ ಅಡ್ವಾನ್ಸಾಗಿ ಎಲ್ಲಾ ದಾರಿಗಳನ್ನೂ ಕವರ್ ಮಾಡಿದ.

''ಮೈಕ್ರೋಫಿಲಂ ಮಾಯವಾದ ಮೇಲೆ ಎಲ್ಲಾ ಏಜೆಂಟರಂತೆ

ನಾನು ಹೊರಟೆ. ಎರಡು ವರ್ಷಗಳ ಹಿಂದೆ ವಾಂಗ್ ಛೂ ಒಬ್ಬ ಸರ್ವೇಸಾಧರಣ ಸ್ಮಗ್ಲರ್. ಆದರೆ ಇನ್ನೊಬ್ಬರಿಗೆ ತಿಳಿಯದಂತೆ ತನ್ನ ದಂಧೆ ನಡೆಸುವುದರಲ್ಲವನು ನಿಪುಣ. ಅವನು ಏನೇ ಮಾಡಿದರೂ ಯಾರಿಗೂ ತಿಳಿಯದು... ಇಂದಿಗೂ.

''ಹೇಳುವುದನ್ನು ಮಾಡ... ಮಾಡುವುದನ್ನು ಹೇಳ, ಅದೇ ಅವನ ಸ್ಪೆಷಾಲಿಟಿ.

''ನನ್ನ ನೋಟ ಅವನ ಮೇಲೆ ಬಿತ್ತು. ತನಿಖೆ ಮಾಡಿದೆ ಸೀಕ್ರೆಟ್ಟಾಗಿ. ಇನ್ನಷ್ಟು ಆಸಕ್ತಿದಾಯಕ ವಿಷಯಗಳು ತಿಳಿದುಬಂದವು. ಅವನಿಗೆ ಸರ್ಕಾರದಲ್ಲಿ ರಾಜಕಾರಣಿಗಳು, ಅಧಿಕಾರಿಗಳು ತೊತ್ತಿನಂತೆ ಕೆಲಸ ಮಾಡುತ್ತಾರೆ. ದೇಶದ ಯಾವುದೇ ಮೂಲೆಯಲ್ಲಿ ಏನೇ ದೌರ್ಜನ್ಯವಾಗಲಿ, ದರೋಡೆಯಾಗಲಿ, ಗೊಂದಲ ಗಲಭೆಗಳಾಗಲಿ... ಎಲ್ಲಾದರಲ್ಲೂ ವಾಂಗ್ ಛೂ ಟಚ್ ಇರುತ್ತದೆಂದು ಅರ್ಥವಾಯಿತು.

''ಬರ್ಮಾ ದೇಶದ ಅಂಡರ್‌ವರ್ಲ್ಡ್ ಕಿಂಗ್ ಪಿನ್ ಅವನು ಎಂದು ನನ್ನ ತನಿಖೆಯಿಂದ ಸಾಬೀತಾಯಿತು. ಆದರೆ ಈ ವಿಷಯ ಒಬ್ಬರಿಗೂ... ಕೊನೆಗೆ ಅಂಡರ್‌ವರ್ಲ್ಡ್‌ನವರಿಗೂ ತಿಳಿಯದು.

''ಅವನ್ಯಾವಾಗಲೂ ಒಂಟಿಯಾಗಿಯೇ ಇರುತ್ತಾನೆ. ಅವನಿಗೆ ದೊಡ್ಡ ಗ್ಯಾಂಗ್ ಎಂದೇನೂ ಇಲ್ಲ. ಆದರೂ ದೇಶದ ಎಲ್ಲೆಡೆ ಅವನ ಮನುಷ್ಯರಿದ್ದಾರೆ.

''ಸರ್ಕಾರದಲ್ಲಿರುವ ಅವನ ಚಂಚಾ ಅಧಿಕಾರಿಗಳ ಮೂಲಕ ಮೈಕ್ರೋಫಿಲಂ ರಹಸ್ಯ ಅವನಿಗೆ ತಿಳಿದು ಹೋಯಿತು.

''ಮಿಂಟೂ ಸಿಟಿಯಲ್ಲಿ ಇನ್ನೊಬ್ಬರಿಗೆ ಅರಿವಾಗದಂತೆ ರೇಮಾಂಡ್‌ನನ್ನು ಕೊಂದು ಮೈಕ್ರೋಫಿಲಂ ತನ್ನ ಕೈ ಸೇರುವಂತೆ ನೋಡಿಕೊಂಡ ವಾಂಗ್ ಛೂ. ಆಮೇಲೆ ಯಾರಿಗೂ ಯಾವುದೇ ಕ್ಲೂ ಸಿಗದಂತೆ ಕಟ್ಟೆಚ್ಚರ ವಹಿಸಿದ.

''ನಾನು ಮಾರುವೇಷದಲ್ಲಿ ಎಲ್ಲೆಡೆ ಓಡಾಡಿದೆ. ವಾಂಗ್ ಛೂ

ಅನುಚರನೊಬ್ಬನ ಸ್ನೇಹ ಸಂಪಾದಿಸಿದೆ. ಅದಕ್ಕೇ ಟೈಂ ಬೇಕಂದದ್ದು. ಅವನ ಮೂಲಕವೇ ಈ ಎಲ್ಲಾ ವಿಷಯಗಳನ್ನೂ ನಾನು ಅರಿತದ್ದು.

''ಮೈಕ್ರೋಫಿಲಂ ವಾಂಗ್ ಭೂ ಬಳಿಯೇ ಇದೆ. ನಾಳೆಯೇ ಅವನು ಅದನ್ನು ಕ್ರೈಂ ವರ್ಲ್ಡ್‌ನಲ್ಲಿ ಬಿಡ್ಡಿಂಗ್ ಮಾಡುತ್ತಿದ್ದಾನೆ. ಹೆಚ್ಚು ಬೆಲೆಗೆ ಕೂಗಿದವನ ಸ್ವತ್ತಾಗುತ್ತದೆ. ತನ್ನ ದೇಶದ ಭದ್ರತೆಯನ್ನೇ ಬಿಡ್ ಮಾಡುತ್ತಿದ್ದಾನೆ ಆ ಬಾಸ್ಟರ್ಡ್.

''ಈ ದಿನವೇ ನಮ್ಮ ಹಲವು ಶತ್ರು ದೇಶಗಳ ಪ್ರತಿನಿಧಿಗಳು, ಕ್ರಿಮಿನಲ್ ಗ್ಯಾಂಗ್‌ನವರು ವಾಂಗ್ ಭೂ ಸ್ಥಾವರಕ್ಕೆ ಬರುತ್ತಿದ್ದಾರೆ. ಅದರಲ್ಲೂ ಗೋಲ್ಡನ್ ಗ್ಯಾಂಗ್‌ನವರಿಗೆ ವಿಶೇಷ ಆಹ್ವಾನ ನೀಡಿದ್ದಾನೆ ವಾಂಗ್ ಭೂ'' ಎಂದು ಕ್ಷಣ ತಡೆದ ಷಿಮೋಗಾ.

''ವಾಂಗ್ ಭೂ ಸ್ಥಾವರ ಎಲ್ಲಿದೆಯೆಂದು ಗೊತ್ತೇ?'' ಕೇಳಿದ ಮಹೇಶ.

''ರಂಗೂನ್ ನಗರದ ಉತ್ತರಕ್ಕೆ ಇಪ್ಪತ್ತು ಮೈಲಿಗಳಷ್ಟು ದೂರದಲ್ಲಿಗೆ ಜಮ್ಮಾ ಲೇಕ್. ಆ ಲೇಕ್‌ಗೆ ಹೊಂದಿಕೊಂಡಂತಿದೆ ಹಳೆಯ ಕಾಲದ ಕಟ್ಟಡವೊಂದು. ನೋಡಲು ಶಿಥಿಲ ಕಟ್ಟಡದಂತೆಯೇ ಕಾಣುತ್ತದೆ. ಆದರೆ ಅದನ್ನೇ ಸದ್ಯಕ್ಕೆ ತನ್ನ ಸ್ಥಾವರವಾಗಿಸಿಕೊಂಡಿದ್ದಾನೆ ವಾಂಗ್ ಭೂ.

''ಅವನಿಗೆ ಚಿಂಗ್‌ಲೀ ಎಂಬ ಮುಖ್ಯ ಅನುಚರನೊಬ್ಬನಿದ್ದಾನೆ. ಆ ಸ್ಥಾವರದಲ್ಲಿ ಎರಡು ಸಾವಿರದವರೆಗೆ ಅವನ ಅನುಚರಿರಬಹುದೆಂದು ನನ್ನ ಊಹೆ'' ಎಂದು ತಾನರಿತಿದ್ದ ವಿಷಯಗಳನ್ನೆಲ್ಲ ವಿವರಿಸಿದ ಷಿಮೋಗಾ.

''ಥ್ಯಾಂಕ್ಯೂ ವೆರಿ ಮಚ್ ಡಿಯರ್ ಷಿಮೋಗಾ...ನನ್ನೊಂದು ಪ್ರಶ್ನೆಗೆ ಉತ್ತರ ಹೇಳು'' ಅಂದ ಮಹೇಶ.

''ಏನದು?''

''ಮೂಂಗ್ ಭೂನನ್ನು ನಾನು ಕೊಂದಂತೆ ಸೃಷ್ಟಿಸಿ ಏನು ಸಾಧಿಸಿದ ವಾಂಗ್ ಭೂ?''

''ಹೋಂಮಿನಿಸ್ಟರ್‌ಗೆ ಕ್ಲೋಸ್ ರಿಲೇಟಿವ್ ಆದ ಮೂಂಗ್ ಭೂನನ್ನು ಕೊಂದವರು ವಾಂಗ್ ಭೂ ಕಡೆಯವರೇ. ಮೂಂಗ್ ಭೂ ಸಹ ವಾಂಗ್ ಭೂ ಗ್ಯಾಂಗ್‌ನ ಒಬ್ಬ ಸದಸ್ಯನೇ. ಕೊನೆಯ ಗಳಿಗೆಯಲ್ಲಿ ಅವರಿಗೇನೋ ಮನಸ್ತಾಪ ಬೆಳೆದು ಮೂಂಗ್ ಭೂನನ್ನು ಕೊಂದುಬಿಟ್ಟರು. ಆ ಅಪರಾಧದಲ್ಲಿ ನಿನ್ನ ಸಿಕ್ಕಿಸಿ ಶಾಶ್ವತವಾಗಿ ತನ್ನ ದಾರಿಯಿಂದ ದೂರಾಗಿಸಿಕೊಳ್ಳಬೇಕೆಂದು ಅವನ ಅನಿಸಿಕೆ.'' ವಿವರಿಸಿದ ಷಿಮೋಗಾ.

''ಆಲ್‌ರೈಟ್ ಷಿಮೋಗಾ... ನಿಮ್ಮ ದೇಶಕ್ಕಿಡಿದಿರುವ ಪೀಡೆಯನ್ನು ಪರಿಹರಿಸುತ್ತೇನೆ. ನಿಮ್ಮ ಪೊಲೀಸರು ರೊಚ್ಚಿಗೆದ್ದಿದ್ದಾರೆ. ಅವರನ್ನು ಸ್ವಲ್ಪ ಕಂಟ್ರೋಲ್ ಮಾಡಿ.'' ನಗುತ್ತಾ ಅಂದ ಮಹೇಶ.

ಹೇಗೆ ಬಂದನೋ ಹಾಗೆಯೇ ಕತ್ತಲಲ್ಲಿ ಕರಗಿಹೋದ ಷಿಮೋಗಾ.

ಕೊನೆಯವರೆಗೆ ಉರಿದಿದ್ದ ಸಿಗರೇಟ್ ಬಿಟ್ ದೂರ ಎಸೆದು ಫ್ರೆಷ್ ಸಿಗರೇಟೊಂದನ್ನು ಹಚ್ಚಿಕೊಂಡ ಮಹೇಶ. ಅವನ ಮಿದುಳನ್ನಾವರಿಸಿದ್ದವು ಹಲವಾರು ಯೋಚನೆಗಳು.

ವಾಂಗ್ ಭೂ ಸ್ಥಾವರದ ಮಾಹಿತಿಯಂತೂ ಲಭಿಸಿದೆ. ಇನ್ನು ಯೋಚಿಸುವುದು ಅನವಶ್ಯಕ. ಉಳಿದಿರುವುದೇನಿದ್ದರೂ ಆ್ಯಕ್ಷನ್ ಮಾತ್ರ.

ಮಹೇಶನಿಗೆ ಚಿಂತೆ ತಂದ ವಿಷಯ ಒಂದೇ.

ಶತ್ರು ದೇಶಗಳ ಜೊತೆ ಜೊತೆಗೆ ಗೋಲ್ಡನ್ ಗ್ಯಾಂಗ್ ತಲೆಗಳೂ ಬರುತ್ತಿವೆ ಬಿಡ್ಡಿಂಗ್‌ಗೆ... ಎಲ್ಲರಿಗೂ ಸರಿಯಾದ ಪಾಠ ಕಲಿಸಬೇಕು. ಹೆಜ್ಜೆ ಹೆಜ್ಜೆಗೂ ತನ್ನ ಕಾಲಿಗೆ ಬೇಡಿ ಹಾಕಲು ಪ್ರಯತ್ನಿಸಿದ ವಾಂಗ್ ಭೂನನ್ನು ತಳಸಮೇತ ಕಿತ್ತೊಗೆದುಬಿಡಬೇಕು.

ಆಲೋಚನೆಯಲ್ಲಿ ಮುಳುಗಿದ್ದ ಮಹೇಶ ಯಾವುದೋ ಹೆಜ್ಜೆಗಳ ಶಬ್ದ ಅಸ್ಪಷ್ಟವಾಗಿ ಕೇಳಿಸಿ, ಬೆಚ್ಚಿಬಿದ್ದು, ಮುಂದಕ್ಕೆ ಡೈವ್ ಮಾಡಿ, ಒಂದು ರೋಲ್ ಹೊಡೆದು ಮೊಣಕಾಲುಗಳ ಮೇಲೆದ್ದ.

ಬಲಗೈನಲ್ಲಿ 'ರಾಣಿ' ಪ್ರತ್ಯಕ್ಷವಾಗಿತ್ತು.

"ಬೇಡ ಗುರು... ಆ ಕೆಲಸ ಮಾಡಿ ನಮ್ಮನ್ನು ಪರ್ಮನೆಂಟ್ ಸ್ಮಶಾನ ವಾಸಿಗಳಾಗಿಸಿಬಿಡಬೇಡ" ಎಂದು ಜೋರಾಗಿ ಷೌಟ್ ಮಾಡಿದ ಚಂದನ್.

"ಏನೂ ಆಲೋಚಿಸಬೇಡ ಮಹೇಶ... ಟ್ರಿಗರ್ ಅದುಮಿಬಿಡು. ಡೈರೆಕ್ಟಾಗಿ ಹೋಗೋಣವೆಂದರೆ ಬೆಕ್ಕಿನ ನಡಿಗೆ ಕಲಿಯುತ್ತಿರುವೆನೆಂದು ಬಂದ!" ಅವನ ಹಿಂದೆಯೇ ಬರುತ್ತ ಹೇಳಿದ ವಿಜಯ್.

ಟ್ರಿಗರ್ ಮೇಲೆ ಬಿಗಿಯತೊಡಗಿದ ತೋರುಬೆರಳನ್ನು ಸಡಲಿಸಿದ ಮಹೇಶ. ಇಬ್ಬರ ಕಡೆಯೂ ಸೀರಿಯಸ್ಸಾಗಿ ನೋಡುತ್ತ, "ನೀವೇಕೆ ಬಂದಿರಿಲ್ಲಿ?" ಎಂದು ಪ್ರಶ್ನಿಸಿದ.

"ನಮ್ಮ ಹಣೆಬರಹ ಕತ್ತೆ ಕಾಯಲು ಹೋದರೆ ನಾವೇನು ಮಾಡುವುದು ಗುರು?" ಗೋಳೋ ಅಂದ ಚಂದನ್.

"ಷಟಪ್. ಕಚಡಾ ಕಾಮೆಂಟ್‌ಗಳನ್ನು ಬಿಟ್ಟು ಅದೇನು ಹೇಳಬೇಕೋ ಡೈರೆಕ್ಟಾಗಿ ಹೇಳಿ ಮುಗಿಸು." ಕೋಪದಿಂದ ನುಡಿದ ಮಹೇಶ.

ಆಗ ನೋಡಿದ ಅವರ ಭುಜಗಳಿಂದ ಇಳಿಬಿದ್ದಿದ್ದ ಏರ್‌ಬ್ಯಾಗ್‌ಗಳನ್ನು ಏನೋ ನಡೆದಿದೆ ಅನ್ನಿಸಿತು.

"ರಂಗೂನ್ ಪೊಲೀಸರ ಹಠ ತೀರಾ ಹೆಚ್ಚಾಗಿದೆ ಗುರು! ನಮ್ಮ ಸುಳಿವು ತಿಳಿಯಲು ನಾಯಿಗಳನ್ನು ರಂಗಕ್ಕಿಳಿಸಿದ್ದು ಸಾಗಿದೆ... ಸಾಲಾಗಿ ಹೋಟೆಲ್‌ಗಳ ಮೇಲೆ ಧಾಳಿ ಎಸಗುತ್ತಿದ್ದಾರೆ. ಏನೋ ಅದೃಷ್ಟ ಚೆನ್ನಾಗಿತ್ತು. ತಪ್ಪಿಸಿಕೊಂಡೆವು" ಅಂದ ಚಂದನ್.

ಮೌನವಾಗಿ ತಲೆ ಕುಣಿಸಿದ ಮಹೇಶ. ನಡೆದದ್ದನ್ನು ಅವರಿಗೆ ವಿವರಿಸಿದ.

"ಬೆಳಗಾಗುವುದರೊಳಗೆ ಸಿಟಿ ಬಿಡದಿದ್ದರೆ ನಮಗೆ ಇರುವ ಬೆಲೆ ಇರುವುದು ಜೈಲೊಂದರಲ್ಲೇ. ರಂಗೂನ್‌ನಲ್ಲಿ ಹೇಗೂ ನಮಗೆ ಕುಡಿಯಲು ನೀರು ಸಿಗದು... ಜಮ್ಮಾ ಲೇಕ್‌ನಲ್ಲಾದರೂ

ಸಿಗುವುದೇನೋ ನೋಡೋಣ ನಡಿ ಗುರು'' ಅಂದ ಚಂದನ್.

ಐದು ನಿಮಿಷಗಳ ನಂತರ ಟ್ರಾನ್ಸ್‌ಪೋರ್ಟ್ ಅರಸುತ್ತ ಹೆಜ್ಜೆ ಹಾಕತೊಡಗಿದರವರು.

## 10

''ಚಂದನ್... ನಾನೇನಾದರೂ ಅಲ್ಲಿ ಸಿಕ್ಕಿಬಿದ್ದರೆ ಅಲ್ಲಿ ಏನೇ ಮಾತಾಡಿಕೊಂಡರೂ ನಿಮಗೆ ಕೇಳಿಸುತ್ತದೆ'' ಅನ್ನುತ್ತ ಮ್ಯಾಚ್ ಬಾಕ್ಸ್ ಸೈರಝ್‌ನ ಒಂದು ಪರಿಕರವನ್ನು ಚಂದನ್ ಕೈನಲ್ಲಿರಿಸಿದ ಮಹೇಶ.

''ಬೇಡ ಗುರು... ನೀನು ಒಂಟಿಯಾಗಿ ಹೋಗಬೇಡ. ನಾವೂ ಬರುತ್ತೇವೆ'' ಅಂದ ಚಂದನ್.

''ಹೌದು ಮಹೇಶ್'' ಅಂದ ವಿಜಯ್.

''ಡೋಂಟ್‌ವರಿ ಫ್ರೆಂಡ್ಸ್, ನನ್ನ ಜೊತೆಗೆ ನೀವು ಬರುವಂತಿಲ್ಲ. ಸಮಯ ನೋಡಿ ಅಟಾಕ್ ಮಾಡಿ'' ಅನ್ನುತ್ತ ಏನು ಮಾಡಬೇಕೆಂಬುದನ್ನು ಅವರಿಗೆ ವಿವರಿಸಿದ ಮಹೇಶ.

ಮೂವರೂ ಜಮ್ಮಾ ಲೇಕ್ ಹತ್ತಿರದಲ್ಲೇ ಒಂದು ಪೊದೆಯ ಮರೆಯಲ್ಲಿ ಅಡಗಿ ಕುಳಿತಿದ್ದರು.

ಅಲ್ಲಿಗೆ ಸರಿಯಾಗಿ ಅರೆ ಫರ್ಲಾಂಗ್‌ನಷ್ಟು ದೂರದಲ್ಲಿತ್ತು ವಾಂಗ್ ಛೂನ ಸ್ಥಾವರ. ಇಪ್ಪತ್ತೈದು ಮಂದಿಯವರೆಗೆ ಮೆಷಿನ್‌ಗನ್ ಹಿಡಿದ ಗಾರ್ಡ್ಸ್ ಪಹರೆ ನಡೆಸಿದ್ದರು ಬಿಲ್ಡಿಂಗ್ ಸುತ್ತಲೂ.

ಅಲ್ಲಿನ ಪೊಜಿಷನ್ ಪೂರ್ತಿಯಾಗಿ ಅಸೆಸ್ ಮಾಡಿದ ಮೇಲೆ ಆ

ನಿರ್ಣಯ ತೆಗೆದುಕೊಂಡಿದ್ದ ಮಹೇಶ. ಜೊತೆಗೆ ಬರುತ್ತೇವೆಂದು ಹಠಹಿಡಿದಿದ್ದರು ಚಂದನ್ ಮತ್ತು ವಿಜಯ್.

ಮಹೇಶ ಸ್ಥಾವರದೊಳಗೇನಾದರೂ ಸಿಕ್ಕಿಬಿದ್ದರೂ ಆ ಸ್ಥಾವರವನ್ನು ಸಂಪೂರ್ಣವಾಗಿ ಧ್ವಂಸ ಮಾಡಲು ಬೇಕಾಗುವಷ್ಟು ಅಮ್ಯೂನಿಷನ್ ಅವರ ಬಳಿ ರೆಡಿಯಾಗಿತ್ತು.

ಮಹೇಶನ ಪ್ಲಾನ್ ಒಂದೇ... ಸಾಧ್ಯವಾದಷ್ಟು ಮೈಕ್ರೋಫಿಲಂ ರಿಕವರ್ ಮಾಡಲು ಪ್ರಯತ್ನಿಸಬೇಕು. ಇಲ್ಲದಿದ್ದರೆ ಸ್ಮ್ಯಾಷ್ ಮಾಡಿಬಿಡಬೇಕು.

ಮತ್ತೊಮ್ಮೆ ಏನು ಮಾಡಬೇಕೆಂದು ಅವರಿಗೆ ಸೂಚಿಸಿ ಅಲ್ಲಿಂದ ಹೊರಟ ಮಹೇಶ.

ಗಾಢ ನಿಟ್ಟುಸಿರುಗರೆದು, ಸಿಗರೇಟು ಹೊತ್ತಿಸಿಕೊಂಡ ಚಂದನ್ ತನ್ನ ಕೈನಲ್ಲಿದ್ದ ಆಯುಧದ ಕಡೆಗೆ ತೀಕ್ಷ್ಣವಾಗಿ ನೋಡಿದ.

ಮಹೇಶ ಒಂದು ನಿರ್ಧಾರ ತೆಗೆದುಕೊಂಡರೆ ಮುಗಿಯಿತು. ಅದಕ್ಕೆ ವಿರುದ್ಧವೆನ್ನುವುದೇ ಇಲ್ಲ. ಎಷ್ಟೇ ಅವಾಂತರಗಳು ಎದುರಾದರೂ ಅದನ್ನು ಜಾರಿಗೊಳಿಸಲೇಬೇಕು.

ಹತ್ತು ನಿಮಿಷ ಅಲ್ಲೇ ಇದ್ದು, ಪೊದೆಗಳ ಮರೆಯಲ್ಲಿ ಮುಂದಕ್ಕೆ ಹೋಗತೊಡಗಿದರು.

ಮಹೇಶ ಅಷ್ಟೊತ್ತಿಗೆ ಬಹಳ ಮುಂದೆ ಹೋಗಿಬಿಟ್ಟಿದ್ದ. ಜಮ್ಮಾ ಲೇಕ್ ತೀರದಲ್ಲೇ ನಡೆಯುತ್ತ ಆಗಾಗ ನಿಂತು ಪರಿಸರವನ್ನು ಎಚ್ಚರಿಕೆಯಿಂದ ಗಮನಿಸಿ ಹೆಜ್ಜೆ ಹಾಕುತ್ತಿದ್ದ.

ಸ್ಥಾವರವನ್ನು ಸಮೀಪಿಸುವ ವೇಳೆಗೆ ಅದೇಕೋ ತಳಮಳ ಕಾಣಿಸಿಕೊಂಡಿತು ಮನದಲ್ಲಿ. ಯಾರೋ ರಹಸ್ಯವಾಗಿ ತನ್ನನ್ನು ಗಮನಿಸುತ್ತಿದ್ದಾರೆಂಬ ಆಲೋಚನೆಯೊಂದು ಅವನನ್ನು ಫುಲ್ ಅಲರ್ಟಾಗುವಂತೆ ಮಾಡಿತು.

ಆದರೂ ಲೆಕ್ಕಿಸದೆ ಇನ್ನೂ ಹತ್ತು ಹೆಜ್ಜೆ ಮುಂದೆ ಬಂದ.

ಸರಿಯಾಗಿ ಆಗಲೇ 'ಅಪಾಯ' ಎಂದು ಗಂಟಲುರಿಯುವಂತೆ

ಬೊಂಬ್ಡಾ ಮಾಡತೊಡಗಿತು ಅಂತರಾತ್ಮ. ಸುತ್ತಲೂ ಇದ್ದ ಪೊದೆಗಳು ಗಲಗಲ ಶಬ್ದ ಮಾಡಿದವು.

ಫಾಸ್ಟ್ ಸ್ಪಿನ್ ಮಾಡಿ ಹಿಂದಕ್ಕೆ ತಿರುಗಿದ.

ಪೊದೆಗಳ ಮರೆಯಿಂದ ಹೊರಬಿದ್ದ ಹತ್ತು ಜನ ದೃಢಕಾಯರು ಅವನನ್ನು ಸುತ್ತುವರೆದರು.

''ಡೋಂಟ್ ಮೂವ್. ಅಲ್ಲಾಡಿದರೆ ಸಾಯುವೆ'' ಎಂದು ಪಿಸ್ತೂಲು ಗುರಿ ಹಿಡಿದು ಎದುರಿಗೆ ಬಂದ ಚೆಂಗ್‌ಲೀ.

ಪ್ರತಿಭಟಿಸುವ ಉದ್ದೇಶವಾಗಲಿ, ತಪ್ಪಿಸಿಕೊಳ್ಳುವ ಇರಾದೆಯಾಗಲಿ ಇರಲೇ ಇಲ್ಲ ಮಹೇಶನಿಗೆ. ಆದರೆ ಇಷ್ಟು ಬೇಗ ಅಪಾಯ ಅಮರಿಕೊಂಡೀತೆಂದು ಕೊಂಡಿರಲಿಲ್ಲ ಅವನು.

ಆದರೂ ಇದೂ ಒಂದು ಲೆಕ್ಕದಲ್ಲಿ ಒಳ್ಳೆಯದೇ. ಇಲ್ಲಿ ನಡೆಯುವುದೆಲ್ಲ ಚಂದನ್‌ಗೆ ಸ್ಪಷ್ಟವಾಗಿ ತಿಳಿಯುತ್ತದೆ.

ನೆಮ್ಮದಿಯಾಗಿ ಎರಡು ಕೈಗಳನ್ನೂ ಮೇಲೆತ್ತಿ ಬಿಟ್ಟ ಮಹೇಶ ಸರಂಡರ್ ಆಗುತ್ತಿರುವವನಂತೆ.

ಹೆಮ್ಮೆಯಿಂದ ಎರಡು ಸಲ ಉಬ್ಬಿತು ಚೆಂಗ್‌ಲೀ ಎದೆ.

''ಏನು ನೋಡುತ್ತಿರುವಿರಿ... ಕರೆದುಕೊಂಡು ನಡೆಯಿರಿ'' ಅನುಚರರಿಗೆ ಆಜ್ಞಾಪಿಸಿದ.

ತಕ್ಷಣ ಮಹೇಶನನ್ನು ಮುನ್ನಡೆಸಿಕೊಂಡು ಸ್ಥಾವರದೊಳಕ್ಕೆ ಕರೆದೊಯ್ದರು ಅನುಚರರು.

★

'ವೆಲ್‌ಕಂ... ವೆಲ್‌ಕಂ ಡಿಯರ್ 'ಜಂಕ್''!'' ಅನ್ನುತ್ತ ಅವನೆದುರಿಗೆ ಬಂದ ವಾಂಗ್ ಛೂ.

ವಿಶಾಲವಾದ ಹಾಲೊಂದರೊಳಕ್ಕೆ ಮಹೇಶನನ್ನು ಕರೆದುಕೊಂಡು ಹೋಗಿದ್ದರು. ಆ ಹಾಲ್‌ನಲ್ಲಿ ಸಾಲಾಗಿ ಹಾಕಿದ್ದ ಮುವ್ವತ್ತು ಕುಷನ್

ಚೇರ್‌ಗಳ ಮೇಲೆ ಆಸೀನರಾಗಿದ್ದರು ಮೈಕ್ರೋಫಿಲಂ ಹರಾಜಿನಲ್ಲಿ ಕೊಳ್ಳಲು ಬಂದಿದ್ದ ವಿವಿಧ ದೇಶಗಳ ಕ್ರಿಮಿನಲ್ ಸಂಸ್ಥೆಗಳ ಪ್ರತಿನಿಧಿಗಳು.

ಅವರೆಲ್ಲರ ಮುಖಗಳ ಮೇಲೂ ಕಣ್ಣಾಡಿಸಿದ ಮಹೇಶ.

ಅವನ ಮೂವ್‌ಮೆಂಟ್‌ನಲ್ಲಿ ತುಸು ಅಸಹಜತೆ ಕಂಡರೂ ಷೂಟ್ ಮಾಡಲು ರೆಡಿಯಾಗಿತ್ತು ಚೆಂಗ್‌ಲೀ ಬೆಟಾಲಿಯನ್. ಅವಕಾಶ ಮನದಲ್ಲಿ ಯಾವುದೋ ಅದೃಷ್ಟದ ರೂಪದಲ್ಲಿ ಬಂದ ವಿನಹ ತಾನು ಮಾಡುವುದೇನೂ ಇಲ್ಲಿ? ಅಷ್ಟು ಜನರನ್ನು ನೋಡಿ ನಿಜಕ್ಕೂ ಆಘಾತಗೊಂಡಿದ್ದ ಮಹೇಶ. ಒಂದು ದೇಶ ಹಾಳುಗೆಡವಲು ಅದೆಷ್ಟು ಜನರಿದ್ದಾರೆ!

ಸಾಲಿನಲ್ಲಿ ಎಲ್ಲರಿಗಿಂತಾ ಕೊನೆಯಲ್ಲಿ ಕುಳಿತಿದ್ದ ಗೋಲ್ಡನ್ ಗ್ಯಾಂಗ್ ಸುಪ್ರೀಂ ಕಮಾಂಡರ್ ಒಬ್ಬನನ್ನು ಗಮನಿಸಿ, ಕಿರುನಗೆ ಬೀರಿದ ಮಹೇಶ.

''ಏಕೆ ಡಿಯರ್ ಕಿಲ್ ಮಾಸ್ಟರ್... ಇಷ್ಟು ಜನರಲ್ಲಿ ಒಟ್ಟಿಗೇ ನೋಡಿ ಗಂಟಲಿಗೆ ಗರಬಡಿದಂತಾಯಿತೇ?'' ಅಂದ ವಾಂಗ್ ಛೂ.

ಆಗ ಮಹೇಶ ಜೋರಾಗಿ ನಕ್ಕ ಮಹೇಶ. ''ಸಾರಿ ಫ್ರೆಂಡ್ ವಾಂಗ್ ಛೂ. ಮೃತ್ಯುವಿನ ತೆಕ್ಕೆಗೆ ಇಷ್ಟು ಜನ ಒಟ್ಟಿಗೆ ಬಂದಿದ್ದಾರಲ್ಲ ಎಂದು ವ್ಯಸನವಾಗುತ್ತಿದೆ' ಅಂದ.

''ಮಿಸ್ಟರ್ ಮಹೇಶ್, ಜೈಲಿನಿಂದ ಪಾರಾದೆಯೆಂದು ತಿಳಿದೊಡನೆ ಇಲ್ಲಿಗೇ ಬರುವೆಯೆಂದು ನಾನು ಲೆಕ್ಕ ಹಾಕಿದೆ. ನನ್ನ ಲಾಜಿಕ್ ಎಂದಿನಂತೆ ಕರೆಕ್ಟಾಯಿತು. ಆಲ್‌ರೈಟ್. ಎಲ್ಲಿ ನಿನ್ನ ಸ್ನೇಹಿತರು?'' ಕೇಳಿದ ವಾಂಗ್ ಛೂ.

''ನಿಮ್ಮನ್ನು ಧೂಳಿಪಟ ಮಾಡಲು ನಾನೊಬ್ಬ ಸಾಕು ವಾಂಗ್ ಛೂ... ಅವರ ಅವಶ್ಯಕತೆಯಿಲ್ಲ'' ಅಂದ ಮಹೇಶ.

''ಐ.ಸೀ. ನಿನ್ನ ಬಾಯಿ ಹೇಗೆ ಬಿಡಿಸಬೇಕೆಂದು ನನಗೆ ಚೆನ್ನಾಗಿ ಗೊತ್ತು.'' ಹಲ್ಲು ಕಡಿಯುತ್ತ ಹೇಳಿದ ವಾಂಗ್ ಛೂ.

''ಅದು ನಿನ್ನಿಂದಾಗದ ಕೆಲಸ ಬಿಡು. ಇಷ್ಟು ವರ್ಷ ತೆರೆಯ ಹಿಂದೆಯೇ ಇದ್ದು ಸ್ಟೋರಿ ಡೈರೆಕ್ಟ್ ಮಾಡಿದ ನಿನ್ನ ಕೈಗೆ ಮೈಕ್ರೋಫಿಲಂ ಮೇಲೆ ಬಿದ್ದೊಡನೆ ನಿನ್ನ ಅವನತಿ ಪ್ರಾರಂಭವಾಯಿತು ವಾಂಗ್ ಭೂ. ಭಾರತಕ್ಕೆ ಬಂದು ನನಗೆ ತಡೆಯೊಡ್ಡಲು ಪ್ರಯತ್ನಿಸಿದಾಗಲೇ ನಿನಗೆ ನೂರು ವರ್ಷ ತುಂಬಿತು. ನನ್ನ ಮೇಲೆ ಕೊಲೆಯ ಆರೋಪ ಹೊರಿಸಿ ಜೈಲಿಗೆ ತಳ್ಳಿಸಿದ ದಿನವೇ ಸ್ಮಶಾನದಲ್ಲಿ ನಿನಗೊಂದು ಸಮಾಧಿ ರೆಡಿಯಾಯಿತು.'' ಗಂಭೀರವಾಗಂದ ಮಹೇಶ.

ವಿಕಟವಾಗಿ ನಕ್ಕ ವಾಂಗ್ ಭೂ.

''ಬ್ಲಡಿ ಫೂಲ್. ಈಗ ನೀನು ನನ್ನ ಕೈನಲ್ಲಿರುವ ಬಂಧಿ. ಇಲ್ಲಿಯವರೆಗೆ ಈ ವಾಂಗ್ ಭೂಗೆ ಛಾಲೆಂಜ್ ಮಾಡಿದವರಿಲ್ಲ. ಈ ಸಲವೂ ಫೈನಲ್ ವಿಕ್ಟರಿ ನನ್ನದೇ. ನನ್ನ ಬಲೆಯಿಂದ ಪ್ರತಿಸಲವೂ ತಪ್ಪಿಸಿಕೊಂಡೆ ಅದೃಷ್ಟವಶಾತ್. ಆದರೆ... ನಿನ್ನ ಹಣೆಬರಹದ ನಿರ್ಧಾರ ನನ್ನ ಕೈಯಲ್ಲಿ ಎಂದೋ ಬರೆದಿದ್ದಾನೆ ದೇವರು. ನಿನ್ನನ್ನೀಗ ಆ ದೇವರೂ ಕಾಪಾಡಲಾರ.'' ಮಹೇಶನಷ್ಟೇ ಗಂಭೀರವಾಗಿ ಹೇಳಿದ ವಾಂಗ್ ಭೂ.

''ಐ ಯಾಮ್ ಸಾರಿ ಟು ಸೇ ದಟ್ ಯು ಆರ್ ರಾಂಗ್ ಡಿಯರ್ ವಾಂಗ್ ಭೂ, ಈ ಸಲ ನಿನ್ನ ಹಿಸ್ಟರಿ ತಿರುವು ಮುರುವಾಗಲಿದೆ ಎಂದು ಹೇಳಲು ವ್ಯಥೆಪಡುತ್ತೇನೆ.

''ನಿನ್ನ ಬಳಿ ಏನೋ ಇದೆಯೆಂದು ಇಲ್ಲಿಯವರೆಗೆ ಬಂದು, ಕೈಯಾರೆ ಸಾವನ್ನು ಆಹ್ವಾನಿಸಿದ ಈ ನಿನ್ನ ಸ್ನೇಹಿತರು ಇಲ್ಲಿಯೇ ಸಮಾಧಿಯಾಗುತ್ತಾರೆಂದು ಘಂಟಾಘೋಷವಾಗಿ ಸಾರುತ್ತೇನೆ.'' ನಿರ್ಲಕ್ಷ್ಯವಾಗಿ ನುಡಿದ ಮಹೇಶ.

''ವೆಲ್ ವೆಲ್... ನಿನ್ನ ಧೈರ್ಯಕ್ಕೆ ನಿಜಕ್ಕೂ ಮೆಚ್ಚುಗೆಯಾಗುತ್ತಿದೆ. ಯು ಆರ್ ರಿಯಲಿ ಗ್ರೇಟ್... ನಿನಗೆ ನೀನೇ ಸಾಟಿ ಎಂದೂ ಒಪ್ಪುವೆ. ಆದರೆ... ಈ ವಾಂಗ್ ಭೂ ಮುಂದೆ ನಿನ್ನಾಟ ಸಾಗದು. ಏಜೆಂಟ್ ಕೆ-7, ನಾನು ಸನ್ನೆ ಮಾಡಿದರೆ ಕ್ಷಣ ಹಿಡಿಯದು ನಿನ್ನ ಆಯುಷ್ಯ

ಅರ್ಥಾಂತರಗೊಳ್ಳಲು!'' ಅಂದ ವಾಂಗ್ ಭೂ.

''ನೋ ಸರ್...ಯು ಕಾಂಟ್ ಡೂ ದಟ್! ನನ್ನ ಸರ್ವೀಸ್‌ನಲ್ಲಿ ಎಷ್ಟೆಷ್ಟೋ ಜನರನ್ನು ನೋಡಿಬಿಟ್ಟಿದ್ದೇನೆ. ಅವರಿಗಿಂತಲೂ ಪ್ರತಿಭಾಶಾಲಿಯೇನಲ್ಲ ನೀನು. ದೇಶವನ್ನು ಸರ್ವನಾಶ ಮಾಡುವ ನಿನ್ನಾಶಯ ಈ ಸಲ ನೆರವೇರದು. ಫೈನಲ್ ವಿಕ್ಟರಿ ಈಸ್ ಮೈನ್'' ಅಂದ ಮಹೇಶ ಕೂಲಾಗಿ.

ಆ ಮುವ್ವತ್ತು ಜನ ಬಿಡ್ಡರ್ಸ್ ಹೇಗಿದ್ದವರು ಹಾಗೆಯೇ ಬೊಂಬೆಗಳಂತೆ ಕುಳಿತು ಅವರ ಮಾತುಗಳನ್ನಾಲಿಸುತ್ತಿದ್ದರು. ಅವರ ಮುಕ್ಕಾಲು ಜನರಿಗೆ ಗೊತ್ತು ಮಹೇಶನ್ಯಾರೆಂದು, ಅವನ ಕೆಪಾಸಿಟಿ ಏನೆಂದು. ತಿಳಿಯದವರು ಮಾತ್ರ ಮಿಕ ಮಿಕ ನೋಡುತ್ತಿದ್ದರು.

ಅವರೆಲ್ಲರಿಗಿಂತಾ ಹೆಚ್ಚು ಕಂಗಾಲಾದವರಲ್ಲಿ ಇಬ್ಬರೇ ಇಬ್ಬರು. ಗೋಲ್ಡನ್‌ಗ್ಯಾಂಗ್‌ನ ಸುಪ್ರೀಂ ಕಮಾಂಡರ್ ಮತ್ತವನ ಅಸಿಸ್ಟೆಂಟ್. ಹಿಂದೆ ಅದೆಷ್ಟೋ ಸಲ ಅವರ ಸ್ಥಾವರಗಳನ್ನು, ಪ್ರಯೋಗಗಳನ್ನು ಕೊನೆಯ ನಿಮಿಷದಲ್ಲಿ ಲಗ್ಗೆ ಹಾಕಿ, ಧೂಳಿಪಟವೆಸಗಿದ್ದವನು ಕಿಲ್ ಮಾಸ್ಟರ್ ಕೆ-7.

ಈಗಲೂ ಹಾಗೇ ಮಾಡನೆಂದು ಹೇಳಲಾಗದು. ಅವನನ್ನು ಬಹಳ ಹೊತ್ತು ಉಸಿರಾಡಲು ಬಿಡುವುದೇ ತಪ್ಪು.

''ಲುಕ್ ಮಿಸ್ಟರ್ ಮಹೇಶ, ನೀನು ಯಾವುದಕ್ಕಾಗಿ ಬಂದಿರುವೆಯೋ... ಆ ಮೈಕ್ರೋಫಿಲಂ... ಇದೋ ಇಲ್ಲಿದೆ ನೋಡು'' ಅನ್ನುತ್ತ ಕೋಟ್‌ಜೇಬಿನಿಂದ ತೆಗೆದು ತೋರಿಸಿ, ಮತ್ತೆ ಅಲ್ಲೇ ಹಾಕಿಕೊಂಡ ವಾಂಗ್ ಭೂ.

ಅದೆಲ್ಲಿದೆಯೆಂದು ತಿಳಿದುಕೊಳ್ಳುವ ಮಹೇಶನ ಬಯಕೆ ವಾಂಗ್ ಭೂ ಓವರ್ ಕಾನ್ಫಿಡೆನ್ಸ್‌ನಿಂದ ತನ್ನಂತಾನೇ ನೆರವೇರಿತ್ತು. ಥ್ಯಾಂಕ್ಸ್ ಟು ಹಿಮ್. ಇನ್ನದನ್ನು ವಶಪಡಿಸಿಕೊಳ್ಳಬೇಕಾದ್ದಷ್ಟೇ ತನ್ನ ಕೆಲಸ.

''ಮೈ ಫ್ರೆಂಡ್! ನೀನೊಬ್ಬ ಡೇರ್ ಡೆವಿಲ್ ಬಿರುದಾಂಕಿತನೆಂದು ನನಗೆ ಗೊತ್ತು. ಆದರೂ ಕೊನೆಯ ಗೆಲವು ನನ್ನದೇ'' ಅಂದ ಸಗರ್ವ

ನಗೆಯೊಡನೆ ಹೇಳಿದ ವಾಂಗ್ ಭೂ.

"ಮಿಸ್ಟರ್ ವಾಂಗ್ ಭೂ, 'ಜಿಂಕೆ' ಪ್ರಾಣ ಸಹಿತವಾಗಿರುವಂತಿಲ್ಲ... ಇರಬಾರದು. ಫಸ್ಟ್ ಷೂಟ್ ಹಿಮ್... ಕಿಲ್ ಹಿಮ್. ಇಮ್ಮೀಡಿಯೆಟ್ ಆಗಿ ಕೊಂದುಬಿಡು" ಅಂದ ಗೋಲ್ಡನ್ ಗ್ಯಾಂಗ್ ಸುಪ್ರೀಂ ಕಮಾಂಡರ್.

"ಎಸ್. ಕಿಲ್ ಮಾಸ್ಟರ್ ಬದುಕಿರಬಾರದು. ಅವನಿದ್ದಷ್ಟೂ ನಮಗೆಲ್ಲರಿಗೂ ತೊಂದರೆ. ಕಿಲ್ ಹಿಮ್." ವಾಂಗ್ ಭೂ ತಂಡದ ಪ್ರತಿನಿಧಿ ಮೇಲೆದ್ದು ಕೂಗಿಕೊಂಡ.

ಅವರೂ ಮಹೇಶನ ಕೈನಲ್ಲಿ ಸಾಕಷ್ಟು ಸಲ ರಿಪೇರಿಯಾಗಿದ್ದವರು.

ಅವರೆಲ್ಲರ ಕಡೆ ನೋಡಿ ಮೌನವಾಗಿ ತಲೆ ಕುಣಿಸಿದ ವಾಂಗ್ ಭೂ.

"ಆಲ್‌ರೈಟ್ ಫ್ರೆಂಡ್ಸ್... ನೀವಿಷ್ಟೊಂದು ಕೇಳುತ್ತಿರುವಾಗ ಆಗುವುದಿಲ್ಲ ಅನ್ನಲು ನನಗೆ ಬಾಯೇ ಬರುತ್ತಿಲ್ಲ" ಎಂದು ಹೇಳಿ ಮಹೇಶನ ಕಡೆಗೆ ತಿರುಗಿದ. "ಪ್ಚ್... ಅಯ್ಯೋ ಪಾಪ. ನಿನ್ನ ಆಶಯಗಳು ನೆರವೇರುವ ಮೊದಲೇ ಸಾಯುತ್ತಿರುವೆ. ಐ ರಿಯಲಿ ಫೀಲ್ ಸ್ಯಾಡ್ ಫಾರಿಟ್. ಪ್ರಾರ್ಥಿಸು... ನಿನ್ನ ಮನೆ ದೇವರನ್ನು ಪ್ರೇ ಮಾಡು" ಎಂದು ಪಿಸ್ತೂಲನ್ನು ಮಹೇಶನೆದುರಿಗೆ ಗುರಿ ಹಿಡಿದ.

ವಾಂಗ್ ಭೂ ಅಷ್ಟು ಬೇಗ ತನ್ನ ಎಕ್ಸಿಕ್ಯೂಷನ್ ನಿರ್ಧಾರ ತೆಗೆದುಕೊಳ್ಳುತ್ತಾನೆಂದುಕೊಂಡಿರಲಿಲ್ಲ ಮಹೇಶ. ಮುಗಿಯಿತು ತನ್ನ ಕಥೆ ಎಂದೇ ಅಂದುಕೊಂಡ ಅವನು. 'ಜಿಂಕೆ'ಯ ಫೈನಲ್ ಚಾಪ್ಟರ್ ಇಲ್ಲೇ ಎಂಡ್.

ಎಲ್ಲರೂ ಉಸಿರು ಬಿಗಿ ಹಿಡಿದು ನೋಡತೊಡಗಿದ್ದರು. ಯಾವುದೇ ಕ್ಷಣದಲ್ಲಾದರೂ ಫೈರ್ ಆಗಲು ಸನ್ನದ್ಧವಾಗಿತ್ತು ವಾಂಗ್ ಭೂ ಕೈನಲ್ಲಿದ್ದ ಪಿಸ್ತೂಲು.

ಅದೇ ಕ್ಷಣ 'ಧನೇಲ್... ಧನೇಲ್.' ಎಂದು ಭೀಕರ ಸ್ಫೋಟದ ಶಬ್ಧಗಳು ಕೇಳಿ ಬಂದವು.

ಬೆಚ್ಚಿಬಿದ್ದ ವಾಂಗ್ ಭೂ.

ಅದುರಿಹೋದರು ಅಲ್ಲಿದ್ದ ಕ್ರೈಂ ವರ್ಲ್ಡ್ ಕಿಂಗ್ ಪಿನ್ಸ್.

ಮತ್ತೊಮ್ಮೆ ಕೇಳಿಬಂತು ಅದೇ ಮಾದರಿಯ ಇನ್ನೂ ಪವರ್‌ಫುಲ್ ಎಕ್ಸ್‌ಪ್ಲೋಷನ್ ಶಬ್ದ.

ಅವುಗಳ ಹಿಂದೆಯೇ ಕೆಲವರ ಆರ್ತನಾದಗಳೂ ಗಾಳಿಯಲ್ಲಿ ತೇಲಿ ಬಂದು, ಎಲ್ಲರ ಕಿವಿಗಳಿಗೆ ರಪ್ಪನೆ ರಾಚಿದವು.

'ವಾಟಿಸ್ ದಟ್? ಹೋಗಿ... ನೀವೆಲ್ಲ ಹೋಗಿ ಅದೇನೋ ನೋಡಿ'' ಎಂದು ಜೋರು ಧ್ವನಿಯಲ್ಲಿ ಆಜ್ಞಾಪಿಸಿದ ಮಹೇಶ.

ಅಲ್ಲಿಯವರೆಗೆ ಮಹೇಶನನ್ನು ಸುತ್ತುವರೆದಿದ್ದ ಚೆಂಗ್‌ಲೀ ಮತ್ತು ಅನುಚರರು ಧಡದಢನೆ ಹೊರಕ್ಕೋಡಿದರು.

ವಿರಾಮವಿಲ್ಲದೆ ಕೇಳಿಸುತ್ತಿದ್ದವು ಹೊರಗೆ ಬಾಂಬ್ ಸ್ಫೋಟದ ಶಬ್ಧಗಳು.

ಸರಿಯಾದ ಸಮಯದಲ್ಲಿ ತಮ್ಮ ವಿಧ್ವಂಸಕ ಕೆಲಸ ಶುರು ಮಾಡಿದ್ದರು ಚಂದನ್ ಮತ್ತು ವಿಜಯ್. 'ಮೇ ಗಾಡ್ ಬ್ಲೆಸ್ ದೆಮ್'' ಅಂದುಕೊಂಡ ಮಹೇಶ ಮನದಲ್ಲೇ.

ಅಲ್ಲಿಯವರೆಗೆ ಏನು ನಡೆಯಿತೆಂದು ಅರ್ಥವಾಗದೆ, ಒಬ್ಬರ ಮುಖಗಳನ್ನೊಬ್ಬರು ನೋಡಿಕೊಂಡ ಪ್ರತಿನಿಧಿಗಳೆಲ್ಲಾ ಪ್ರಾಣ ಭಯದಿಂದ ಮೇಲೆದ್ದವರೇ ತಲಾ ಒಂದೊಂದು ಕಡೆಗೆ ಓಡತೊಡಗಿದರು, ಕಂಟಿನ್ಯೂಯಸ್ ಎಕ್ಸ್‌ಪ್ಲೋಷನ್‌ನಿಂದ ಕಂಗಾಲಾಗಿ.

''ಸ್ಟಾಪ್...ಸ್ಟಾಪ್...ನೀವೆಲ್ಲಾ ಹೋಗಬೇಡಿ... ಇಲ್ಲೇ ಇರಿ'' ಎಂದು ಅವರ ಕಡೆಗೆ ನೋಟ ತಿರುಗಿಸಿದ ವಾಂಗ್ ಛೂ.

ಬಂದೇ ಬಂತು ಮಹೇಶ ಕಾಯುತ್ತಿದ್ದ ಆ ಅವಕಾಶ.

ಇಮ್ಮಿಡಿಯೆಟ್ಟಾಗಿ ಅದನ್ನು ಯುಟಿಲೈಸ್ ಮಾಡಿಕೊಂಡ 'ಜಿಂಕೆ'.

ಡೇಗೆಯಂತೆ ಗಾಳಿಯಲ್ಲಿ ಹಾರಿದ್ದ ಅವನು ಪಾದಗಳಿಂದ ಬಲವಾಗಿ ನೆಲ ಪ್ರೆಸ್ ಮಾಡಿ. ತನ್ನೆಲ್ಲ ಶಕ್ತಿ ಪಾದಗಳಲ್ಲಿ ಕೇಂದ್ರಿಕರಿಸಿಕೊಂಡು, ಭಯಂಕರ ಕುಂಗ್‌ಫು ಸಿಂಹನಾದ ಬಾಯಿಂದ ಹೊರ ಬರುತ್ತಿದ್ದಂತೆ, ಡೆಡ್ಲಿ ಫ್ಲೈಯಿಂಗ್ ಕಿಕ್ ಅಪ್ಲೆ ಮಾಡಿದ ವಾಂಗ್ ಛೂ ಎದೆಗೆ.

ಧನ್ ಎಂದು ಬಂದಿತ್ತು ಶಬ್ಧ, ಪಾದಗಳು ಸಂಪರ್ಕಿಸಿದಾಗ.

ರೋಡ್ ರೋಲರ್ ಒಂದು ಎದೆಯ ಮೇಲೆ ಹಾದು ಹೋದಂತಾಗಿತ್ತು ವಾಂಗ್ ಭೂಗೆ. ಕೈನಲ್ಲಿದ್ದ ಪಿಸ್ತೂಲು ಜಾರಿ ಹೋಗಿತ್ತು. ಯಾರೋ ಎತ್ತಿಸೆದಂತೆ ಹತ್ತಡಿ ದೂರ ಹಾರಿ ಪಿಲ್ಲರ್ ಒಂದಕ್ಕೆ ಡೀ ಕೊಟ್ಟು ಕೆಳಕ್ಕುರುಳಿದ್ದ. ಮೂಗು, ಬಾಯಿ, ಕಿವಿಗಳಿಂದ ಏಕ ಕಾಲದಲ್ಲಿ ಪ್ರವಾಹದಂತೆ ನುಗ್ಗಿತ್ತು ರಕ್ತ... ಆದರೂ ಅಷ್ಟಕ್ಕೆ ಸುಮ್ಮನಾಗಲಿಲ್ಲ ಮಹೇಶ.

ನೆಲ ತಲುಪಿದೊಡನೆ ಮತ್ತೆ ಮೇಲೆ ನೆಗೆದು, ಮಂಡಿ ಮಡಚಿ ನೇರ ವಾಂಗ್ ಭೂ ಗಂಟಲ ಮೇಲಿಳಿಸಿದ.

ಫಟ್ ಎಂದು ಒಡೆದು ಹೋದವು ಅವನ ಗಂಟಲ ನರಗಳು. ರಕ್ತ ಧಾರಾಕಾರವಾಗಿ ಹೊರಬರತೊಡಗಿದಂತೆ ಐದು ಕ್ಷಣ ವಿಲವಿಲ ಒದ್ದಾಡಿ, ಹೆಣವಾಗಿದ್ದ. ಫೈನಲ್ ವಿಕ್ಟರಿ ತನ್ನದೇ ಎಂದು ನಿಮಿಷದ ಹಿಂದೆ ಬೀಗಿದ್ದ ಬರ್ಮಾ ಅಂಡರ್ ವರ್ಲ್ಡ್ ಕಿಂಗ್ ಪಿನ್ ವಾಂಗ್ ಭೂ.

ತಕ್ಷಣ ಅವನ ಜೇಬಿನಿಂದ ಮೈಕ್ರೋಫಿಲಂ ತೆಗೆದು, ತನ್ನ ಜೇಬಿಗೆ ಹಾಕಿಕೊಂಡ ಮಹೇಶ. ಆಗಲೇ ಆ ಹಾಲ್‌ನೊಳಕ್ಕೆ ಬಂದ ಒಬ್ಬ ಮೆಷಿನ್‌ಗನ್ ಹೀರೋ.

ಅವನನ್ನು 'ರಾಣಿ'ಗೆ ಎರೆಯಾಗಿಸಿ ಅವನ ಮೆಷಿನ್‌ಗನ್ ಬಾಚಿದ ಮಹೇಶ.

ಎತ್ತ ಹೋಗುವುದೆಂದು ಅರ್ಥವಾಗದೆ ಹುಚ್ಚು ಹಿಡಿದವರಂತೆ ಓಡುತ್ತಿದ್ದ ವಿವಿಧ ದೇಶಗಳ ಪ್ರತಿನಿಧಿಗಳನ್ನು... ಲೆಕ್ಕ ಹಾಕಿಕೊಂಡು... ಒಬ್ಬರನ್ನೂ ಬಿಡದಂತೆ ಮುಗಿಸಿದ ಮಹೇಶ.

ಚಂದನ್, ವಿಜಯ್ ಬಾಂಬ್‌ಗಳನ್ನು ಲಾಂಚ್ ಮಾಡುತ್ತ ಸ್ಥಾವರದಲ್ಲಿ ಅಲ್ಲೋಲ ಕಲ್ಲೋಲವನ್ನೇ ಸೃಷ್ಟಿಸಿದ್ದರು. ಸಿಕ್ಕವರನ್ನು ಸಿಕ್ಕಂತೆಯೇ ಕೊಲ್ಲುತ್ತಾ ಮಾರಣ ಹೋಮವನ್ನೇ ಸೃಷ್ಟಿಸಿದ್ದರು.

ಧನೇಲ್... ಧನೇಲ್ ಎಂಬ ಶಬ್ದ ಮಾಡುತ್ತಾ ಕೂಗು, ಸಾವಿನಾಕ್ರಂದನಗಳಿಂದ ತುಂಬಿ ಹೋಯಿತು ಆ ಪ್ರದೇಶ. ಕಪ್ಪು ಹೊಗೆ ಆಕಾಶದ ಕಡೆಗೆ ಚಿಮ್ಮತೊಡಗಿತು. ಎಲ್ಲ ಕಡೆ ತನ್ನ ಕಣ್ಣಾಲಿಗೆ ಚಾಚುತ್ತ

ಸಿಕ್ಕಿದ್ದನ್ನು ಸಿಕ್ಕಿದಂತೆಯೇ ಸ್ವಾಹಾ ಮಾಡತೊಡಗಿದ ಅಗ್ನಿದೇವ.

ತನ್ನ ಮೆಷಿನ್‌ಗನ್‌ಗೆ ಕೆಲಸ ಕೊಟ್ಟ ಮಹೇಶ.

ಗರ್ಝ್‌ರ್ಝ್‌ರ್ಝ್... ಎಂದು ವಿರಾಮವಿಲ್ಲದೆ ಗರ್ಜಿಸಿತು ಮೆಷಿನ್ ಗನ್. ಗೋಲ್ಡನ್ ಗ್ಯಾಂಗ್‌ನ ಪ್ರತಿನಿಧಿಗಳು ಮಾತ್ರ ಕಣ್ಣಿಗೆ ಬೀಳದಿರಲು, ಅಲ್ಲೆಲ್ಲ ಹುಡುಕಾಡಿದ ಮಹೇಶ.

ಬಹುಶಃ ಬಾಂಬ್ ಸ್ಫೋಟದ ಶಬ್ದ ಕೇಳಿಸಿದ ಕೂಡಲೇ ಮೇಲೆದ್ದು ಬಿಟ್ಟಿದ್ದಾರೆ ಬಾಸ್ಟರ್ಡ್ಸ್. ಎಷ್ಟೇ ಆಗಲಿ ಅನುಭವಸ್ಥರು. ಇಲ್ಲೇ ಇದ್ದರೆ ಧೂಳಿಪಟವಾಗುವದು ಗ್ಯಾರಂಟಿ ಎಂದು ಉಡೀಸ್ ಆಗಿಬಿಟ್ಟಿದ್ದಾರೆ. ಪ್ರಾಣ ಇದ್ದರೆ ಮೈಕ್ರೋ ಫಿಲಂ ಇನ್ನಾರ ಬಳಿಯೋ ಕೊಳ್ಳಬಹುದೆಂಬ ಇರಾದೆಯೇನೋ.

ಆಲ್‌ಮೋಸ್ಟ್ ಒಂದು ಗಂಟೆ ಕಾಲ ನಡೆಯಿತು ಹೋರಾಟ. ದಾರುಣ ಹತ್ಯಾಕಾಂಡವನ್ನೇ ನಡೆಸಿದರು ತ್ರೀ ಮ್ಯಾನ್ ಆರ್ಮಿ. ಮೂವರಿಗೂ ಗಾಯಗಳು ಆದವು. ಎರಡು ಬುಲೆಟ್ಸ್ ಮಹೇಶನ ಎಡ ಭುಜ ಮತ್ತು ಬಲ ತೊಡೆಗಳಲ್ಲಿ ಲಾಡ್ಜ್ ಆದವು.

ಅವಕ್ಕೆ ಜೊತೆಗೆ ತಂದಿದ್ದ ಫಸ್ಟ್ ಏಡ್ ಕಿಟ್‌ನಿಂದ ಟ್ರೀಟ್ ಮಾಡಿ, ಬ್ಯಾಂಡೇಂಜ್ ಮಾಡಿದ ಚಂದನ್.

''ಆಗಿಹೋಯಿತು ಮಹೇಶ. ಕಳ್ಳ ರ್‍ಯಾಸ್ಕಲ್‌ಗಳು ಕೆಲವರು ಜೀವ ಉಳಿದರೆ ಸಾಕೆಂದು ಪರಾರಿಯಾದರು.'' ಅನ್ನುತ್ತ ಮಹೇಶನ ಬಳಿಗೆ ಬಂದ ವಿಜಯ್, ''ಇಬ್ಬರು ಮಾತ್ರ... ಒಳಗಿನಿಂದ ಬಂದ ದೊಡ್ಡ ಮನುಷ್ಯರವರು. ಅದೆಲ್ಲಿ ಹೋದರೋ ಏನೋ ಗೊತ್ತೇ? ಆಗಲಿಲ್ಲ. ಹುಡುಕಿ ಹುಡುಕಿ ಸುಸ್ತಾದೆ'' ಎಂದು ನಿಡುಸುಯ್ದ.

ಅಷ್ಟು ಜನರನ್ನು ಕೊಂದರೂ, ಆ ಇಬ್ಬರನ್ನು ಕೊಲ್ಲದಿದುದ್ದಕ್ಕೆ ಅಷ್ಟೊಂದು ಫೀಲ್ ಮಾಡಿಕೊಳ್ಳುತ್ತಿದ್ದ ಸೆಲ್‌ನ ಸೆಕ್ಯೂರಿಟಿ ಕ್ಯಾಪ್ಟನ್ ವಿಜಯ್.

ಮುಗುಳ್ನಕ್ಕ ಮಹೇಶ ಅವನ ಆ ರೀತಿಗೆ.

ಆ ಇಬ್ಬರು ಯಾರೆಂದು ಗೊತ್ತಿತ್ತು ಅವನಿಗೆ. ಅವನೂ ಅವರಿಗಾಗಿ

ಹುಡುಕಾಡಿದವನೇ ತಾನೇ?

ಒಟ್ಟಿನಲ್ಲಿ ಎಂತಹ ಕ್ಲಿಷ್ಟ ಪರಿಸ್ಥಿತಿಯಲ್ಲೂ ಪರಾರಿ ಆಗುವುದು ಹೇಗೆಂದು ಅರಿತವರು ಗೋಲ್ಡನ್ ಗ್ಯಾಂಗ್‌ನವರು... ತನ್ನಂತೆಯೇ!

ಆದ್ದರಿಂದಲೇ ಇಬ್ಬರನ್ನು ಮಣಿಸಲಾಗಲಿಲ್ಲವೇನೋ!

# ನಮ್ಮ ಮುಂದಿನ ಪ್ರಕಟಣೆಗಳು

## ಬಿ.ವಿ. ಅನಂತರಾಮ್‌ರವರ

ಡೆತ್ ಮಾಸ್ಕ್

ಡೆಸ್ಪ್ಯಾಯರ್

ತ್ರೀ ಇನ್ ಒನ್

ಡೇಂಜರಸ್ ಲೇಡಿ

ಸ್ಮ್ಯಾಷ್ ದೆಮ್ ಡಿಯರ್ ಸ್ವೀಟಿ

ಬಿ. ವಿ. ಅನಂತರಾಮ್

# ಫೈನಲ್ ವಿಕ್ಟರಿ

ಪ್ರತಿಭ ಪ್ರಕಾಶನ

ಮಲ್ಲೇಶ್ವರಂ

ಬೆಂಗಳೂರು - 560 013